
ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ

# ಶಿಕ್ಷಣ ವಾರ್ತೆ

ಎಲ್ಲರೂ ಕಲಿಯೋಣ
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಬೆಳೆಯೋಣ

ಸಂಪುಟ – 6 ಸಂಚಿಕೆ –12 ಮೇ – 2007 ಆಂತರಿಕ ಪ್ರಸಾರ





ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಅಕ್ಷರದಾಸೋಹ

## ಬೇಸಿಗೆಯ ರಜ
## ಬಿಸಿಯೂಟದ ಮಜ
## ಬಾಳೆ ತೋಟದ ತಂಪು
## ಹಗ್ಗಿ ಸಾರಿನ ಕಂಪು . . . .



# ಚಿತ್ರಸುದ್ದಿ



ದಕ್ಷಿಣದ ಚಿರಾಪುಂಜಿ ಎಂದು ಪ್ರಖ್ಯಾತವಾದ ಊರು ಆಗುಂಬೆ. ಇಲ್ಲಿನ ಎಸ್.ವಿ.ಎಸ್. ಪ್ರೌಢಶಾಲೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು ಮಟ್ಟದ ಮಕ್ಕಳ ವಿಜ್ಞಾನ ಸಮ್ಮೇಳನ ನಡೆಯಿತು. ವಿಜ್ಞಾನಿಗಳೊಂದಿಗೆ ಸಂವಾದ, ಮಕ್ಕಳ ವಿಜ್ಞಾನಗೋಷ್ಠಿ, ಪಕ್ಷಿ ವೀಕ್ಷಣೆ, ಆಕಾಶ ವೀಕ್ಷಣೆ, ವಿಜ್ಞಾನಗೀತ ಗಾಯನ, ಚಿತ್ರ ವಿಜ್ಞಾನ, ವಿಜ್ಞಾನ ರಸಪ್ರಶ್ನೆ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ತಾಲ್ಲೂಕಿನ 300ಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. 2 ದಿನಗಳ ಕಾಲ ನಡೆದ ಈ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಡಿ.ಎಚ್. ಶಂಕರ ಮೂರ್ತಿ, ವಿಜ್ಞಾನಿ ಪ್ರೊ|| ಎಂ.ಆರ್. ನಾಗರಾಜ್, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎನ್. ಪ್ರಕಾಶ್ ಉಪಸ್ಥಿತರಿದ್ದರು. ವಿಜ್ಞಾನ ಸಮ್ಮೇಳನದ ಅಂಗವಾಗಿ ಶಾಲಾ ವಿದ್ಯಾರ್ಥಿಗಳು ಪ್ರದರ್ಶಿಸಿದ ಕಂಸಾಳೆ ನೃತ್ಯ ಹಾಗೂ ಯಕ್ಷಗಾನ ಎಲ್ಲರ ಮೆಚ್ಚುಗೆ ಗಳಿಸಿತ್ತು.

—ಜೇಶ್. ರಾಮಪ್ಪ, ಮು.ಶಿ.



ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ 16 ಲಕ್ಷ ರೂಪಾಯಿ ವೆಚ್ಚದಲ್ಲಿ ದತ್ತು ಯೋಜನೆಯಲ್ಲಿ ನಿರ್ಮಾಣವಾದ ಗೋಪಾಲಪ್ರಭು ಸಭಾಭವನ ಅಕ್ಷರ ಪ್ರೇಮದ ಪ್ರತೀಕ. ಭಟ್ಕಳ ತಾಲೂಕಿನ ಶಿರಾಲಿ ಪ್ರಾಥಮಿಕ ಶಾಲೆಯಲ್ಲಿ ಓದಿದ ಗೋಪಾಲಪ್ರಭುರವರು, ಸಭಾ ಭವನ ನಿರ್ಮಿಸಿ, ತಾವು ಕಲಿತ ಶಾಲೆಗೆ ಕೃತಜ್ಞತೆ ಸಲ್ಲಿಸಿ ಇತರರಿಗೆ ಮಾದರಿ ಎನಿಸಿದ್ದಾರೆ.

—ಸುರೇಶ ಜಿ. ನಾಯ್ಕ
ಬಿ.ಐ.ಆರ್.ಟಿ. ಭಟ್ಕಳ



2006-07ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಐಇಆರ್‌ಟಿ ಅಡಿಯಲ್ಲಿ ಗೃಹಾಧಾರಿತ ಶಿಕ್ಷಣ ಕೇಂದ್ರದಲ್ಲಿ ಶಿಕ್ಷಣ ಪಡೆಯುತ್ತಿರುವ ಮೊಳಕಾಲ್ಮುರು ತಾಲೂಕಿನ ಚಿಕ್ಕೋಬನ ಹಳ್ಳಿಯಲ್ಲಿ ಶಿಕ್ಷಕರು ಮನೆಗಳಿಗೆ ತೆರಳಿ ಮಕ್ಕಳಿಗೆ ಬೋಧಿಸುತ್ತಿರುವುದು

— ಡಿ.ಎಚ್.ರವಿ
ಕ್ಷೇತ್ರ ಸಂಪನ್ಮೂಲಸಮನ್ವಯಾಧಿಕಾರಿ
ಎಸ್.ಎಸ್.ಎ. ಮೊಳಕಾಲ್ಮುರು



2006-07ನೇ ಸಾಲಿನ ಮಕ್ಕಳ ಗಣತಿಯ ಪ್ರಕಾರ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಯ ಮುಖ್ಯವಾಹಿನಿಗೆ ತರುವ ಕಾರ್ಯಕ್ರಮವಾದ ಬೇಸಿಗೆ ರಜೆ ಅವಧಿಯ ಚಿಣ್ಣರ ಅಂಗಳ ಕಾರ್ಯಕ್ರಮ ದಿನಾಂಕ 16.04.2007ರಂದು ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಜಿ. ಬಸವರಾಜು ಇವರು ಉದ್ಘಾಟಿಸಿದರು. ಈ ಕಾರ್ಯಕ್ರಮವನ್ನು ಸಮನ್ವಯಾಧಿಕಾರಿಗಳಾದ ಎನ್.ಜಿ. ರಾಮು ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಆರ್.ಜಿ. ಕೃಷ್ಣಸ್ವಾಮಿ ಹಾಗೂ ಕೆ. ಮಂಜುನಾಥ್ ಮತ್ತು ಮುಖ್ಯ ಶಿಕ್ಷಕಿ ಎಸ್. ಗೀತಾಂಜಲಿ ಆರ್. ಸತ್ಯನಾರಾಯಣ್, ಜಿ. ಎನ್. ಕಲ್ಲೇಶಪ್ಪ, ಕೆ.ಎಸ್. ಸಿದ್ದಮ್ಮ ಸ್ವಯಂಸೇವಕಿಯಾದ ಬಿ. ಭವಾನಮ್ಮ ಹಾಜರಿದ್ದರು.

— ಎನ್.ಜಿ.ರಾಮು
ಕ್ಷೇತ್ರ ಸಂಪನ್ಮೂಲಸಮನ್ವಯಾಧಿಕಾರಿ
ಎಸ್.ಎಸ್.ಎ. ಕಡೂರು ತಾಲೂಕು

# ಚಿತ್ರಸುದ್ದಿ



ಸಾರ್ವಜನಿಕ ಶಿಕ್ಷಣ ಇಲಾಖೆಯ ಆದೇಶದನ್ವಯ ಜಗದ್ಗುರು ಅನ್ನದಾನೇಶ್ವರ ಸರಕಾರಿ ಸಂಯುಕ್ತ ಪದವಿ ಪೂರ್ವ ಮಹಾ ವಿದ್ಯಾಲಯ ಹೊರಬೂರಿನಲ್ಲಿ 2006-07ನೇ ಸಾಲಿನಲ್ಲಿ ರೆಡ್ ರಿಬ್ಬನ್ ಕ್ಲಬ್ (ಆರ್.ಆರ್.ಸಿ.)ಸ್ಥಾಪನೆಗೊಳಿಸಿ ವಿವಿಧ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು ದಿನಾಂಕ 13-03-2007 ರಂದು ಗ್ರಾಮದಲ್ಲಿ ಏಡ್ಸ್ ಜಾಗೃತಿ ಜಾಥಾ ಮಾಡಿ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆ ಮಾಡಲಾಯಿತು.

-ಎಸ್.ಎಸ್. ಕೋಟಿಗೇರ
ಮುಖ್ಯೋಪಾಧ್ಯಾಯರು



'ಆರೋಗ್ಯವೇ ಭಾಗ್ಯ' ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಇಂದು ಅನೇಕ ಕಾಯಿಲೆಗಳು ನೀರಿನ ಮೂಲದಿಂದ ಹರಡುತ್ತವೆ. ಅದರಲ್ಲಿಯೂ ಇಂದು ಕುಡಿಯುವ ನೀರು ಪ್ಲೋರೈಡ್‌ನಿಂದ ಕಲುಷಿತವಾಗಿದೆ. ಇದನ್ನರಿತು ಲಯನ್ಸ್ ಮತ್ತು ಲಯನೆಸ್ ಸಂಸ್ಥೆ ಕಡೂರು ಇವರು ಸುಮಾರು 150 ಮಕ್ಕಳು ಓದುತ್ತಿರುವ ಸ.ಹಿ.ಪ್ರಾ. ಶಾಲೆ ಜೆ.ಎನ್. ಹಳ್ಳಿಗೆ ಸುಮಾರು 13 ಸಾವಿರ ಬೆಲೆ ಬಾಳುವ ಶುದ್ಧ ಕುಡಿಯುವ ನೀರಿನ ಘಟಕವನ್ನು ನೀಡಿರುತ್ತಾರೆ.

-ಕ್ಷೇತ್ರ ಸಮನ್ವಯಾಧಿಕಾರಿಗಳು
ಕಡೂರು ತಾಲ್ಲೂಕು

16.03.07ರ ಶುಕ್ರವಾರ ಸ.ಹಿ.ಪ್ರಾ. ಶಾಲೆ, ಬೇಗುವಳ್ಳಿ, ತೀರ್ಥಹಳ್ಳಿ ತಾ|| ಶಿವಮೊಗ್ಗ ಜಿಲ್ಲೆ ಇಲ್ಲಿ ಸರಸ್ವತಿ ಪೂಜಾಕಾರ್ಯಕ್ರಮದ ನಂತರ ಎಸ್.ಡಿ.ಎಂ.ಸಿ. ಸದಸ್ಯರ ವಿಶೇಷ ಆಸಕ್ತಿಯಿಂದ ನಡೆದ "ಶಿಕ್ಷಣ ಸಂವಾದ"ದಲ್ಲಿ 1ನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಪ್ರಾರಂಭಿಸುವ ಬಗ್ಗೆ ಮುಕ್ತ ಚರ್ಚೆ ನಡೆಯಿತು. ಸರ್ಕಾರವು ಬರುವ ಶೈಕ್ಷಣಿಕ ವರ್ಷದಿಂದ 1ನೇ ತರಗತಿ ಇಂಗ್ಲಿಷ್ ಕಲಿಕೆಯನ್ನು ಆರಂಭಿಸಲು ತೀರ್ಮಾನಿಸಿರುವುದು ಉತ್ತಮ ನಿರ್ಧಾರವಾಗಿದೆ. ಶಿಕ್ಷಕರೂ ಕೂಡಾ ವಿಶೇಷ ಆಸಕ್ತಿವಹಿಸಿ ಇಂಗ್ಲಿಷ್ ಕಲಿಸಿದರೆ ಈ ಕಾರ್ಯಕ್ರಮ ಯಶಸ್ವಿಯಾಗುತ್ತದೆ. ಇದಕ್ಕಾಗಿ ಪೋಷಕರೂ ತಮ್ಮಿಂದಾದ ಸಹಕಾರ ನೀಡಲು ಸಿದ್ಧ ಎಂಬ ಅಭಿಪ್ರಾಯ ಮೂಡಿಬಂತು. ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಟಿ. ಮಂಜುನಾಥ, ಮು.ಶಿ., ಟಿ.ಟಿ. ಮಂಜುನಾಥ, ಸಿ.ಆರ್.ಪಿ ಮರಿಯಪ್ಪ ಪಾಲ್ಗೊಂಡಿದ್ದರು. ಡಿ.ಎಸ್.ಇ.ಆರ್.ಟಿ.ಯ ನಿರ್ದೇಶನದಂತೆ ಶಿಕ್ಷಕ ಟಿ. ಬಸವಣ್ಣಪ್ಪ ಈ ಅಧ್ಯಯನ ಕೈಗೊಂಡು ಧ್ವನಿಮುದ್ರಣ ಮಾಡಿಕೊಂಡರು.



- ಟಿ.ಬಸವಣ್ಣಪ್ಪ
ಸ.ಹಿ.ಪ್ರಾ.ಶಾಲೆ ಗುತ್ತಿ ಎಡೇಹಳ್ಳಿ ತೀರ್ಥಹಳ್ಳಿ ತಾಲೂಕು

ದಿನಾಂಕ 9.3.2007ರಂದು ಸ.ಮಾ.ಹಿ. ಪ್ರಾ. ಶಾಲೆ ಬಳ್ಳೇನಹಳ್ಳಿ, ಕೆ.ಆರ್.ಪೇಟೆ ತಾ|| ಮಂಡ್ಯ ಜಿಲ್ಲೆಯಲ್ಲಿ ಶಾಲಾ ಆವರಣಗೋಡೆ ಪ್ರಾರಂಭೋತ್ಸವ ಹಾಗೂ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು. ಮಂಡ್ಯ ಜಿಲ್ಲೆಯ ಉಪನಿರ್ದೇಶಕರಾದ ಕುಮಾರಸ್ವಾಮಿಯವರು ಆವರಣಗೋಡೆ ಪ್ರಾರಂಭೋತ್ಸವ ನೆರವೇರಿಸಿದರು. ತಾ|| ಪಂಚಾಯಿತಿ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷರಾದ ಹಿ.ಕೆ. ಜಯಕೃಷ್ಣೇಗೌಡರು ಮಕ್ಕಳಿಂದ ನಡೆಸಲ್ಪಟ್ಟ ಕೃಷ್ಣಗಾರುಡಿ ಎಂಬ ಪೌರಾಣಿಕ ನಾಟಕದ ಉದ್ಘಾಟನೆ ನೆರವೇರಿಸಿದರು.

- ಅಂಚಿಸಿದ್ಧಸ್ವಾಮಿ
ಮುಖ್ಯ ಶಿಕ್ಷಕರು



# ಗುಬ್ಬಿಗೂಡು



ಹಾರಿಬಂತು ಗುಬ್ಬಿ ಒಂದು
ಕಂಡಿತೊಂದು ಶಾಲೆ ಮಾಡು
ಕಟ್ಟಿತಲ್ಲೆ ಗೂಡು ನೋಡು

ಹುಲ್ಲುಕಡ್ಡಿ ನಾರು ಗೀರು
ಸಾಕು ಅದುವೆ ಪರಿಕರ
ಬದುಕಲದುವೆ ಹಂದರ

ಗೂಡು ಕಟ್ಟಿ ಕೈಯ ತಟ್ಟಿ
ಕರೆದು ಅದರ ಗೆಳತಿಯ
ಮೊಟ್ಟೆ ಇಟ್ಟು ಕಾವುಕೊಟ್ಟು

ಮರಿಯ ಕಂಡು ಹರ್ಷ ಪಟ್ಟು
ಕಾಳು ತರಲು ಗುಬ್ಬಿ ಹೊರಟು
ಕಣ್ಮಣಿಗೆ ಗುಟುಕು ಕೊಟ್ಟು

ಪುಟ್ಟಮರಿಯ ದೊಡ್ಡ ಮಾಡಿ
ರೆಕ್ಕೆಯೊಳಗೆ ಮರೆಯ ಮಾಡಿ
ಹಾರಬಯಸೆ ಪ್ರೀತಿತೋರಿ

ಬದುಕ ಕಲಿಸಿ ಬಿಡುವುದು
ಗುಬ್ಬಿಗಿಲ್ಲ ಯಾರು ಗುರುವು
ಯಾವ ಶಾಲೆ ಯಾರ ಪಾಠ

ಪ್ರಕೃತಿ ಜೊತೆಗೆ ಕಲಿತಪಾಠ
ತಾನು ಕಲಿತು ಮರಿಗೂ ಕಲಿಸಿ
ಚಂದದಿಂದ ಬದುಕಿತು

ಕಲಿತು ಕಲಿಸಿ ಬದುಕೊ ರೀತಿ
ಮನುಜಗಿದುವೆ ಒಳ್ಳೆ ನೀತಿ
ಬಾಳ ಬೆಳಗೊ ಸಹಜ ಪ್ರೀತಿ



ವೈ. ಗಿರಿಜಾ ದಿವಟರ,
ಶಿಕ್ಷಕಿ, ಸ.ಹಿ.ಪ್ರಾ. ಶಾಲೆ
ಕೆಂಚ್ಯಹಳ್ಳಿ, ಹಾಸನ

www.scooleducation.kar.nic.in
Published by : commissioner for Public Instruction and State Project Director, Sarva Shikshana Abhiyana, Karnataka
Nrupatunga Road, Bengaluru-560 001. Ph : 080 - 2224 6976
Printed at : Abhimaani Publication Ltd., Dr. Rajkumar Road, Rajajingar, Bengaluru - 560 010, Ph : 23123141

# ಬರ ಪೀಡಿತ ಮಧುಗಿರಿ ಜಿಲ್ಲೆಯಲ್ಲಿ ಬೇಸಿಗೆ ರಜೆಯ ಅಕ್ಷರದಾಸೋಹ



**ಬರ ಪೀಡಿತ ಜಿಲ್ಲೆಗಳಲ್ಲಿ ಬೇಸಿಗೆಯ ರಜೆಯಲ್ಲಿ ನಿರಂತರ ಅಕ್ಷರ ದಾಸೋಹ ಕಾರ್ಯಕ್ರಮ ನಡೆದಿದ್ದು ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಕೊರಟಗೆರೆ ಹಾಗೂ ಶಿರಾ ತಾಲೂಕುಗಳ ಅಕ್ಷರ ದಾಸೋಹದ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಅಕ್ಷರ ದಾಸೋಹ ನಿರ್ವಹಣಾಧಿಕಾರಿಗಳು ಅಲ್ಲಿನ ವಿವರಗಳನ್ನು ನೀಡಿದ್ದಾರೆ**

ಕೊರಟಗೆರೆ ತಾಲ್ಲೂಕಿನಲ್ಲಿ ಸರ್ಕಾರಿ ಶಾಲೆಗಳಲ್ಲಿ 242 ಕೇಂದ್ರಗಳು ಹಾಗೂ ಅನುದಾನಿತ ಶಾಲೆಗಳಲ್ಲಿ ಮೂರು ಕೇಂದ್ರಗಳು ಅಕ್ಷರ ದಾಸೋಹದಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಸರ್ಕಾರಿ ಶಾಲೆಗಳಿಂದ ಒಟ್ಟು 18,100 ಮತ್ತು ಅನುದಾನಿತ ಶಾಲೆಗಳಿಂದ 677 ವಿದ್ಯಾರ್ಥಿಗಳು ಫಲಾನುಭವಿಗಳಾಗಿದ್ದಾರೆ. 545 ಅಡುಗೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗಾಗಲೇ 15,000 ಮಕ್ಕಳಿಗೆ ತಟ್ಟೆ ಲೋಟ ಮತ್ತು 55 ಶಾಲೆಗಳಿಗೆ ಕುಕ್ಕರ್, ದಾನಿಗಳಿಂದ ಒದಗಿಸಲಾಗಿದೆ.

ಬರಪೀಡಿತ ತಾಲ್ಲೂಕು ಎಂದು ಘೋಷಣೆಯಾದ ಪ್ರಯುಕ್ತ ಎಲ್ಲಾ 242 ಅಡುಗೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು 10500 ಮಕ್ಕಳು ಫಲಾನುಭವಿಗಳಾಗಿದ್ದಾರೆ. ಏಪ್ರಿಲ್ ಮತ್ತು ಮೇ ತಿಂಗಳಿಗೆ ಈ ಕೆಳಗಿನಂತೆ ಆಹಾರ ಧಾನ್ಯಗಳನ್ನು ಶಾಲೆಗೆ ಒದಗಿಸಲಾಗಿದೆ. ದಿನಾಂಕ 19–4–2007 ರಂದು ಯೋಜನಾನಿರ್ದೇಶಕರು, ಸರ್ವಶಿಕ್ಷಾ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರಾದ ಅತೀಕ್‌ರವರು ಭೇಟಿ ನೀಡಿ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

### ಬೇಸಿಗೆ ರಜೆ ಬಿಸಿಯೂಟಕ್ಕೆ ತಾಲೂಕಿಗೆ ಒದಗಿಸಿದ ಆಹಾರ ಸಾಮಗ್ರಿಗಳು

ಅಕ್ಕಿ– 1–5 ತರಗತಿ – 212 ಕ್ವಿಂಟಾಲ್

6–7 ತರಗತಿ–109 ಕ್ವಿಂಟಾಲ್

ಬೇಳೆ – 25 ಕ್ವಿಂಟಾಲ್

ಉಪ್ಪು – 40 ಕೆ.ಜಿ.

ಎಣ್ಣೆ – 400 ಲೀಟರ್

– ಕೆ.ಜಿ.ರಂಗಯ್ಯ
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕೊರಟಗೆರೆ





# ಶಿರಾ ತಾಲೂಕಿನ ಬೇಸಿಗೆ ಅಕ್ಷರ ದಾಸೋಹ



-ಜಿ.ಎಂ.ಹನುಮಂತಪ್ಪ,
ಸಹಾಯಕ ನಿರ್ದೇಶಕರು,ಅಕ್ಷರ ದಾಸೋಹ,
ಶಿರಾ,ಮಧುಗಿರಿ ಶೈಕ್ಷಣಿಕ ಜಿಲ್ಲೆ

ಕಸಬಾ-1 ವ್ಯಾಪ್ತಿಯ ಹಿಎಲ್‌ಪಿಎಸ್ ನ್ಯಾಮಗೆರೆ ಶಾಲೆಯಲ್ಲಿ 2006-07ನೇ ಸಾಲಿನ ಬೇಸಿಗೆ ರಜೆ ಅವಧಿಯಲ್ಲಿ ಬಿಸಿಯೂಟ ಯೋಜನೆ ಹಾಗೂ ಪರಿಹಾರ ಬೋಧನೆ ಕಾರ್ಯಕ್ರಮವನ್ನು ದಿನಾಂಕ 11-4-2007ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಒಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪೋಷಕರಿಗೆ ಭಿತ್ತಿಪತ್ರಗಳು, ಸಭೆ, ಟಾಂಟಾಂ, ಹಾಗೂ ಮಕ್ಕಳ ಮೂಲಕ ಮನವರಿಕೆ ಮಾಡಿಕೊಳ್ಳಲಾಯಿತು. ಇದಕ್ಕೆ ಸ್ಪಂದಿಸಿದ ಪೋಷಕರು ಉತ್ತಮವಾಗಿ ಮಕ್ಕಳನ್ನು ಶಾಲೆಗೆ ತಪ್ಪದೇ ಕಳಿಸುತ್ತಿದ್ದಾರೆ. ಮಕ್ಕಳಿಗೆ ಆಟ, ಪರಿಹಾರಬೋಧನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಕ್ಕಳು ಆಸಕ್ತಿಯಿಂದ ಭಾಗವಹಿಸುತ್ತಿದ್ದು, ಕಲಿಯುವಿಕೆಯಲ್ಲಿ ಆಸಕ್ತಿ ವಹಿಸುತ್ತಿದ್ದಾರೆ. ಒಟ್ಟು 31 ಮಕ್ಕಳು ದಾಖಲಾತಿಯಾಗಿದ್ದಾರೆ ಇವರಲ್ಲಿ ಸರಾಸರಿ 27 ರಿಂದ 28 ಮಕ್ಕಳು ಸರಾಸರಿ ಹಾಜರಿ ಇದ್ದಾರೆ. ಒಟ್ಟಾರೆ ಈ ಒಂದು ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದೆ. ಮಕ್ಕಳಿಗೆ ಶಾಂತಿಮಂತ್ರದೊಂದಿಗೆ ಮಧ್ಯಾಹ್ನ 1-00 ಗಂಟೆಗೆ ಸರಿಯಾಗಿ ಬಿಸಿಯೂಟವನ್ನು ನೀಡಲಾಗುತ್ತಿದೆ. ಮಕ್ಕಳ ಸ್ವಚ್ಛತೆ ಹಾಗೂ ಶಾಲಾ ವಾತಾವರಣದ ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ನಿಗದಿಪಡಿಸಿದ ಪ್ರಮಾಣದಲ್ಲಿ ಆಹಾರ ಪದಾರ್ಥಗಳು, ತರಕಾರಿಗಳನ್ನು ಒದಗಿಸಿ ಆಹಾರವು ಉತ್ತಮ ಗುಣಮಟ್ಟದಲ್ಲಿರುವಂತೆ ನೋಡಿಕೊಳ್ಳಲಾಗುತ್ತಿದೆ. ಒಟ್ಟಾರೆ ಈ ಎಲ್ಲಾ ಅಂಶಗಳನ್ನು ವ್ಯವಸ್ಥಿತ ರೀತಿಯಲ್ಲಿರುವಂತೆ ನೋಡಿಕೊಳ್ಳುವ ಪ್ರಯತ್ನ ನಮ್ಮದಾಗಿದೆ.

-ಟಿ. ತಿಮ್ಮೇಗೌಡ
ಮುಖ್ಯ ಶಿಕ್ಷಕರು
ನ್ಯಾಮಗೆರೆ

ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಗುಮ್ಮನಹಳ್ಳಿ ಗೊಲ್ಲರಹಟ್ಟಿ, ಶಿರಾ ತಾಲ್ಲೂಕು ಇಲ್ಲಿ ಬೇಸಿಗೆ ರಜಾ ಅವಧಿಯಲ್ಲಿ ಸರಾಸರಿಯಾಗಿ ದಾಖಲಾತಿ 131ಕ್ಕೆ (1 ರಿಂದ 7ನೇ ತರಗತಿಯವರೆಗೆ) 120 ಮಕ್ಕಳು ಬಿಸಿ ಊಟದ ಫಲಾನುಭವಿಗಳಾಗಿದ್ದು 2 ರಿಂದ 7ನೇ ತರಗತಿಯವರೆಗೆ 42 ಮಕ್ಕಳಿಗೆ ಬಿಸಿಯೂಟದ ನಂತರ ಸ್ವಯಂಸೇವಕರಿಂದ ಪರಿಹಾರ ಬೋಧನೆ ಕೈಗೊಳ್ಳಲಾಗಿದೆ.

ಒಂದು ಹೆಚ್ಚುವರಿ ಕೊಠಡಿ ನಿರ್ಮಾಣವಾಗುತ್ತಿದ್ದು ಉಳಿದಂತೆ ಮೂರು ಕೊಠಡಿಗಳಲ್ಲಿ ಎರಡು ಕೊಠಡಿಗಳು ದೊಡ್ಡ ಪ್ರಮಾಣದ ದುರಸ್ತಿ ಕಾಮಗಾರಿ ನಡೆಯುತ್ತಿದೆ. ಆದ್ದರಿಂದ ಮಕ್ಕಳಿಗೆ ಶಾಲಾ ಕೈತೋಟ ಬಾಳೆವನದಲ್ಲಿ ಬಿಸಿಯೂಟದ ವ್ಯವಸ್ಥೆಯನ್ನು ಸ್ವಚ್ಛತೆಯಿಂದ ನಿರ್ವಹಿಸಲಾಗುತ್ತಿದೆ.

ಬಿಸಿಯೂಟದ ನಂತರ ಮಕ್ಕಳ ಆರೋಗ್ಯ ವರ್ಧನೆಗಾಗಿ ವಿಟಮಿನ್ ಮಾತ್ರೆಗಳನ್ನು ನೀಡಲಾಗುತ್ತಿದೆ. ಅಕ್ಷರ ದಾಸೋಹದ ಜವಾಬ್ದಾರಿಯನ್ನು ಸ್ವಯಂ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹಾಗೂ ಸದಸ್ಯರು ನೋಡಿಕೊಳ್ಳುತ್ತಿದ್ದು ಪ್ರತಿದಿನದ ತರಕಾರಿ, ದವಸ, ಧಾನ್ಯಗಳನ್ನು ಖುದ್ದಾಗಿ ಅಧ್ಯಕ್ಷರೇ ಪರಿಶೀಲಿಸುತ್ತಾರೆ. ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿದ್ದಾರೆ.

-ಹೆಚ್.ಸಿ.ಹಿರಿಯಪ್ಪ
ಮುಖ್ಯ ಶಿಕ್ಷಕರು



# ಗ್ರಾಮೀಣ ಮಕ್ಕಳಿಗಾಗಿ ವಿಜ್ಞಾನ ಶಿಬಿರ



ಗ್ರಾಮೀಣ ಮಕ್ಕಳಲ್ಲಿ ಆತ್ಮಸ್ಥೈರ್ಯ, ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಹಾಗೂ ವಿಜ್ಞಾನ ವಿಷಯದ ಬಗ್ಗೆ ಮಕ್ಕಳಲ್ಲಿ ಆಸಕ್ತಿಯನ್ನು ಬೆಳೆಸುವ ಸಲುವಾಗಿ ಹತ್ತನೇ ತರಗತಿಯ ಪರೀಕ್ಷೆಗೆ ಹಾಜರಾದ ಶಿರಾ ತಾಲ್ಲೂಕಿನ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಉಚಿತವಾದ ವಿಜ್ಞಾನ ಶಿಬಿರವನ್ನು ಸಂಘಟಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ಶಿರಾ, ತಾಲ್ಲೂಕು ವಿಜ್ಞಾನ ಕೇಂದ್ರ ಶಿರಾ, ಕೆ.ಆರ್. ಎಸ್. ಪ್ರತಿಷ್ಠಾನ ಬೆಂಗಳೂರು, ಶಾರದಾ ಮಠ ಬೆಂಗಳೂರು, ಸ॥ಪ॥ಪೂ॥ಕಾಲೇಜು ಶಿರಾ ಇವರುಗಳ ಸಂಯುಕ್ತಾಶ್ರಯದಲ್ಲಿ ಶಿರಾ ನಗರದ ಸ॥ಪ॥ಪೂ॥ಕಾಲೇಜಿನ ಕುವೆಂಪು ಬ್ಲಾಕ್‌ನಲ್ಲಿ ದಿನಾಂಕ 16-04-07ರಿಂ ದ 21-04-07ರವರೆಗೆ ವಿಜ್ಞಾನ ಶಿಬಿರದ ಕಾರ್ಯಕ್ರಮ ಮೂಡಿಬಂದಿತು.

ಪ್ರತಿ ದಿನ ಬೆಳಗಿನ ಅಧಿವೇಶನದಲ್ಲಿ ವಿಜ್ಞಾನಿಗಳಿಂದ ವಿಷಯ ಮಂಡನೆಯ ವಿಜ್ಞಾನ ಗೋಷ್ಠಿ ನಡೆಸಲಾಯಿತು ಇದು ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚಾಗಲು ಅನುಕೂಲಕರವಾಗಿತ್ತು.
ದಿನಾಂಕ 16-04-07 ರಂದು ವಿಜ್ಞಾನಿಗಳಾದ ಡಾ॥ ಎಸ್. ಸುಬ್ರಹ್ಮಣ್ಯಂ ಅವರು ಮತ್ತು ಶಾಸಕರು ಆದ ಟಿ. ಸತ್ಯನಾರಾಯಣ್‌ರವರು ದೀಪ ಹಚ್ಚಿ ಬೆಳಗಿಸುವುದರ ಮೂಲಕ ಶಿಬಿರಕ್ಕೆ ಚಾಲನೆಯನ್ನು ನೀಡಿದರು.

ಗ್ರಾಮೀಣ ಮಕ್ಕಳಿಗೆ ಹೆಚ್ಚು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನುರಿತ ವೈಜ್ಞಾನಿಕ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿದ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಪ್ರಖ್ಯಾತ ವಿಜ್ಞಾನಿಗಳಾದ ಪ್ರೊ. ಜೆ.ಜೆ.ರಾವ್, ಪ್ರೊ. ಕೆ.ಪಿ. ಜೆ. ರೆಡ್ಡಿ, ವಿಜ್ಞಾನಿ, ಡಾ॥ ಟಿ. ಜಗದೀಶ್, ಪ್ರೊ. ಎಂ. ಎಸ್. ಭಟ್, ಬೆಂಗಳೂರಿನ ಕೃಷಿ ವಿದ್ಯಾಲಯದ ಡಾ॥ ನಟರಾಜ್ ಕರಬ ಮತ್ತು ತುಮಕೂರಿನ ಎಸ್.ಐ.ಟಿ. ಕಾಲೇಜಿನ ಉಪನ್ಯಾಸಕರು ಆದ ಪ್ರೊ. ಕುಮಾರ್ ತಮ್ಮ ಉಪನ್ಯಾಸದ ಮೂಲಕ ಹೊಸ ಹೊಸ ವಿಷಯಗಳನ್ನು ತಿಳಿಸಿ ಮಕ್ಕಳ ಮೆಚ್ಚುಗೆಗೆ ಪಾತ್ರರಾದರು. ದ್ಯುತಿ ಸಂಶ್ಲೇಷಣೆ ಮತ್ತು ಅದರ ಉಪಯೋಗಗಳು, ಜೈವಿಕ ತಂತ್ರಜ್ಞಾನ, ಪ್ರೋಟೀನ್ ಆಧಾರಿತ ಗಣಕಯಂತ್ರ ಬಾಹ್ಯಾಕಾಶ ತಂತ್ರಜ್ಞಾನದ ವಿಷಯಗಳು ನ್ಯಾನೋ ಟೆಕ್ನಾಲಜಿ ಸ್ವಯಂ ಚಾಲಿತ ವಿಮಾನಗಳ ಬಗ್ಗೆ ಮತ್ತು ನಕ್ಷತ್ರಗಳ ಹುಟ್ಟು ಮತ್ತು ಸಾವು ಮುಂತಾದ ವೈಜ್ಞಾನಿಕ ವಿಷಯಗಳ ಬಗ್ಗೆ ಅಂತರಾಷ್ಟ್ರೀಯ ಮಟ್ಟದ ಏಳು ಮಂದಿ ಪ್ರಖ್ಯಾತ ವಿಜ್ಞಾನಿಗಳು ಗ್ರಾಮೀಣ ಮಕ್ಕಳೊಂದಿಗೆ ಬೌದ್ಧಿಕ ವಿಚಾರಗಳನ್ನು ಹಂಚಿಕೊಂಡು ಮಕ್ಕಳಲ್ಲಿ ಹೆಚ್ಚು ಆಸಕ್ತಿಯನ್ನು ಮೂಡಿಸಿದರು.
ಪ್ರತಿದಿನ ಎರಡನೇ ಅಧಿವೇಶನದಲ್ಲಿ ಏಳೇಳು ಜನರ ಹದಿನಾಲ್ಕು ತಂಡಗಳಲ್ಲಿ ಪ್ರತ್ಯೇಕ ವಿಷಯ ಮಂಡನೆ ಹಾಗೂ ಚರ್ಚೆಗೆ ಉತ್ತಮ ಅವಕಾಶವನ್ನು ಶಿಬಿರವು ಕಲ್ಪಿಸಿ ಗ್ರಾಮೀಣ ಮಕ್ಕಳಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸಲಾಯಿತು. ವಿಜ್ಞಾನಿಗಳೊಂದಿಗೆ ಮಕ್ಕಳು ನಡೆಸಿದ ಸಂವಾದ ಕಾರ್ಯಕ್ರಮವು ಆಕರ್ಷಣೆಯಾಗಿತ್ತು.
ಇಂತಹ ಅಪರೂಪದ ವಿಜ್ಞಾನ ಶಿಬಿರದ ರೂವಾರಿ ಬೆಂಗಳೂರಿನ ಕೆ. ಆರ್. ಎಸ್. ಪ್ರತಿಷ್ಠಾನದ ಸಂಚಾಲಕರಾದ ಎ.ಆರ್. ಶ್ರೀನಿವಾಸಯ್ಯನವರು.
ಈ ಸಮಾರಂಭದಲ್ಲಿ ಶಾಸಕರಾದ ಟಿ. ಸತ್ಯನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು. ಎ.ಆರ್. ಶ್ರೀನಿವಾಸಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಕೃಷ್ಣಮೂರ್ತಿ ಸ॥ಪ॥ಪೂ॥ ಕಾಲೇಜಿನ ಪ್ರಾಂಶುಪಾಲರಾದ ಅಶೋಕ್‌ಕುಮಾರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು. ತಾಲ್ಲೂಕು ವಿಜ್ಞಾನ ಕೇಂದ್ರದ ಸಂಚಾಲಕರಾದ ಟಿ. ಶ್ರೀನಿವಾಸಮೂರ್ತಿ, ಸಂಪನ್ಮೂಲ ವ್ಯಕ್ತಿಗಳಾದ ಎ.ಟಿ. ಕಚ್ಚಿ, ಎಂ.ಎಸ್. ಕೆಂಪಣ್ಣ, ಹೆಚ್.ಟಿ. ಲೋಕೇಶ್, ಎಂ.ಡಿ. ವಿಜಯ್ ಕುಮಾರ್ ಇವರುಗಳ ಸತತ ಪಾಲ್ಗೊಳ್ಳುವಿಕೆ ಕ್ರಮಬದ್ಧ ನಿರ್ವಹಣೆ ಶಿಬಿರದ ಯಶಸ್ವಿನ ಪಥದಕಡೆ ಸಾಗಲು ಎಲ್ಲ ರೀತಿಯ ಅನುವು ಮಾಡಿಕೊಟ್ಟಿತು.

– ಕೃಷ್ಣಮೂರ್ತಿ
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಶಿರಾ ತಾ॥ ತುಮಕೂರು ಜಿಲ್ಲೆ.





# ಸಂತೆಮೇಳ ಎಂಬ ಗಣಿತ ಸಮ್ಮೇಳನ ಆದದ್ದು ಹೀಗೆ....


- ಟಿ.ಎಲ್.ಆಂಜಿನಪ್ಪ
ಕ್ಷೇತ್ರ ಶಿಕ್ಷಣಾಧಿಕಾರಿ





ಪರಿಕಲ್ಪನೆ :
ಎಸ್.ಪಿ.ಚಂದ್ರಶೇಖರಪ್ಪ
ಶಿಕ್ಷಣ ಸಂಯೋಜಕ


2005-06ನೇ ಸಾಲಿನ ಕೆ.ಎಸ್.ಕ್ಯೂ. ಇ. ಫಲಿತಾಂಶದ ವಿಶ್ಲೇಷಣೆ ಮಾಡಿದಾಗ ಶ್ರೀರಾಂಪುರ ಹಾಗೂ ಎಸ್. ನೇರಲಕೆರೆ ಕ್ಲಸ್ಟರ್‌ನ ಬಹುತೇಕ ಶಾಲೆಗಳು ಗಣಿತ ವಿಷಯದಲ್ಲಿ ಹಿಂದೆ ಉಳಿದಿರುವುದು ತಿಳಿಯಿತು. ಇದಕ್ಕೆ ಸಂಬಂಧಿಸಿದಂತೆ ಶಿಕ್ಷಣಸಂಯೋಜಕರಾದ ಎ.ಪಿ. ಚಂದ್ರಶೇಖರಪ್ಪ ಮತ್ತು ಸ್ಥಳೀಯ ಸಿ.ಆರ್.ಪಿ.ಗಳು ಸೇರಿ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಆಲೋಚಿಸಿ ಒಂದು ಹೊಸ ವಾತಾವರಣವನ್ನು ನಿರ್ಮಾಣ ಮಾಡಬೇಕೆಂಬ ಹಂಬಲ ವ್ಯಕ್ತಪಡಿಸಿದರು. ಹಾಗಾಗಿ ಅವರು ತಮ್ಮ ಕ್ರಿಯಾ ಯೋಜನೆಯಲ್ಲಿ ಗಣಿತ ಶಿಕ್ಷಕರಿಗೆ ತರಬೇತಿ, ಹೊಸ-ಹೊಸ ಕಲಿಕಾ ಸಾಮಗ್ರಿ ತಯಾರಿಕೆ ಹಾಗೂ ಒಂದು ಗಣಿತ ಸಮಾವೇಶವನ್ನು ನಡೆಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದರು. ಇದು ನನ್ನ ಮನಸ್ಸಿನಲ್ಲಿ ವಿಶೇಷ ಆಸಕ್ತಿಯನ್ನು ತಂದಿತು. ಇಲಾಖೆಯ ಯಾವ ಅನುದಾನವನ್ನು ಅಪೇಕ್ಷಿಸದೇ ಸ್ಥಳೀಯ ಶಿಕ್ಷಕರ ಆಸಕ್ತಿಯನ್ನೇ ಬಂಡವಾಳ ಮಾಡಿಕೊಂಡು ಈ ರೀತಿ ಕಾರ್ಯಕ್ರಮಗಳನ್ನು ಮಾಡಲು ಹಾಗೂ ಇಲಾಖೆಯ ನಿಜವಾದ ಆಲೋಚನೆಗಳಿಗೆ ಸಾಕಾರ ರೂಪವನ್ನು ಕೊಡಲು ಇಲ್ಲಿನ ಶಿಕ್ಷಕರು ಮುಂದೆ ಬಂದಿದ್ದರಿಂದ ಮುಖ್ಯಶಿಕ್ಷಕರ ಸಭೆ ನಡೆಸಿದೆ. ದಿನಾಂಕ 22 ಮತ್ತು 23ರ ಫೆಬ್ರವರಿ 07ರ ಎರಡು ದಿನಗಳು ಶ್ರೀರಾಂಪುರ ಹೋಬಳಿಯ ಶಿಕ್ಷಕರಿಗೆ ಸಂಭ್ರಮದ ದಿನಗಳು.

ಇಲ್ಲಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯಕ್ರಮಗಳು :

ಮಕ್ಕಳ ಸಂತೆ ಮೇಳ

ಪುಸ್ತಕ-ಪ್ರದರ್ಶನ

ಪುಟ : 19ಕ್ಕೆ...





## ವಜ್ರಮಹೋತ್ಸವ ಸಂಭ್ರಮದಲ್ಲಿ ಓಬಳಾಪುರದ ಪ್ರಾಥಮಿಕ ಶಾಲೆ




ಹೊಸದುರ್ಗ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆ ಓಬಳಾಪುರ ಶಾಲೆಯು ಶಿಕ್ಷಣ ಕ್ಷೇತ್ರದಲ್ಲಿ ತನ್ನ ಸಾರ್ಥಕ 60 (ಅರವತ್ತು) ವಸಂತಗಳನ್ನು ಪೂರೈಸಿ ಉತ್ತಮ ಸಾರ್ಥಕ ಸೇವೆಯಲ್ಲಿ ಮುನ್ನಡೆಯುತ್ತಿರುವ ಶುಭ ಸಂದರ್ಭದ ಸವಿ ನೆನಪಿಗಾಗಿ ಹಮ್ಮಿಕೊಂಡ ಶಾಲಾ ವಜ್ರ ಮಹೋತ್ಸವ ಕಾರ್ಯಕ್ರಮ ವಿವರ ಈ ಕೆಳಕಂಡಂತಿದೆ. ಶಾಲಾ ವಜ್ರಮಹೋತ್ಸವ ಜ್ಞಾಪಕಾರ್ಥ ಗ್ರಂಥಾಲಯ ಕಟ್ಟಡ, ಶಾಲಾ ಆವರಣ ಗೋಡೆ, ಶಾಲಾ ಆಟದ ಮೈದಾನ ವ್ಯವಸ್ಥೆ, 60 ಪ್ರಸಿದ್ಧ ರಾಷ್ಟ್ರನಾಯಕರ ಭಾವಚಿತ್ರ ಅನಾವರಣ,

ಶಾಲಾವರಣದಲ್ಲಿ 60 ಸಸಿಗಳನ್ನು ನೆಡುವ ಕಾರ್ಯಕ್ರಮ, ಬಯಲು ರಂಗಮಂದಿರ ಭೂಮಿ ಪೂಜೆ ಕಾರ್ಯಕ್ರಮ, ಶಾಲಾ ಗೋಡೆ ಬರಹ ಹಾಗೂ ಸೌಂದರ್ಯೀಕರಣ, ಶಾಲಾ ವಜ್ರ ಮಹೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮ. ಶಾಲಾ ಆಟೋಟ ಸಾಮಗ್ರಿ ಖರೀದಿಸುವಿಕೆ. ಇತ್ಯಾದಿ ಕಾರ್ಯಕ್ರಮಗಳಿಗೆ ಒಟ್ಟು ನಾಲ್ಕು ಲಕ್ಷದ ಮೂವತ್ತೆರಡು ಸಾವಿರ ರೂಪಾಯಿಗಳನ್ನು ಸಮುದಾಯ, ದಾನಿಗಳು, ಸರ್ಕಾರದ ನೆರವಿನಿಂದ ಶಾಲೆಗೆ ಈ ಸಂದರ್ಭದಲ್ಲಿ ವೆಚ್ಚ ಮಾಡಲಾಗಿದೆ. ಶಾಲೆಯ ವಜ್ರಮಹೋತ್ಸವ ಆಚರಣೆಗೆ ಆಹ್ವಾನಿತ ಗಣ್ಯರಾದ ಶ್ರೀ ಟಿ.ಟಿ. ಗೋವಿಂದಪ್ಪ ಶಾಸಕರು ಹೊಸದುರ್ಗ ತಾ|| ಎಸ್. ಟಿ. ಸಿದ್ರಾಮಯ್ಯ ಅಧ್ಯಕ್ಷರು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಈ ಕಾರ್ಯಕ್ರಮದ ಸಂಪೂರ್ಣ ಯಶಸ್ಸಿಗೆ ಗ್ರಾಮದ ಮುಖಂಡರೂ ಶಾಲಾ ವಜ್ರಮಹೋತ್ಸವ ಸಮಿತಿಯ ಅಧ್ಯಕ್ಷರೂ ಆದ ಕೆ. ಹನುಮಂತಯ್ಯನವರು ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಆರ್. ಪ್ರಭಾಕರ್ ಹಾಗೂ ಸರ್ವ ಸದಸ್ಯರ ಸಹಕಾರ ಕಾರಣವಾಗಿದೆ.


- ಸಿ.ಜಯಕುಮಾರ್ ಮು.ಶಿ
ಓಬಳಾಪುರ ಹೊಸದುರ್ಗ



**ಪ್ರಧಾನ ಸಂಪಾದಕರು**

**ಎಂ. ಮದನ್‌ಗೋಪಾಲ್,** ಆಯುಕ್ತರು, ಸಾ.ಶಿ.ಇ.

**ಕಾರ್ಯನಿರ್ವಾಹಕ ಸಂಪಾದಕರು**

**ಎಲ್. ಕೆ. ಅತೀಕ್,** ರಾಜ್ಯಯೋಜನಾ ನಿರ್ದೇಶಕರು, ಸ.ಶಿ.ಅ.

**ಸದಸ್ಯರು**

**ಟಿ. ಎಂ. ಕುಮಾರ್,** ನಿರ್ದೇಶಕರು, ಪರೀಕ್ಷಾಮಂಡಳಿ

**ಜಿ. ಚಂದ್ರಶೇಖರ್,** ನಿರ್ದೇಶಕರು ಪ್ರಾಥಮಿಕ ಶಿಕ್ಷಣ

**ಚಿದ್ರೆ ಶಂಕರಯ್ಯಸ್ವಾಮಿ,** ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.

**ಮೀರ್ ಒಬೇದುಲ್ಲಾ,** ನಿರ್ದೇಶಕರು, ಈಶಾನ್ಯವಲಯ

**ಉಷಾ,** ನಿರ್ದೇಶಕರು, ವಾಯುವ್ಯವಲಯ

**ಉಷಾದೇವಿ,** ನಿರ್ದೇಶಕರು, ಇತರೆ ಪರೀಕ್ಷೆಗಳು

**ಈಶ್ವರಭಟ್,** ನಿರ್ದೇಶಕರು, ಸ.ಶಿ.ಅ.

**ಸತ್ಯನಾರಾಯಣ ರೆಡ್ಡಿ,** ನಿರ್ದೇಶಕರು, ಪಠ್ಯಪುಸ್ತಕ

**ಬಿ. ನಂಜುಂಡೇಶ್ವರ,** ಸಹನಿರ್ದೇಶಕರು, ಆಡಳಿತ, ಸಾ.ಶಿ.ಇ.

**ಎನ್. ವಿ. ಸುಬ್ಬಣ್ಣ,** ಮುಖ್ಯಲೆಕ್ಕಾಧಿಕಾರಿ, ಸ.ಶಿ.ಅ.

**ನಿತ್ಯಾನಂದಾರಾಧ್ಯ,** ಸ.ಕಾ.ಅ., ಸ.ಶಿ.ಅ.

**ಅಧ್ಯಕ್ಷರು,** ಕ.ರಾ.ಪ್ರಾ.ಶಾ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಸ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಮಾ.ಶಿ.ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಮು.: ಮ.ಪೂ.ಕಾ.ಪ್ರಾಂ. ಸಂಘ

**ಸಲಹಾ ಸಮಿತಿ**

**ಡಾ|| ಎಸ್. ಶ್ರೀಕಂಠಸ್ವಾಮಿ,** ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು.

**ಡಾ|| ನಿರಂಜನಾರಾಧ್ಯ,** ಸಂಶೋಧನಾಧಿಕಾರಿಗಳು, ಎನ್.ಎಲ್.ಎಸ್.ಐ.ಯು.,ಬೆಂಗಳೂರು

**ಪ್ರೊ|| ಗಣೇಶ್‌ಭಟ್,** ಎಂ.ಇ.ಎಸ್. ಮಹಾವಿದ್ಯಾಲಯ, ಬೆಂಗಳೂರು.

**ಡಾ|| ಸಿ. ಜಿ. ವೆಂಕಟೇಶ್‌ಮೂರ್ತಿ,** ಆರ್.ಐ.ಇ.,ಮೈಸೂರು

**ಪ್ರೊ|| ಎ.ವಿ. ಗೋವಿಂದರಾವ್,** (ನಿವೃತ್ತ ಪ್ರಾಂಶುಪಾಲರು), ಮೈಸೂರು.

**ಹೆಚ್. ಕುಮಾರಸ್ವಾಮಿ,** ಡಯಟ್, ಮಂಗಳೂರು.

**ಸಹಸಂಪಾದಕರು**

**ಕೆ.ಜಿ. ಕಲಾವತಿ**

**ಕಲಾವಿದ : ಜಿ.ಕೆ. ಶಿವಣ್ಣ**

**ತಾಂತ್ರಿಕ ಬಳಗ : ಸಿ. ಬೋರಯ್ಯ, ಸರಸ್ವತಿ**

ಆತ್ಮೀಯ ಶಿಕ್ಷಕರೇ,

ನೂತನ ಶೈಕ್ಷಣಿಕ ವರ್ಷಾರಂಭಕ್ಕೆ ಆದರದ ಸ್ವಾಗತ. ಈ ವರ್ಷ ಕೆಲವು ನೂತನ ಕಾರ್ಯಕ್ರಮಗಳನ್ನು ಸರ್ಕಾರ ಘೋಷಿಸಿದೆ. ಸರ್ವಶಿಕ್ಷಣ ಅಭಿಯಾನ ಯೋಜನೆಗಾಗಿ ಕೇಂದ್ರ ಸರ್ಕಾರದೊಂದಿಗೆ ಶೇ. 50 ರಾಜ್ಯ ಸರ್ಕಾರದ ಪಾಲು, ವಿದ್ಯಾವಿಕಾಸ ಯೋಜನೆಯಡಿ 8 ರಿಂದ 10ರವರೆಗೆ ಕಲಿಯುತ್ತಿರುವ ಎಲ್ಲಾ ಗಂಡುಮಕ್ಕಳಿಗೆ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ, ಹಾಗೂ ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅಕ್ಷರದಾಸೋಹ ವಿಸ್ತರಣೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗುಣಮಟ್ಟವನ್ನು ಸಾಧಿಸುವ ಸಲುವಾಗಿ ಕ್ಲಸ್ಟರ್‌ನ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿ ಮಾಡುವುದು, ಶ್ರೀ ವೈದ್ಯನಾಥನ್ ಸಮಿತಿಯ ತೀರ್ಮಾನದಂತೆ ಶಾಲೆಯಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗಶಿಕ್ಷಣವನ್ನು ಅಳವಡಿಸುವುದು. ಇವೇ ಮುಂತಾದ ಹೊಸ ಯೋಜನೆಗಳನ್ನು 2007–08ನೇ ಸಾಲಿಗೆ ಸರ್ಕಾರ ಹಮ್ಮಿಕೊಂಡಿದೆ.

ಪ್ರಸ್ತುತ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಹಂತದಲ್ಲಿ ದಾಖಲೆಯ ಫಲಿತಾಂಶ ಬಂದಿದೆ. ಈ ಫಲಿತಾಂಶಕ್ಕೆ ಕಾರಣರಾದವರೆಲ್ಲರನ್ನೂ ಅಭಿನಂದಿಸುತ್ತೇನೆ. ಅತಿಹೆಚ್ಚು ತೇರ್ಗಡೆಯನ್ನು ಹೊಂದಿ, ಇಲಾಖೆಯ ಸದಾಶಯದೊಂದಿಗೆ ಸ್ಪಂದಿಸಿದ ಶಾಲೆಗಳಿಗೂ ವೈಯಕ್ತಿಕವಾಗಿ ತಮ್ಮ ಪ್ರತಿಭೆ, ಶ್ರಮ, ಗುರುಹಿರಿಯರ ಪ್ರೋತ್ಸಾಹದಿಂದ ಸಾಧನೆಯ ತುತ್ತತುದಿಗೇರಿರುವ ವಿದ್ಯಾರ್ಥಿಗಳಿಗೂ ನನ್ನ ಅಭಿನಂದನೆಗಳು.

ಈ ಶೈಕ್ಷಣಿಕ ವರ್ಷದಿಂದ ಶಾಲೆ ಪ್ರವೇಶಿಸಲಿರುವ ಚಿಣ್ಣರಿಗೆ ಜಾಗತಿಕ ಮಟ್ಟದಲ್ಲಿ ಪೈಪೋಟಿ ನೀಡುವ ಉದ್ದೇಶದಿಂದ ಇಂಗ್ಲಿಷನ್ನು ಒಂದನೇ ತರಗತಿಯಿಂದಲೇ ಪರಿಚಯಿಸಲಾಗುತ್ತಿದೆ. ಜನತೆ ಸರ್ಕಾರದ ನಿಲುವನ್ನು ಸ್ವಾಗತಿಸಿದೆ. ಹಳ್ಳಿಯ ಮಕ್ಕಳಲ್ಲಿ ಕೀಳರಿಮೆ ಹೋಗಲಾಡಿಸಿ, ದೃಢವಿಶ್ವಾಸ ಮೂಡಿಸಲು ಇಂಗ್ಲಿಷ್ ಸಹಾಯವಾಗುತ್ತದೆ. ನಮ್ಮ ಶಿಕ್ಷಕರಿಗೆ ಅಗತ್ಯ ತರಬೇತಿ, ಬೋಧನಾ ಪಠ್ಯವಸ್ತು, ಕೈಪಿಡಿ, ಇತರೆ ಸೌಲಭ್ಯಗಳನ್ನು ನೀಡಲಾಗಿದೆ. ಉತ್ತಮ ಫಲಿತಾಂಶ ನೀಡುವುದು ಅವರ ಕರ್ತವ್ಯ.

ಶಾಲೆ ಪುನರಾರಂಭಗೊಂಡ ಸಂಭ್ರಮವನ್ನು ನೋಡಲು ಇದೇ ದಿನಾಂಕ 29 ರಂದು (ಮೇ) ಎರಡು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ನೀಡಿದ ಭೇಟಿ ನನಗೆ ತೀವ್ರ ನಿರಾಶೆಯನ್ನುಂಟು ಮಾಡಿದೆ. ಮೈಸೂರು ತಾಲ್ಲೂಕು ವಲಯದ ಆಲನಹಳ್ಳಿ ಮತ್ತು ಚಿಕ್ಕಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಾಲೆಯ ಪುನರಾರಂಭಕ್ಕೆ ಅಗತ್ಯವಾದ ಯಾವ ಸಿದ್ಧತೆಯೂ ಆಗಿರಲಿಲ್ಲ. ವೇಳಾಪಟ್ಟಿ, ಪಾಠಯೋಜನೆ, ತರಗತಿ ವ್ಯವಸ್ಥೆ ಇವುಗಳಲ್ಲಿ ಕಾಣಬೇಕಾದ ಉತ್ಸಾಹ, ಶ್ರದ್ಧೆಗಳು ಇರಲಿಲ್ಲ. ಏಪ್ರಿಲ್ ತಿಂಗಳ ಸಂಪಾದಕೀಯದ ಕರೆ ಇವರ ಎದೆ ತಟ್ಟಿಲ್ಲ. ಇದನ್ನು ನಮ್ಮ ಅಧಿಕಾರಿಗಳು ಪರಿಶೀಲಿಸಿ ಕ್ರಮಕೈಗೊಳ್ಳುತ್ತಾರೆಂದು ಆಶಿಸಿದ್ದೇನೆ. ಸರ್ಕಾರಿ ಶಾಲೆಗಳ ದುಸ್ಥಿತಿಗೆ ಇಂತಹ ಅಶ್ರದ್ಧೆ, ನಿರುತ್ಸಾಹಗಳೇ ಕಾರಣ. ಇಂತಹ ವಾತಾವರಣ ಇಡೀ ರಾಜ್ಯದಲ್ಲಿ ಎಲ್ಲಿಯೂ ಕಾಣಬಾರದೆಂದು ನನ್ನ ಇಚ್ಛೆ.

ಶಿಕ್ಷಕರಿಗೆ ತಮ್ಮ ಕರ್ತವ್ಯದ ಬಗ್ಗೆ ಕಾಳಜಿ ಹೆಚ್ಚಬೇಕು. ಕಳೆದ ವರ್ಷ ನಾನು ನೋಡಿದಂತೆ, ಅನೇಕ ಶಾಲೆಗಳಲ್ಲಿ ಶಿಕ್ಷಕರು ಇದ್ದೂ ಇಲ್ಲದ ಶೋಚನೀಯ ಪರಿಸ್ಥಿತಿ. ಕೇಳಿದಾಗ ರಜೆ, ಒ.ಒ.ಡಿ, ತರಬೇತಿಯ ನೆವದಲ್ಲಿ ಕಣ್ಣುಮುಚ್ಚಾಲೆ. ಅವರು ಪಡೆಯುವ ಸಾಂದರ್ಭಿಕ ರಜೆಗಳಿಗೆ, ದೀರ್ಘ ರಜೆಗಳಿಗೆ ಸೂಕ್ತ ದಾಖಲೆಯೂ ಇಲ್ಲ. ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಲ್ಲಿ ಮಕ್ಕಳಿಗೆ ಅನ್ಯಾಯವಾಗದ ರೀತಿಯಲ್ಲಿ ಇದನ್ನು ನಿರ್ವಹಣೆ ಮಾಡದಿದ್ದರೆ ಹೇಗೆ ? ಇಂತಹ ಅಕ್ಷಮ್ಯ ಘಟನೆಗಳು ಈ ವರ್ಷ ಮರುಕಳಿಸದಿರಲಿ. ಶಿಕ್ಷಕರ ಗೈರುಹಾಜರಿಯ ಬಗ್ಗೆ ಶಾಲೆಯಲ್ಲಿ ಪಾರದರ್ಶಕ ಮಾಹಿತಿ ಇರದಿದ್ದಲ್ಲಿ ಸಂಬಂಧಪಟ್ಟವರು ಕಠಿಣ ಕ್ರಮಕ್ಕೆ ಒಳಗಾಗಬೇಕಾಗುತ್ತದೆ.

ನೂತನ ಶೈಕ್ಷಣಿಕ ವರ್ಷದಲ್ಲಿ ಹಳೆಯ ಕೊಳೆ ತೊಲಗಲಿ. ಉತ್ಸಾಹದ ಹೊಸ ಅಲೆ ಉಕ್ಕಲಿ. ಅದಕ್ಕಾಗಿ ಶಿಕ್ಷಕ ಸಮೂಹಗಳು ಪ್ರತಿಜ್ಞಾ ವಿಧಿ ಕೈಗೊಳ್ಳಲಿ. ಅಂತಹ ಶ್ರೇಷ್ಠರನ್ನು ನಮ್ಮ ಇಲಾಖೆ ಹೆಮ್ಮೆಯಿಂದ ಗೌರವಿಸುವಂತಾಗಲಿ.

ಆಯುಕ್ತರು

## ನಿರಂತರ ಪ್ರಯತ್ನಗಳಿಂದ ಮಾತ್ರ ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆ ಸಾಧ್ಯ



ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಇಲಾಖೆ ಒಂದು ವಿಶೇಷವಾದ ಕ್ಷೇತ್ರವಾಗಿದೆ. ಇಲ್ಲಿ ಪ್ರಗತಿಪರವಾದ ಯಾವುದೇ ಫಲಿತಾಂಶ ಪಡೆಯಲು ನಿರಂತರವಾದ ಪ್ರಯತ್ನ ಅಗತ್ಯವಿದೆ (sustained effort is needed). ಹೀಗೆ ಹೇಳಿದವರು ಶಿಕ್ಷಣ ಇಲಾಖೆಯ ಆಯುಕ್ತರಾದ ಮದನ್ ಗೋಪಾಲ್‌ರವರು. ಅವರು ಮಂಗಳೂರಿನ ಸಿ.ಎಲ್. ಹೆಚ್. ಆರ್.ಡಿ. ಸಂಸ್ಥೆಯಲ್ಲಿ ಆಯೋಜಿಸಲಾದ ಮಾನವ ಸಂಪನ್ಮೂಲ ಅಭಿವೃದ್ಧಿ ಕ್ಷೇತ್ರದಲ್ಲಿ ತರಬೇತಾದ ಫಸಿಲಿಟೇಟರ್‌ಗಳ ಮೂರನೇ ವಾರ್ಷಿಕ ಸಮಾವೇಶದ ಉದ್ಘಾಟನಾ ಭಾಷಣಕಾರರಾಗಿ ಮಾತನಾಡುತ್ತಾ ಹೀಗೆ ಹೇಳಿದರು. 1988ನೇ ಸಾಲಿನಲ್ಲಿ ಪ್ರಾಥಮಿಕ ಶಿಕ್ಷಕರ ವಿದ್ಯಾರ್ಹತೆಯನ್ನು SSLC+TCH ಗೆ ಬದಲಾಗಿÁV PUC+TCH ಎಂಬುದಾಗಿ ಬದಲಾಯಿಸಿ ನೇಮಕಾತಿ ನಿಯಮಗಳನ್ನು ತಿದ್ದುಪಡಿಮಾಡಿದ ಬಗ್ಗೆ ಉಲ್ಲೇಖಿಸಿ, ಇದೊಂದು ಸಣ್ಣ ಪ್ರಯತ್ನವಾದರೂ ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯಸರ್ಕಾರದ ಒಂದು ಪ್ರಮುಖ ನಿರ್ಧಾರವಾಗಿತ್ತು ಎಂದರು. ಇತ್ತೀಚಿನ ದಿನಗಳಲ್ಲಿ ಪದವಿ ಮತ್ತು ಬಿ.ಎಡ್. ತರಬೇತಿ ಪಡೆದ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಿಗೆ ನೇಮಿಸುವ ದಿಕ್ಕಿನಲ್ಲಿ ವಿವಿಧ ರಾಜ್ಯಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ 1 ರಿಂದ 8ನೇ ತರಗತಿಗಳಿರುವ ಪ್ರಾಥಮಿಕ ಶಾಲೆಗಳಿಗೆ ಇಂತಹ ಶಿಕ್ಷಕರನ್ನು ನೇಮಿಸಲಾಗಿದ್ದು ಈ ಶಾಲೆಗಳಲ್ಲಿ ಮಕ್ಕಳ ಕಲಿಕಾಮಟ್ಟ ಗಣನೀಯವಾಗಿ ಉತ್ತಮವಾಗಿರುವುದು ಕಂಡುಬಂದಿದೆ ಎಂದು ಹೇಳಿದರು. ಪ್ರಸಕ್ತವಾಗಿ ರಾಜ್ಯದಲ್ಲಿ ಶಾಲಾ ಸೌಲಭ್ಯ (Access) ದಾಖಲಾತಿ (Enrolment) ಮುಂದುವರಿಕೆ (Retention) ಮುಂತಾದ ವಿಷಯಗಳಲ್ಲಿ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲಾಗಿದ್ದು ಪ್ರಸ್ತುತ ನಮ್ಮ ಮುಂದಿರುವ ಗುರಿ ಗುಣಮಟ್ಟವನ್ನು ಉತ್ತಮಪಡಿಸುವುದಾಗಿದೆ. ಇದಕ್ಕಾಗಿ ನಮಗೆ ಡೆಡಿಕೇಟೆಡ್ ಕಾರ್ಯಕರ್ತರ ಅಗತ್ಯವಿದೆ. ಆದ್ದರಿಂದ ಇಲಾಖೆಯಲ್ಲಿ ಕ್ಷೇತ್ರಮಟ್ಟದಲ್ಲಿ ಕಾರ್ಯನಿರ್ವಹಿಸುವ ಮೇಲ್ವಿಚಾರಕ ಸಿಬ್ಬಂದಿಗೆ ಮ್ಯಾನೇಜ್‌ಮೆಂಟ್ ತರಬೇತಿ ನೀಡಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಇದೇ ಸಂದರ್ಭದಲ್ಲಿ ಕಳೆದ 2 ದಿನಗಳಿಂದ ಬೆಂಗಳೂರಿನಲ್ಲಿ ಏರ್ಪಡಿಸಲಾದ ರಾಷ್ಟ್ರಮಟ್ಟದ ನ್ಯಾಷನಲ್ ಲರ್ನಿಂಗ್ ಕಾನ್ಫರೆನ್ಸ್ ಬಗ್ಗೆ ಪ್ರಸ್ತಾಪಿಸಿದ ಆಯುಕ್ತರು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತ ಸರ್ಕಾರದ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಚಂಪಕ್ ಚಟರ್ಜಿಯವರ ಮಾತುಗಳನ್ನು ಪ್ರಸ್ತಾಪಿಸಿ, ಗುಣಮಟ್ಟದ ಶಿಕ್ಷಣವು ಪ್ರಸ್ತುತ ರಾಷ್ಟ್ರಮಟ್ಟದ ಆದ್ಯತೆಯಾಗಿದೆ ಎಂದು ಹೇಳಿದರು. ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 5600 ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ವೆಚ್ಚಮಾಡುತ್ತಿದ್ದರೂ ಶೇ. 20 ರಷ್ಟು ಮಕ್ಕಳಿಗೆ ಇನ್ನೂ ಲೇಖನ ಚಿಹ್ನೆಗಳನ್ನು ಸಮರ್ಪಕವಾಗಿ ಬಳಸುವ ಸಾಮರ್ಥ್ಯ ಇಲ್ಲದಿರುವುದು ಶೋಚನೀಯ. ಶಾಲೆ–ಶಾಲೆಗಳ ನಡುವೆ, ಕ್ಲಸ್ಟರ್ – ಕ್ಲಸ್ಟರ್‌ಗಳ ನಡುವೆ ಹಾಗೂ ವಿವಿಧ ಬ್ಲಾಕ್‌ಗಳ ನಡುವೆ ಕಲಿಕಾ ಮಟ್ಟದಲ್ಲಿ ಅಂತರ (Learning gaps) ಇರುವುದನ್ನು ಪ್ರಸ್ತಾಪಿಸಿದ ಆಯುಕ್ತರು ಈ ಕಲಿಕಾ ಅಂತರಗಳನ್ನು ನಿವಾರಿಸುವ ದಿಕ್ಕಿನಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದರು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ( ಎಸ್. ಡಿ.ಎಂ.ಸಿ.)ಗಳ ಕಾರ್ಯ ಕೇವಲ ಸಿವಿಲ್ ಕಾಮಗಾರಿಗಳಿಗೆ ಮಾತ್ರ ಸೀಮಿತವಾಗಬಾರದು. ಶಿಕ್ಷಣದ ಗುಣಮಟ್ಟ ಉತ್ತಮಪಡಿಸುವುದು ಸಹ ಅವರ ಜವಾಬ್ದಾರಿಯಾಗಬೇಕು. ಶಾಲೆಯ ಒಟ್ಟಾರೆ ಗುಣಮಟ್ಟವೆಂದರೆ ಕೇವಲ ಕಟ್ಟಡಗಳಷ್ಟೇ ಅಲ್ಲ, ಉತ್ತಮ ಬೋಧನೆ, ಉತ್ತಮ ಕಲಿಕೆ, ಮಾನವ ಸಂಪನ್ಮೂಲ ಅಭಿವೃದ್ಧಿ, ಸಾಮರ್ಥ್ಯ ನಿರ್ಮಾಣ ಮತ್ತು ಕೌಶಲ್ಯಗಳನ್ನು ಬೆಳೆಸುವುದು, ಹೀಗೆ ಎಲ್ಲವೂ ಸೇರಿದೆ ಎಂದು ವಿವರಿಸಿದರು.

### ಕ್ಲಸ್ಟರ್ ಕಾಂಪ್ಲೆಕ್ಸ್ ಪರಿಕಲ್ಪನೆ

ಪ್ರತಿಯೊಂದು ಶೈಕ್ಷಣಿಕ ಬ್ಲಾಕ್‌ನಲ್ಲಿ ಸರಾಸರಿ 200 ಶಾಲೆಗಳು ಮತ್ತು 1200 ಶಿಕ್ಷಕರಿದ್ದು ಈ ಎಲ್ಲಾ ಶಾಲೆಗಳ ಮತ್ತು ಶಿಕ್ಷಕರ ಕೆಲಸದ ಸಮರ್ಪಕ ಉಸ್ತುವಾರಿ ಒಬ್ಬ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಸಾಧ್ಯವಾಗುತ್ತಿಲ್ಲ. ಅವರಿಗೆ ಕೆಲಸದ ಹೊರೆ ಹೆಚ್ಚಾಗಿದೆ. ಆದ್ದರಿಂದ ಪ್ರತಿ ಕ್ಲಸ್ಟರ್‌ನಲ್ಲಿ ಕೇಂದ್ರ ಸ್ಥಾನದಲ್ಲಿರುವ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಗುರ್ತಿಸಿ ಆ ಶಾಲೆಯ ಮುಖ್ಯ ಶಿಕ್ಷಕರನ್ನು ಕ್ಲಸ್ಟರ್ ಎಜುಕೇಶನ್ ಡೆವಲಪ್‌ಮೆಂಟ್ ಆಫೀಸರ್ (ಸಿ.ಇ.ಡಿ.ಓ.) ಎಂಬುದಾಗಿ ಪದನಾಮೀಕರಿಸಿ, ಅವರಿಗೆ ಹಾಲೀ ಕೆಲಸದ ಜೊತೆಗೆ ಹೆಚ್ಚುವರಿಯಾಗಿ ಕ್ಲಸ್ಟರ್ ವ್ಯಾಪ್ತಿಯ ಎಲ್ಲಾ ಪ್ರಾಥಮಿಕ ಶಾಲೆಗಳ ಶಿಕ್ಷಕರ ವೇತನ ಬಟವಾಡೆ, ರಜೆ ಮಂಜೂರಾತಿ, ಇತ್ಯಾದಿ ಜವಾಬ್ದಾರಿಗಳನ್ನು ವಹಿಸುವುದರ ಮೂಲಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರುವುದು ಸರ್ಕಾರದ ಉದ್ದೇಶವಾಗಿದೆ. ಇವರಿಗೆ ಸಹಾಯಕ್ಕಾಗಿ ಈಗಾಗಲೇ ಇರುವ ಕ್ಲಸ್ಟರ್ ಸಂಯೋಜಕರಲ್ಲದೇ ಒಬ್ಬ ಗುಮಾಸ್ತರು ಹಾಗೂ ಕಂಪ್ಯೂಟರ್ ಸೌಲಭ್ಯವನ್ನು ಒದಗಿಸಲಾಗುವುದು. ಈ ಮೂಲಕ ಕ್ಲಸ್ಟರ್‌ನಿಂದ ಬ್ಲಾಕ್ ಕಚೇರಿ, ಅಲ್ಲಿಂದ ಜಿಲ್ಲಾ ಕಚೇರಿಗೆ ನೆಟ್ ವರ್ಕ್ ಸಂಪರ್ಕ ಕಲ್ಪಿಸಿ ಆಡಳಿತ ಕೆಲಸವನ್ನು ಸುಗಮಗೊಳಿಸುವ ವ್ಯವಸ್ಥೆ ಮಾಡಲಾಗುವುದು. ಇದರಿಂದ ಈ ವ್ಯವಸ್ಥೆ ಜಾರಿಗೆ ಬಂದಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕೆಲಸದ ಹೊರೆ ಕಡಿಮೆಯಾಗಿ ಅವರು ಹಾಗೂ ಶಿಕ್ಷಣ ಸಂಯೋಜಕರು ಶಿಕ್ಷಣದ ಗುಣಮಟ್ಟದ ಸುಧಾರಣೆಯೆಡೆಗೆ ಹೆಚ್ಚಿನ ಸಮಯವನ್ನು ವಿನಿಯೋಗಿಸಲು ಅನುಕೂಲವಾಗುವುದು. ಶಿಕ್ಷಕರು ತಮ್ಮ ವೇತನ, ವಾರ್ಷಿಕ ಬಡ್ತಿ, ರಜೆ ಮಂಜೂರಾತಿ ಇತ್ಯಾದಿ ಕೆಲಸಗಳಿಗಾಗಿ ತಾಲ್ಲೂಕು ಕೇಂದ್ರಗಳಿಗೆ ಹೋಗುವುದು ತಪ್ಪುತ್ತದೆ. ಅವರು ತಮ್ಮ ಹೆಚ್ಚಿನ ವೇಳೆಯನ್ನು ಬೋಧನೆಗೆ ಉಪಯೋಗಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಅನುಕೂಲವಾಗುತ್ತದೆ ಎಂಬುದಾಗಿ ಆಯುಕ್ತರು ವಿವರಿಸಿದರು.

### ಸಂಯುಕ್ತ ಶಾಲೆ ವ್ಯವಸ್ಥೆ (Composit school system)

ಪ್ರಸ್ತುತ ರಾಜ್ಯದಲ್ಲಿ ಹಲವು ಕಡೆ ಒಂದೇ ಆವರಣದಲ್ಲಿ ಕಿರಿಯ ಪ್ರಾ.ಶಾಲೆ, ಹಿರಿಯ ಪ್ರಾಥಮಿಕ ಶಾಲೆ, ಮತ್ತು ಪ್ರೌಢಶಾಲೆ ಇದ್ದರೂ ಆಡಳಿತಾತ್ಮಕವಾಗಿ ಇವು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಇಂಥ ಕಡೆ ಕಿರಿಯ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು

ಪುಟ–11ಕ್ಕೆ



## ಯೋಗಾಸನಗಳು

**ಸಿ. ರಾಮಸ್ವಾಮಿ,** ಎಂ.ಎ.ಬಿ.ಪಿ.ಎಡ್, ಯೋಗನಿರ್ದೇಶಕರು
ಶ್ರೀ ವಾಣಿಬಾಲಕಿಯರ ಪ್ರೌಢಶಾಲೆ, ರಾಜಾಜಿನಗರ, ಬೆಂಗಳೂರು–10
ಮೊ : 9845636397



**ಸರ್ವಾಂಗಾಸನ :**

ದೇಹದ ಎಲ್ಲಾ ಅಂಗಕ್ಕೂ ಉಪಯೋಗ ಆಗುವ ಭಂಗಿ.

**ಸ್ಥಿತಿ :** ಬೆನ್ನನ್ನು ನೆಲದ ಮೇಲೆ ಹಾಕಿ ಮಲಗಬೇಕು. ಪಾದಗಳನ್ನು ಜೋಡಿಸಿ ಎರಡೂ ಹಸ್ತಗಳನ್ನು ತೊಡೆಯ ಪಕ್ಕದಲ್ಲಿ ಹಸ್ತಗಳನ್ನು ನೆಲಕ್ಕೆ ಒತ್ತಿಡಬೇಕು. ಕುತ್ತಿಗೆ ನೇರವಾಗಿರಿಸಬೇಕು.

1. ಪೂರಕಮಾಡಿ ಎರಡು ಕಾಲುಗಳನ್ನು ಮಂಡಿ ಮಡಿಸದೆ $90^0$ ಯಷ್ಟು ಮೇಲಕ್ಕೆತ್ತಬೇಕು. ನಂತರ ರೇಚಕ.

2. ಪೂರಕಮಾಡಿ ಎರಡು ಕೈಗಳನ್ನು ನೆಲಕ್ಕೆ ಒತ್ತಿ ಹಿಡಿದು ಸೊಂಟವನ್ನು ಮೇಲಕ್ಕೆತ್ತಿ ನಿಲ್ಲಿಸಲು ಪ್ರಯತ್ನಿಸಬೇಕು.

3. ಪೂರಕದೊಡನೆ ಎದೆ, ಹೊಟ್ಟೆ, ಮಂಡಿ, ಪಾದ ಈ ಎಲ್ಲಾ ಭಾಗಗಳು ಭೂಮಿಗೆ ಲಂಬವಾಗಿರಬೇಕು. ತಲೆ ಹಿಂಭಾಗ, ಕುತ್ತಿಗೆ, ಎರಡು ಭುಜಗಳನ್ನು ಭೂಮಿಯಲ್ಲಿ ಅಳವಡಿಸಬೇಕು.

4. ಪೂರಕದೊಡನೆ ಎರಡು ಮೊಳಕೈಗಳನ್ನು ಮಡಿಸಿ ಹಸ್ತಗಳನ್ನು ಬೆನ್ನಿಗೆ ಆಧಾರವಾಗಿರಿಸಿ ಮಿತವಾದ ಉಸಿರಾಟದೊಡನೆ ಕೆಲಕಾಲ ನಿಲ್ಲಿಸಬೇಕು. ನಂತರ ನಿಧಾನವಾಗಿ ಇಳಿಕೆಕ್ರಮದಲ್ಲಿ ಹಿಂದಿರುಗಿ ಮಲಗಬೇಕು. ನಂತರ ಶವಾಸನದಲ್ಲಿ ವಿಶ್ರಾಂತಿ ಪಡೆಯಬೇಕು.

**ಪರಿಣಾಮಗಳು :**

ಮೆದುಳಿನ ದೌರ್ಬಲ್ಯವನ್ನು ನೀಗಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುತ್ತದೆ. ದೇಹದ ಎಲ್ಲಾ ಭಾಗಕ್ಕೂ ರಕ್ತ ಸಂಚಾರವಾಗುತ್ತದೆ. ಹೃದಯ ಬಲಗೊಳ್ಳುತ್ತದೆ. ಮೂರ್ಛೆರೋಗ, ಕುತ್ತಿಗೆ ಎದೆನೋವು, ಭುಜಗಳನೋವು ನಿವಾರಣೆಯಾಗುತ್ತವೆ.

**ಹಲಾಸನ :**

ನೇಗಿಲಿನ ಆಕಾರ.



ಸ್ಥಿತಿ : ಬೆನ್ನಮೇಲೆ ಮಲಗಿರಬೇಕು.

1. ಪೂರಕಮಾಡಿ ಎರಡೂ ಕಾಲುಗಳನ್ನು ಮಂಡಿ ಮಡಿಸದೆ $60^0$ ಯಷ್ಟು ಮೇಲೆತ್ತಿ ನಿಲ್ಲಿಸಬೇಕು. ನಂತರ ರೇಚಕ.

2. ಪೂರಕದೊಡನೆ ಎರಡೂ ಕಾಲುಗಳನ್ನು $90^0$ ಯಷ್ಟು ಮೇಲೆತ್ತಿ ನಿಲ್ಲಿಸಬೇಕು ನಂತರ ರೇಚಕ.

3. ಪೂರಕಮಾಡಿ ಸೊಂಟವನ್ನು ಮೇಲೆತ್ತಿ ರೇಚಕದೊಡನೆ ಎರಡೂ ಪಾದದ ತುದಿಯನ್ನು ನೆಲಕ್ಕೆ ತಾಗಿಸಬೇಕು ಮಂಡಿ ಮಡಿಸದೆ ಮಾಡಲು ಪ್ರಯತ್ನಿಸಿ. ಮಿತವಾದ ಉಸಿರಾಟ ನಡೆಯುತ್ತಿರಲಿ.

4. ಪೂರಕದೊಡನೆ ಎರಡೂ ಮೊಳಕೈಗಳನ್ನು ಮಡಿಸುತ್ತ ಹಸ್ತಗಳಿಂದ ಬೆನ್ನನ್ನು ಎತ್ತಿ ಹಿಡಿಯಬೇಕು. ಕೆಲಕಾಲ ಮಿತವಾದ ಉಸಿರಾಟದೊಂದಿಗೆ ನೆಲೆಸಿ ನಂತರ ಕ್ರಮವಾಗಿ ಹಿಂದಿರುಗಿ ವಿಶ್ರಾಂತಿ ಸ್ಥಿತಿಗೆ ಬರಬೇಕು.

ಪರಿಣಾಮ : ಕೆಮ್ಮು, ಕಣ್ಣುನೋವು, ಸೊಂಟದ ನೋವು, ಕರುಳಿನನೋವು ಕಫ, ಜನನೇಂದ್ರಿಯದ ನೋವಿನ ಪರಿಹಾರ

**ಊರ್ಧ್ವಮುಖ ಪಶ್ಚಿಮೋತ್ತಾಸನ :**

ಕುತ್ತಿಗೆ, ಬೆನ್ನು, ತೊಡೆ, ಹಿಮ್ಮಡಿವರೆಗೆ ಹಿಗ್ಗಿಸುವ ಭಂಗಿ :



ಸ್ಥಿತಿ : ಬೆನ್ನನ್ನು ನೆಲಕ್ಕೆ ಹಾಕಿ ಮಲಗಿರಬೇಕು.

1. ಪೂರಕಮಾಡಿ ಎರಡೂ ಕಾಲುಗಳನ್ನು $90^0$ಯಷ್ಟು ಮೇಲೆತ್ತಬೇಕು. ನಂತರ ರೇಚಕ.

2. ಪೂರಕಮಾಡಿ ಎರಡೂ ಕಾಲುಗಳ ತುದಿಯನ್ನು ನೆಲಕ್ಕಿಡಬೇಕು.

3. ಪೂರಕಮಾಡಿ ಎರಡೂ ಕೈಗಳಿಂದ ಕಾಲುಗಳ ಪಾದವನ್ನು ಹಿಡಿಯಬೇಕು ಮತ್ತು ಮಿತವಾದ ಉಸಿರಾಟ ನಡೆಸಬೇಕು.

4. ಮಿತವಾದ ಉಸಿರಾಟದೊಂದಿಗೆ ಸೊಂಟವನ್ನು ಕೆಳಗಿಳಿಸುತ್ತ ತಲೆ, ಬೆನ್ನು ಸೊಂಟವನ್ನು ನೆಲಕ್ಕೆ ಒರಗಿಸಿ, ಮಂಡಿ ಮಡಿಸದೆ ಕಾಲುಗಳ ಹೊಟ್ಟೆ, ಎದೆಯ ಕಡೆಗೆ ಒತ್ತಿ ಹಿಡಿಯಬೇಕು. ನಂತರ ಕ್ರಮವಾಗಿ ಹಿಂತಿರುಗಿ ಸ್ಥಿತಿಗೆ ಬಂದು ದೇಹವನ್ನು ಸಡಿಲಬಿಟ್ಟು ವಿಶ್ರಮಿಸಿಕೊಳ್ಳಬೇಕು.

**ಪರಿಣಾಮ :**

ಮುಖದಲ್ಲಿ, ಕಾಂತಿ, ಶ್ವಾಸಕೋಶದ ರೋಗ ನಿವಾರಣೆ, ಕಿಡ್ನಿ ತೊಂದರೆ ಮಲಮೂತ್ರ ಕೋಶಗಳ ನೋವು ನಿವಾರಣೆ.

**ಯಮ : ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ**

### ಸತ್ಯಮೇವ ಜಯತೇ...

**ಸತ್ಯ :** ಸಹಜವಾದ ವಸ್ತು ಸ್ಥಿತಿಯನ್ನು ಅಥವಾ ವಿಷಯವನ್ನು ನೇರವಾಗಿ ಪ್ರಸ್ತುತಪಡಿಸುವುದಕ್ಕೆ ಸತ್ಯ ಎನ್ನುತ್ತೇವೆ. ಪಂಚಭೂತಗಳಾದ ಅಗ್ನಿ, ಭೂಮಿ ಆಕಾಶ, ನೀರು, ಗಾಳಿ ಇವುಗಳನ್ನು ದೇವರ ಸೃಷ್ಟಿಯ ಸತ್ಯಗಳೆಂದು ಪಂಚೇಂದ್ರಿಯ ಕಣ್ಣು, ಕಿವಿ, ಮೂಗು, ನಾಲಿಗೆ ಚರ್ಮ ಇವುಗಳ ಸಹಜ ಅನುಭವಗಳನ್ನು ಇಂದ್ರಿಯ ಸತ್ಯಗಳೆಂದು ಯಾವುದೇ ವ್ಯಕ್ತಿ ಆತ್ಮಸಾಕ್ಷಿಯಾಗಿ ನಡೆದು ಲೋಕ ಕಲ್ಯಾಣಕ್ಕೆ ಶ್ರಮಿಸಿದರೆ ಸತ್ಯವಂತ ಎನ್ನುತ್ತೇವೆ. ಸತ್ಯವನ್ನೇ ಹೇಳುವುದು ಒಂದು ಯೋಗ ಕ್ರಿಯೆ. ಅದು ಒಂದು ವ್ರತವೂ ಹೌದು. ಸತ್ಯಹರಿಶ್ಚಂದ್ರ, ಗಾಂಧೀಜಿ ಸತ್ಯವನ್ನು ನುಡಿಯುವ, ಆಚರಿಸುವ ವ್ರತಧಾರಿಗಳಾಗಿ ಯಶಸ್ವಿಯಾದವರು.



**ಡಾ.ಎಸ್.ಶ್ರೀಕಂಠಸ್ವಾಮಿ**
ಪ್ರಾಧ್ಯಾಪಕರು. ಐ.ಎ.ಎಸ್.ಇ.,
ರಾಷ್ಟ್ರೀಯ ವಿದ್ಯಾಲಯ ಅಧ್ಯಾಪಕರ ಕಾಲೇಜು
ಬೆಂಗಳೂರು – 11

# ಶಿಕ್ಷಕರಿಗೆ ವಿಟಮಿನ್ಸ್...

**ಪ್ರಶ್ನೆ : ಹಸಿರುಮನೆ ಪರಿಣಾಮ ಎಂದರೇನು ? ಇದರ ದುಷ್ಪರಿಣಾಮಗಳೇನು ?**

**–ಚಂದ್ರಣ್ಣ,** ಸ.ಕಿ.ಪ್ರಾ.ಶಾಲೆ ಸರ್ಜಾಪುರ ತಾ॥

**ಉತ್ತರ :** ಹಸಿರು ಮನೆ ಪರಿಣಾಮವನ್ನು ಆಂಗ್ಲಭಾಷೆಯಲ್ಲಿ green house effect ಎಂದೂ ಕರೆಯುತ್ತಾರೆ. ನಮ್ಮ ವಾಯು ಮಂಡಲದಲ್ಲಿ 0.04ನಷ್ಟು ಕಾರ್ಬನ್ ಡೈ ಆಕ್ಸೈಡ್ (ಅಂ2)ಇದೆ. ಪ್ರಾಣಿಗಳ ಮತ್ತು ಮನುಷ್ಯರ ಉಸಿರಾಟಕ್ರಿಯೆಯಿಂದ ಬಿಡುಗಡೆಯಾದ ಈ ಅನಿಲವನ್ನು ಸಸ್ಯಗಳು ದ್ಯುತಿ ಸಂಶ್ಲೇಷಣೆಯ ಮೂಲಕ ಉಪಯೋಗಿಸಿಕೊಳ್ಳುತ್ತವೆ. ಹೀಗಾಗಿ ನಮ್ಮ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣವು ಸಮತೋಲನ ಸ್ಥಿತಿಯಲ್ಲಿರುತ್ತದೆ. ಕಾರ್ಬನ್ ಡೈ ಆಕ್ಸೈಡ್, ಮಿಥೇನ್, ನೈಟ್ರಸ್ ಆಕ್ಸೈಡ್, ಸಲ್ಫರ್ ಹೆಕ್ಸಾಫ್ಲೋರೈಡ್, ಎಚ್.ಎಫ್.ಸಿ. ಮತ್ತು ಸಿಎಫ್‌ಸಿಗಳನ್ನು ಗ್ರೀನ್ ಹೌಸ್ ಅನಿಲಗಳೆಂದು ಕರೆಯುತ್ತಾರೆ. ಪ್ರಾಣಿಗಳ ಸಂತತಿಯ ಹೆಚ್ಚಳ, ಕಾಡಿನ ನಾಶ, ಕೈಗಾರಿಕೆಗಳ ಮತ್ತು ವಾಹನಗಳಿಂದ ಹೊರಹೊಮ್ಮುವ ಹೊಗೆ; ಇವುಗಳು ಈ ಅನಿಲಗಳ ಅನುಪಾತದ ಮೇಲೆ ಪರಿಣಾಮಬೀರಿವೆ.

ಕಾರ್ಬನ್ ಡೈ ಆಕ್ಸೈಡ್‌ನ ಸಾಂದ್ರತೆಯು ವಾತಾವರಣದಲ್ಲಿ ಹೆಚ್ಚುತ್ತಿರುವುದರಿಂದ ಸೂರ್ಯನ ಕಿರಣಗಳನ್ನು ಹಾದು ಹೋಗಲು ದಾರಿಮಾಡಿಕೊಟ್ಟು ಮತ್ತೆ ಆ ಕಿರಣಗಳು ಹೊರ ಹೋಗದಂತೆ ಹಿಡಿದು ನಿಲ್ಲಿಸುತ್ತದೆ. ಇದರ ದುಷ್ಪರಿಣಾಮ ಭೂಮಿಯ ಮೇಲಿನ ತಾಪವು ಹೆಚ್ಚಾಗುವುದು. ಈ ಪ್ರಕ್ರಿಯೆಯನ್ನು ಗ್ಲೋಬಲ್ ವಾರ್ಮಿಂಗ್ ಎಂದೂ ಕರೆಯುತ್ತಾರೆ. ಇದರ ಪರಿಣಾಮವು ಸಸ್ಯಗಳ ಮೇಲೆಯು ಬೀರುತ್ತದೆ. ಈ ಕಾರಣಕ್ಕಾಗಿಯೇ ಕೆಲವು ಸೂಕ್ಷ್ಮಸಸ್ಯಗಳನ್ನು ಗಾಜಿನ ಮನೆಯಲ್ಲಿ ನಿರ್ಬಂಧಿತವಾದ ಪರಿಸರದ ವ್ಯವಸ್ಥೆಯ ಮೂಲಕ ಬೆಳೆಸುತ್ತಾರೆ. ಸಸ್ಯಗಳಿಂದ ಬಿಡುಗಡೆಯಾದ Co2 ಅನಿಲವು ಹೊರಹೋಗದೆ ಇರುವುದರಿಂದ ಪ್ರವೇಶಿಸಿದ ಸೂರ್ಯಕಿರಣಗಳು ಅಲ್ಲಿಯೇ ಉಳಿದು ಅಲ್ಲಿನ ಉಷ್ಣಾಂಶವನ್ನು, ಹೊರಗಿನ ಉಷ್ಣಾಂಶಕ್ಕಿಂತ 10c ಅಥವಾ 20c ನಷ್ಟು ಹೆಚ್ಚಾಗಿರುತ್ತದೆ. ಈ ಪರಿಣಾಮವನ್ನೇ ಹಸಿರು ಮನೆ ಪರಿಣಾಮವನ್ನೆ ಹಸಿರು ಮನೆ ಪರಿಣಾಮ ಎನ್ನುತ್ತಾರೆ.

ಇದರ ಪರಿಣಾಮ ಭೂಮಿಯ ಸರಾಸರಿ ಉಷ್ಣತೆಯಲ್ಲಿ ಏರಿಕೆ, ಜೀವ ವೈವಿಧ್ಯತೆಯ ನಷ್ಟ, ಸಮುದ್ರ ಮತ್ತು ಸಾಗರಗಳ ನೀರಿನಲ್ಲಿ ಏರಿಕೆ, ಕೆಲವು ದ್ವೀಪಗಳು ನೀರಿನಲ್ಲಿ ಮುಳುಗುವ ಸಾಧ್ಯತೆ ಇತ್ಯಾದಿ.

**ಪ್ರಶ್ನೆ : 'ಮಾರ್ಗದರ್ಶನ ಸೇವೆ' ಎಂದರೇನು? ಇದರ ಮೂಲಕ ವಿದ್ಯಾರ್ಥಿಗಳಿಗೆ ಯಾವ ರೀತಿಯ ಮಾರ್ಗದರ್ಶನ ನೀಡಬಹುದು?**

**–ರೇವಣ್ಣ,** ಶಿಕ್ಷಕರು, ಸರ್ಕಾರಿ ಶಾಲೆ, ಹಾಸನ ಜಿಲ್ಲೆ

**ಉತ್ತರ :** ಮಾರ್ಗದರ್ಶನದ ಪ್ರಮುಖ ಉದ್ದೇಶ, ವಿದ್ಯಾರ್ಥಿಗಳ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ತಿಳಿದು, ಅವರು ಎದುರಿಸುತ್ತಿರುವ ಶೈಕ್ಷಣಿಕ ಅಥವಾ ವೈಯಕ್ತಿಕ ಸಮಸ್ಯೆಗಳನ್ನು ಹೋಗಲಾಡಿಸಿ, ಗರಿಷ್ಠ ಮಟ್ಟದ ಕಲಿಕೆ ಉಂಟಾಗಲು ಅವರಿಗೆ ನೆರವು ನೀಡುವುದು. ಈ ಕೆಲಸವನ್ನು ಔಪಚಾರಿಕವಾಗಿ ಮಾಡಲು ಶಾಲಾ ಮಟ್ಟದಲ್ಲಿ "ಮಾರ್ಗದರ್ಶನ ಸೇವಾ" ಘಟಕಗಳನ್ನು ವ್ಯವಸ್ಥೆಗೊಳಿಸುವುದು. ಈ ಘಟಕಕ್ಕೆ ಶಾಲೆಯ ಮುಖ್ಯೋಪಾಧ್ಯಾಯರನ್ನು ನಿರ್ದೇಶಕರಾಗಿಯೂ, ತರಬೇತಿ ಹೊಂದಿದ ಸಲಹೆಗಾರರನ್ನು ಸಂಯೋಜಕರನ್ನಾಗಿಯೂ ಪರಿಗಣಿಸುವುದು. ಶಾಲೆಯ ಇತರ ಉಪಾಧ್ಯಾಯರುಗಳು, ದೈಹಿಕ ಶಿಕ್ಷಣ ಶಿಕ್ಷಕರು ಎನ್.ಸಿ.ಸಿ. ಹಾಗೂ ಎನ್.ಎಸ್.ಎಸ್.ನ ಮುಖ್ಯಸ್ಥರು, ಪೋಷಕರು ಸದಸ್ಯರಾಗಬಹುದು. ಈ ಸಮಿತಿಯು ತಿಂಗಳಿಗೊಮ್ಮೆ ಸಭೆಯನ್ನು ನಡೆಸಿ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಬಹುದು. ಈ ಸಮಿತಿಯು ಕೆಳಗಿನ ಕೆಲವು ಪ್ರಮುಖ ಸೇವೆಗಳನ್ನು ವಿದ್ಯಾರ್ಥಿಗಳಿಗೆ ನೀಡಬಹುದು.

1) ಮಾಹಿತಿ ಸೇವೆ 2) ವಿದ್ಯಾರ್ಥಿಗಳ ಮನೋವೈಜ್ಞಾನಿಕ ಅಂಶಗಳನ್ನು ಮಾಪನ ಮಾಡುವ ಸೇವೆ 3) ವೈಯಕ್ತಿಕ ಸೇವೆ 4) ಪರೀಕ್ಷೆಗೆ ಸಿದ್ಧತೆಗೊಳಿಸುವ ಸೇವೆ 5) ಸಲಹಾ ಸೇವೆ 6) ಔದ್ಯೋಗಿಕ ವಿಷಯಗಳಿಗೆ ಸಂಬಂಧಿಸಿದ ಸೇವೆ 7) ವಿಶಿಷ್ಟ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಸೇವೆ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ತಜ್ಞರೊಡನೆ ಸಂದರ್ಶನ ಸೇವೆ. 8) ಅನುಸರಣೀಯ ಸೇವೆ.

**ಪ್ರಶ್ನೆ : ನಿಯೋಜಿತ ಕಲಿಕಾ ಸಾಮಗ್ರಿಗಳು ಯಾವ ಕಲಿಕೆಯ ಸಿದ್ದಾಂತದ ಆಧಾರದ ಮೇಲೆ ತಯಾರಿಸಲ್ಪಟ್ಟಿವೆ ?**

**–ಚನ್ನೇಗೌಡ,** ಸರ್ಕಾರಿ ಶಾಲೆಯ ಶಿಕ್ಷಕ, ಆನೇಕಲ್ ತಾ॥

**ಉತ್ತರ :** ನಿಯೋಜಿತ ಕಲಿಕಾ ಸಾಮಗ್ರಿಗಳನ್ನು ಪ್ರಾರಂಭಿಕ ಹಂತಗಳಲ್ಲಿ ಬಿ.ಎಫ್. ಸ್ಕಿನರ್‌ರವರ ಕ್ರಿಯಾ ಜನ್ಯಕಲಿಕಾ ಸಿದ್ದಾಂತದ ಆಧಾರದ ಮೇಲೆ ತಯಾರಿಸಲ್ಪಟ್ಟಿವೆ. ಅನಂತರದ ದಿನಗಳಲ್ಲಿ ಪ್ರೆಸ್ಸಿ ಕಾವಡರ್ ರವರು ಸಹ ಈ ದಿಕ್ಕಿನಲ್ಲಿ ಕೆಲಸ ಮಾಡಿದ್ದಾರೆ.

## ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ

ಪಾಲಕರು, ಪೋಷಕರು, ಶಿಕ್ಷಕರು ಸಮುದಾಯದ ಕಾರ್ಯಕರ್ತರಿಗೆ ಮಾಹಿತಿ ಕೈಪಿಡಿ

ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ

**ಪ್ರಕಟಣೆ :** ಕ್ಷೇತ್ರಶಿಕ್ಷಣಾಧಿಕಾರಿ ಹಾಗೂ ಪದನಿಮಿತ್ತ ಯೋಜನಾ ಸಮನ್ವಯಾಧಿಕಾರಿಗಳು ಸರ್ವಶಿಕ್ಷಣ ಅಭಿಯಾನ, ಕೊಪ್ಪಳ ತಾಲ್ಲೂಕು

**1. ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ : ಒಂದು ಮನವಿ**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ರಾಜ್ಯದಲ್ಲಿ ಅನುಷ್ಠಾನದಲ್ಲಿದೆ. ಈ ಕಾರ್ಯಕ್ರಮವು 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಜೀವನ ಉಪಯುಕ್ತ ಹಾಗೂ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ನೀಡುವ ಗುರಿ ಹೊಂದಿದೆ.

ಸಂವಿಧಾನದ 86ನೇ ತಿದ್ದುಪಡಿ ಅಧಿನಿಯಮ ಅನುಚ್ಛೇದ 21ಎ ಪ್ರಕಾರ ಶಿಕ್ಷಣವು ಪ್ರತಿಯೊಂದು ಮಗುವಿನ ಒಂದು ಮೂಲಭೂತ ಹಕ್ಕು. ಇದು 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನೊದಗಿಸುವುದನ್ನು ಖಾತರಿಪಡಿಸುತ್ತದೆ. ಅಂತೆಯೇ ವಿಶೇಷ ಅವಶ್ಯಕತೆಯುಳ್ಳ ಮಕ್ಕಳನ್ನು ಪ್ರಾಥಮಿಕ ಶಿಕ್ಷಣದ ಮುಖ್ಯ ವಾಹಿನಿಗೆ ಸೇರಿಸದೇ ಸಾರ್ವತ್ರೀಕರಣವನ್ನು ಸಾಧಿಸಲು ಆಗುವುದಿಲ್ಲ ಎಂಬ ಅಂಶವನ್ನು ಮನಗಾಳಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್.ಪಿ.ಇ. 1986) ನ್ಯೂನತೆಯುಳ್ಳ ಮಕ್ಕಳು ಸಾಧ್ಯವಾದಷ್ಟು ಇತರೆ ಮಕ್ಕಳೊಟ್ಟಿಗೆ ಕಲಿಯಲು ಸಮನ್ವಯ ಶಿಕ್ಷಣದ ಅಗತ್ಯತೆಗೆ ಒತ್ತು ನೀಡಿದೆ. ಅಂಗವಿಕಲ ವ್ಯಕ್ತಿಗಳ ಅಧಿನಿಯಮ (ಪಿ.ಡಬ್ಲ್ಯೂ.ಡಿ. ಆ್ಯಕ್ಟ್ 1995) ಇವರಿಗೆ ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಹಾಗೂ ಸಾರ್ವಜನಿಕರದ್ದಾಗಿರುತ್ತದೆ.

ರಾಷ್ಟ್ರೀಯ ದತ್ತು ನಿಧಿ ಕಾಯ್ದೆಯ (ಎನ್.ಟಿ.ಆ್ಯಕ್ಟ್ 1999) ಬುದ್ಧಿ ಮಾಂದ್ಯ, ಅರ್ಟಿಸಂ, ಮೆದುಳಿನ ಪಾರ್ಶ್ವವಾಯು ಮತ್ತು ಬಹುವಿಧ ಅಂಗವಿಕಲ ವ್ಯಕ್ತಿಗಳ ಕಲ್ಯಾಣಕ್ಕಾಗಿ ಜಾರಿಯಲ್ಲಿದೆ.

**ಶಿಕ್ಷಣ/ವಿದ್ಯಾಭ್ಯಾಸ ಮತ್ತಿತರ ಕ್ಷೇತ್ರದಲ್ಲಿ ಸೌಲಭ್ಯಗಳು :**
**ಸರಕಾರ ಈ ಕೆಳಕಂಡ ಆದೇಶಗಳನ್ನು ನೀಡಿದೆ :**
**ಶಿಕ್ಷಣ :**

1. ಅಂಗವಿಕಲರ ವಿದ್ಯಾಭ್ಯಾಸ/ಶಿಕ್ಷಣಕ್ಕೆಂದು ಸರಕಾರವು ಸಂಸ್ಥೆಗಳಿಗೆ ಸರಕಾರಿ ಶಾಲೆಗಳಿಗೆ ಹಾಗೂ ಸಂಘ ಸಂಸ್ಥೆಗಳಿಗೆ ಹಣ ಸಹಾಯ ನೀಡುತ್ತದೆ. ವಿದ್ಯಾರ್ಥಿ ವೇತನ, ಸಿಬ್ಬಂದಿ ಹಾಗೂ ಶಿಕ್ಷಕರ ವೇತನಗಳು, ಕಟ್ಟಡ ಹಾಗೂ ರ್‍ಯಾಂಪ್ಸ್ ಮತ್ತು ಉಪಕರಣಗಳ ಖರ್ಚುಗಳಿಗೆ ಅನುದಾನ ಲಭ್ಯವಿದೆ.

2.ಅಂಗವಿಕಲ ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿದ್ದುಕೊಂಡು, ಶಾಲೆಗೆ ಹೋಗುತ್ತಿದ್ದರೂ ಅಥವಾ ವಸತಿ ಶಾಲೆಯಲ್ಲಿ (ಹಾಸ್ಟೆಲ್‌ನಲ್ಲಿ) ಇದ್ದರೂ, ಅವರಿಗೆ ವಿದ್ಯಾರ್ಥಿವೇತನ ದೊರೆಯುವುದು.

3. ಪ್ರತಿಭಾವಂತ ವಿದ್ಯಾರ್ಥಿಗಳಿಗೆ (ಶೇ. 60% ಅಥವಾ ಮೇಲ್ಪಟ್ಟು ಅಂಕಪಡೆದ) ಪ್ರೋತ್ಸಾಹಧನ ನೀಡಲಾಗುವುದು.

4. ಸರಕಾರಿ ಅಥವಾ ಸರಕಾರದಿಂದ ಅನುದಾನ ಪಡೆಯುತ್ತಿರುವ ಶಾಲಾ ಕಾಲೇಜುಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ ಶೇಕಡಾ 3 ರಷ್ಟು ಸೀಟು ಮೀಸಲಾತಿ ಇದೆ. (ಇಡಿ: 39: ಯೋಸಕಾ 2000 ದಿನಾಂಕ : 19–02–2000)

5. ವಿದ್ಯಾರ್ಥಿ ವೇತನ ಮತ್ತು ಅಂಗವಿಕಲತೆ ನಿವಾರಣಾ ಶಸ್ತ್ರಚಿಕಿತ್ಸೆ ಸೌಲಭ್ಯ ಪಡೆಯಲು ಪೋಷಕರ ಆದಾಯ ಮಿತಿಯ ನಿರ್ಬಂಧವಿಲ್ಲ.

6. ನರ್ಸರಿಯಿಂದ ಪದವಿಪೂರ್ವ ಶಿಕ್ಷಣದವರೆಗಿನ ಶಾಲಾ ಕಾಲೇಜುಗಳಲ್ಲಿ ಅಂಗವಿಕಲರಿಗೆ ಮತ್ತು ಶೌಚಾಲಯಗಳು ನೆಲ ಮಹಡಿಯಲ್ಲಿರಬೇಕು.

7. ಶಾಲಾ /ಕಾಲೇಜುಗಳಲ್ಲಿ ಅಂಗವಿಕಲರಿಗೆ ಪ್ರವೇಶ ನಿರಾಕರಿಸುವಂತಿಲ್ಲ. (ಇಡಿ:132:ಯೋಕ 2000 ದಿನಾಂಕ 30–05–2000)

8. ಜಿಲ್ಲಾ ಪಂಚಾಯತಿ / ಶ್ರಯ / ಅಂಬೇಡ್ಕರ್ / ಇಂದಿರಾ ಆವಾಸ್ ಇತ್ಯಾದಿ ವಸತಿ ಯೋಜನೆಗಳಲ್ಲಿ ಶೇಕಡಾ 3 ರಷ್ಟು ನಿವೇಶನಗಳನ್ನು ಅಂಗವಿಕಲರಿಗೆ ಕೊಡಬೇಕು. (ಮಮಿ 515 ಪಿಹೆಚ್‌ಪಿ 2001 ದಿನಾಂಕ 22–11–2001

9. ದೃಷ್ಟಿದೋಷವಿರುವ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಗಳಲ್ಲಿ ಯಾರನ್ನಾದರೂ ಬರಹಗಾರರನ್ನಾಗಿ ಉಪಯೋಗಿಸಿಕೊಳ್ಳಬಹುದು.

ಎಸ್.ಎಸ್.ಎಲ್.ಸಿ. – ಎ/ಮಾರ್ಚ್/2004 ದಿನಾಂಕ 26–03–2004, ಪದವಿ – ಇಡಿ/15/ಜೂನ್/2004 ದಿನಾಂಕ : 05–03–2004, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಆದೇಶದ ಪ್ರಕಾರ ಅಂಧ, ಶ್ರವಣದೋಷ, ಬುದ್ಧಿಮಾಂದ್ಯತೆ ಇರುವ ವಿದ್ಯಾರ್ಥಿಗಳಿಗೆ, ಸ್ಪ್ಯಾಸ್ಟಿಕ್ ತೊಂದರೆ ಇರುವ ತೊಂದರೆಗಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಒಂದು ಗಂಟೆ ಹೆಚ್ಚು ಕಾಲಾವಕಾಶ ಕೊಡಬೇಕು. (ನಿ.ಅ.ಶಾ.ಎಸ್.ಎಸ್.ಎಲ್.ಸಿ./2002/ಅಂಧ ಹೆ.ರಾ. ತಾರೀಖು 7–3–2002)

10. ಸರ್ಕಾರಿ ಮಾನ್ಯತೆ ಪಡೆದಿರುವ ಶಾಲೆಗಳಲ್ಲಿ ಓದುತ್ತಿರುವ ಶ್ರವಣದೋಷವಿರುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಒಂದೇ ಭಾಷೆಕಲಿತರೆ ಸಾಕು (ಸಕಕಾ 79 ಪಿಹೆಚ್‌ಪಿ 78 ತಾರೀಕು 16:18–1–78)

11. ಕಲಿಯುವ ತೊಂದರೆ (dyslexia) ಇರುವ ಮಕ್ಕಳು : (ಓದು, ಬಾಯಿಪಾಠದಲ್ಲಿ ಕುಶಲವಾಗಿದ್ದರೂ ಇವರಿಗೆ ಭಾಷೆ ಕಲಿಕೆ, ಬರವಣಿಗೆ ಮತ್ತು ಗಣಿತ ಬಿಡಿಸುವುದರಲ್ಲಿ ತೊಂದರೆ ಇರುತ್ತದೆ. ಇವರಿಗೆ ಕಲಿಸಲು ವಿಶೇಷ ಕ್ರಮಗಳಿವೆ) ಸರಕಾರಿ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಓದುತ್ತಿದ್ದು, ಅಧಿಕೃತ ಮನೋವೈದ್ಯರಿಂದ ಪ್ರಮಾಣ ಪತ್ರ ಪಡೆದಿದ್ದಲ್ಲಿ, ಇವರಿಗೆ ಪರೀಕ್ಷೆಯಲ್ಲಿ ಬರೆಯಲು ಒಂದು ಗಂಟೆ ಹೆಚ್ಚು ಕಾಲಾವಕಾಶ ಇದೆ ಹಾಗೂ ಇವರು ಮಾಧ್ಯಮ ಭಾಷೆಯೊಂದನ್ನು ಒಂದು ಗಂಟಡೆ ಹೆಚ್ಚು ಕಾಲಾವಕಾಶ ಇದೆ ಹಾಗೂ ಇವರು ಮಾಧ್ಯಮ ಭಾಷೆಯೊಂದನ್ನು ಕಲಿತರೆ ಸಾಕು. (ಸಕಕಾ 141 ಪಿಹೆಚ್‌ಪಿ 92 ತಾರೀಕು 30–06–92 ಮತ್ತು 30–06–92 ಮತ್ತು ಮಮಅ 65 ಪಿಎಚ್‌ಪಿ 200 ತಾರೀಕು 10–03–2000)

ವೈದ್ಯಕೀಯ :

12. ಗುರುತಿನ ಚೀಟಿಯನ್ನು ಅಂಗವಿಕಲತೆ ಪ್ರಮಾಣ ಪತ್ರವನ್ನಾಗಿ ಮಾನ್ಯತೆ ಮಾಡುವ ಬಗ್ಗೆ ಸುತ್ತೋಲೆ. (ಮಮ:284 ಪಿ.ಎಚ್.ಪಿ. 2002 ದಿನಾಂಕ : 14062002)

13. ಸರಕಾರ ಎಲ್ಲಾ ಜಿಲ್ಲೆಗಳಲ್ಲಿ ವೈದ್ಯಕೀಯ ಮಂಡಳಿಗಳನ್ನು ಸ್ಥಾಪಿಸಬೇಕು. ಜಿ.ಓ.ನಂ. ಡಬ್ಲ್ಯೂಸಿಡಿ. / 143ಪಿ.ಎಚ್.ಪಿ. 12–03–003

ಎಂ.ಡಿ.ಎಕ್ಸ್./143 ದಿನಾಂಕ 02–03

14. ಮಾನಸಿಕ ಅಸ್ವಸ್ಥರ ಚಿಕಿತ್ಸೆ ಮುಂತಾದುದರ ಬಗ್ಗೆ ವೈದ್ಯಕೀಯ ಮಂಡಳಿಗಳನ್ನು ಸ್ಥಾಪಿಸಬೇಕು.

15. ಅಂಗವಿಕಲ ವ್ಯಕ್ತಿಗಳಿಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಉಚಿತವಾಗಿ ವಿತರಿಸುವಂತೆ ನಿರ್ದೇಶನಾಲಯದ ಸುತ್ತೋಲೆ ಎಂ.ಡಿ.ಎಕ್ಸ್. / 143:2002–03 ದಿನಾಂಕ : 23–02–2004ರಲ್ಲಿ ಹೊರಡಿಸಲಾಗಿದೆ. (ಎಂಡಿಎಕ್ಸ್ (1) 142:2002–03:16–09–2004

ಇತರೆ ಸೌಲಭ್ಯಗಳು :

16. ಈ ಕೆಳಕಂಡ ಸೌಲಭ್ಯಗಳಿಗೆ ಆದಾಯ ಮಿತಿ ಪ್ರಮಾಣ ಪತ್ರವನ್ನು ಕೊಡಬೇಕಾಗಿಲ್ಲ.

1) ಅಂಗವಿಕಲರಿಗೆ ವಿದ್ಯಾರ್ಥಿ ವೇತನ.

2) ಉಚಿತ ಬಸ್ ಪಾಸ್.

3) ರೂ. 1,000–00ಗಿಂತ ಕಡಿಮೆ ಮೊತ್ತದ ಸಾಧನ ಸಲಕರಣೆಗಳ ಯೋಜನೆ. (ರೂ. 1,000–00 ಗಿಂತ ಹೆಚ್ಚು ಮೊತ್ತದ ಸಲಕರಣ ಯೋಜನೆಗೆ ಆದಾಯ ಪ್ರಮಾಣ ಪತ್ರ ಕೊಡಬೇಕು.)

4) ವಿಕಲಾಂಗತೆಯನ್ನು ಸರಿಪಡಿಸುವ ಶಸ್ತ್ರಚಿಕಿತ್ಸೆ ಅಥವಾ ಕರೆಕ್ಟಿವ್ ಸರ್ಜರಿ (ಡಬ್ಲ್ಯೂಸಿ.ಡಿ/473ಪಿ.ಎಚ್. 2001;28–06–02)

17. ಎಲ್ಲಾ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿ ಇರಿಸುವ ದೂರವಾಣಿ ಬೂತ್‌ಗಳ ಹಂಚಿಕೆಯಲ್ಲಿ ಅಂಗವಿಕಲರಿಗೆ ಆದ್ಯತೆ ನೀಡಲಾಗಿದೆ.

18. ಅಂಗವಿಕಲರು ತಮ್ಮ ಸಮಸ್ಯೆಗಳ ಬಗ್ಗೆ, ಆಯಾ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಅಂಗವಿಕಲರ ಅಭಿವೃದ್ಧಿ ಇಲಾಖೆಯ ನಿರ್ದೇಶಕರವರನ್ನು ಕಂಡು ಕುಂದುಕೊರತೆಗಳ ಬಗ್ಗೆ ವಿಚಾರಿಸಬಹುದು. (ಡಬ್ಲ್ಯೂಸಿ.ಡಿ./99ಪಿ.ಎಚ್.ಪಿ 2003:18–10–2003)

19. ಅಂಗವಿಕಲರು ನೀಡುವ ದೂರಿನ ದಾಖಲೆ, ಕೋರುವ ರಕ್ಷಣೆ ಮತ್ತು ಪ್ರಕರಣಗಳನ್ನು ತಾರತಮ್ಯ ಮಾಡದೇ, ದಾಖಲಿಸಿ ವಿಲೇವಾರಿ ಮಾಡಬೇಕು. (ಆರ್.ಎಲ್.ಎನ್. (7)/ 10/2003–04 ದಿನಾಂಕ : 16–04–2004) 20. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ತಾಲ್ಲೂಕು ಕಾರ್ಯನಿರ್ವಹಣೆ ಅಧಿಕಾರಿಗಳು ಆಯಾ ಪ್ರದೇಶದಲ್ಲಿರುವ ಅಂಗವಿಕಲರ ಕುಂದುಕೊರತೆಗಳನ್ನು ನಿವಾರಿಸುವ ನೋಡಲ್ ಅಧಿಕಾರಿ ಎಂದು ನೇಮಿಸಲಾಗಿದೆ. (ಜಿ.ಓ. ಗ್ರಾ ಅಪ:103:ಪಬವ:2004:24–06–2004)

21. ಅಂಗವಿಕಲರ ಅಧಿನಿಯಮದ ಸೆಕ್ಸನ್ 50ರ ಪ್ರಕಾರ,ಅಂಗವಿಕಲರ ಸೇವೆಗೆಂದು ಇರುವ ಸ್ವಯಂ ಸೇವಾ ಸಂಸ್ಥೆಗಳನ್ನು ನೋಂದಣಿ ಮಾಡುವ ಅಧಿಕಾರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾಮಟ್ಟದ 'ಉಪನಿರ್ದೇಶಕರು' ಎಂದು ನೇಮಕ ಮಾಡಲಾಗಿದೆ. (ಡಬ್ಲ್ಯೂ. ಸಿ.ಡಿ. /212ಪಿ. ಎಚ್.ಪಿ. 2004 ದಿನಾಂಕ : 24–09–2004)

22. ಅಂಗವಿಕಲತೆಯ ವಿಷಯಕ್ಕೆ ಸಂಬಂಧಪಟ್ಟ ಕಡತಗಳನ್ನುಒಂದು ತಿಂಗಳೊಳಗೆ ವಿಲೇವಾರಿ ಮಾಡತಕ್ಕದ್ದು. (ಓ.ಜಿ./166:ಪಿ.ಎಚ್.ಪಿ.:2004 ದಿನಾಂಕ : 05–05–2004)

23. ವಸತಿ ಯೋಜನೆಗಳಲ್ಲಿ ಅಂಗವಿಕಲರಿಗೆ ಶೇಕಡ 5 ರಷ್ಟು ಮೀಸಲಾತಿ ಇರಿಸಿದೆ. (ವ ಇ 112 ಹೆಚ್.ಡಬ್ಲ್ಯೂಹೆಚ್. 2003 ಬೆಂಗಳೂರು ದಿನಾಂಕ : 24–09–2003)

24. ವಿಶ್ವ ಅಂಗವಿಕಲ ವ್ಯಕ್ತಿಗಳ ದಿನಾಚರಣೆಯನ್ನು ಡಿಸೆಂಬರ್ 3 ರಂದು ಅರ್ಥಪೂರ್ಣವಾಗಿ ಆಚರಿಸುವುದು.

25. ಶಾಲೆಗಳಲ್ಲಿ ಈ ಮಕ್ಕಳಿಗೆ ಅನುಕೂಲವಾಗುವಂತೆ ಶೌಚಾಲಯ ವ್ಯವಸ್ಥೆ ಮಾಡುವುದು.

ಸೂಚನೆ : 1) ಈ ಪುಸ್ತಕ ರೂಪದ ಪ್ರಕಟಣೆಯ ಸಮಯದಲ್ಲಿ ಅಂಗವಿಕಲರಿಗಾಗಿ ಸರಕಾರವು ಯೋಜಿಸಿರುವ ಸೌಲಭ್ಯಗಳನ್ನು ಮೇಲಿನಂತಿವೆ. ಆದರೆ ಈ ಯೋಜನೆಗಳ ತಾಂತ್ರಿಕ ಮಾಹಿತಿಗಳು, ಮಾರ್ಗಸೂಚಿಗಳಿಗಾಗಿ ಹಾಗೂ ಇನ್ನೂ ಹೆಚ್ಚಿನ ಸೌಲಭ್ಯಗಳ ಮಾಹಿತಿಗಾಗಿ ಸರ್ಕಾರದ ಅಧಿಕೃತ ಸುತ್ತೋಲೆಗಳನ್ನು ವಿವಿಧ ಇಲಾಖೆಗಳ ಆದೇಶಗಳನ್ನು ಗಮನಿಸಲು ಕೋರಿದೆ.

2) ಸರ್ಕಾರ ಒದಗಿಸುವ ಸೌಲಭ್ಯಗಳು ಪ್ರತಿಶತ 40ಕ್ಕಿಂತಲೂ ಹೆಚ್ಚು ಅಂಗವಿಕಲತೆಯುಳ್ಳವರಿಗೆ ಮಾತ್ರ ದೊರೆಯುತ್ತವೆ. ಸರ್ವ ಶಿಕ್ಷಣ ಅಭಿಯಾನದಲ್ಲಿ ಸಮನ್ವಯ ಶಿಕ್ಷಣವನ್ನು ಒಂದು ಪ್ರಮುಖ ಮಧ್ಯವರ್ತಿ ಚಟುವಟಿಕೆಯನ್ನಾಗಿ ಪರಿಗಣಿಸಲಾಗಿದೆ. ಇತರೆ ಮಕ್ಕಳನ್ನು ಪ್ರೀತಿಸುವಂತೆ, ವಿಶೇಷ ಅವಶ್ಯಕತೆಯುಳ್ಳ ಮಕ್ಕಳನ್ನು ಪ್ರೀತಿಸಿ ಹಾಗೂ ಒಪ್ಪಿಕೊಂಡು ಎಲ್ಲಾ ಮಕ್ಕಳಂತೆ ಶಿಕ್ಷಣ ಪಡೆಯುವ ಹಕ್ಕು ಖಾತರಿಪಡಿಸಬೇಕಾಗಿದೆ. ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ಅನುಕೂಲವಾಗುವಂತೆ ಶೌಚಾಲಯ, ರ್‍ಯಾಂಪ್ಸ್‌ಗಳನ್ನು ಸರ್ವ ಶಿಕ್ಷಣ ಅಭಿಯಾನದಿಂದ ಶಾಲೆಗಳಲ್ಲಿ ನಿರ್ಮಿಸಲಾಗುತ್ತದೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಪ್ರತಿ ವರ್ಷ ವೈದ್ಯಕೀಯ ತಪಾಸಣೆ ಏರ್ಪಡಿಸಿ ತಜ್ಞ ವೈದ್ಯರ ಸಲಹೆ ಮೇರೆಗೆ ಮಕ್ಕಳಿಗೆ ಅವಶ್ಯಕವಿರುವ ಸಾಧನ ಸಲಕರಣೆಗಳನ್ನು ವಿತರಿಸಲಾಗುತ್ತದೆ. ಮಕ್ಕಳ ಸಾಮರ್ಥ್ಯ ಹಾಗೂ ಕೊರತೆಗಳನ್ನು ಗುರುತಿಸಿ, ಯೋಜನೆ ತಯಾರಿಸಿ ಅವರ ಕಲಿಕೆಗೆ ಅವಶ್ಯವಿರುವ ಕಲಿಕೋಪಕರಣಗೊಂದಿಗೆ ಶಾಲೆಗಳಲ್ಲಿ ಪಾಠ ನಡೆಸಲಾಗುತ್ತಿದೆ. ಎಲ್ಲಾ ಮಕ್ಕಳಂತೆ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಮಾನ್ಯ ಅವಕಾಶಗಳನ್ನು ಕಲ್ಪಿಸುವುದು ನಮ್ಮೆಲ್ಲರ ಹೊಣೆ. ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ಅನುಕಂಪತೋರದೆ, ಅವಕಾಶ ಕಲ್ಪಿಸಿ ಅವರೂ ಸಹಿತ ಇತರ ಮಕ್ಕಳಂತೆ ಜೀವನದಲ್ಲಿ ಸಾಧನೆ ಮಾಡಲು ಸಹಕರಿಸುವುದು ತುರ್ತು ಆದ್ಯತೆಯಾಗಿದೆ.

ಸರಕಾರದ ಯಾವುದೇ ಶಾಲೆಗಳಲ್ಲಿ ಯಾವುದೇ ಬಗೆಯ ವಿಕಲತೆ ಹೊಂದಿದ ಮಗುವನ್ನು ಕೂಡಾ ಶಾಲೆಗೆ ದಾಖಲು ಮಾಡಿಕೊಳ್ಳಲಾಗುತ್ತಿದೆ. ಅವಶ್ಯಕತೆಗಳಿಗನುಕೂಲವಾಗಿ ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಕಲಿಕೆ ಬಲಗೊಳ್ಳಲು ಶಾಲೆಗಳಲ್ಲಿ ಸೂಕ್ತ ಬೆಳಕು, ಆಸನ ವ್ಯವಸ್ಥೆ ಪಠ್ಯಕ್ರಮ ಅಳವಡಿಕೆ, ಸಹಪಾಠಿ ನೆರವಿನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಪ್ರಗತಿಗಾಗಿ/ ಶೈಕ್ಷಣಿಕ ಅಭಿವೃದ್ಧಿಗಾಗಿ ವಿವಿಧ ಸಂಘ ಸಂಸ್ಥೆಗಳವರು ಜನಪ್ರತಿನಿಧಿಗಳು, ಸಮುದಾಯದ ಬಾಂಧವರು, ವಿವಿಧ ಇಲಾಖೆಗಳ ನೌಕರರು, ಶಿಕ್ಷಕರು, ಪಾಲಕರು, ಪೋಷಕರು ಶ್ರಮಿಸುತ್ತಿದ್ದಾರೆ. ತೀವ್ರ ನ್ಯೂನತೆ ಹೊಂದಿದ್ದ, ಶಾಲೆಗೆ ಬರಲು ಸಾಧ್ಯವಾಗದ 6 ರಿಂದ 14 ವರ್ಷದೊಳಗಿನ ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗಾಗಿ **"ಗೃಹ ಆಧಾರಿತ"** ಶಿಕ್ಷಣಕ್ಕಾಗಿ 13 ಕೇಂದ್ರಗಳನ್ನು ನಮ್ಮ ಕೊಪ್ಪಳ ತಾಲ್ಲೂಕಿನಲ್ಲಿ ತೆರೆಯಲಾಗಿದೆ. ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿ 3 ಜನ ಸಂಯೋಜಿತ ಶಿಕ್ಷಣ ಸಂಪನ್ಮೂಲ ಶಿಕ್ಷಕರು ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಪ್ರಗತಿಗಾಗಿ ಪ್ರತಿಯೊಂದು ಬ್ಲಾಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

**–ಡಾ.ಬಿ.ಕೆ.ಎಸ್.ವರ್ಧನ್**

ಕ್ಷೇತ್ರಶಿಕ್ಷಣಾಧಿಕಾರಿ ಕೊಪ್ಪಳ ತಾಲೂಕು

# ಕೇವಲ ಶಿಕ್ಷಕ



ಒಬ್ಬ ಸೇವಾಭಿಲಾಷಿಯನ್ನು ಯಾರೋ ಕೇಳಿದರು – 'ನೀವು' ಯಾವ ಕೆಲಸವನ್ನು ಚೆನ್ನಾಗಿ ಮಾಡಬಹುದು ಎಂದು ನಿಮಗೆ ಅನಿಸುತ್ತದೆ, ಹೇಳಿ ?'

ಆ ತರುಣ ಗೃಹಸ್ಥ ಹೇಳಿದ– ನನಗೇನೋ ನಾನು ಶಿಕ್ಷಣದ ಕೆಲಸ; ಮಾಡಬಲ್ಲೆ ಅನಿಸುತ್ತದೆ. ನನಗೆ ಅದರಲ್ಲಿ ರುಚಿಯಿದೆ.'

'ಅದು ಸರಿ. ಸಾಧಾರಣವಾಗಿ ಮನುಷ್ಯನಿಗೆ ಯಾವುದು ಬರುತ್ತದೆಯೋ ಅದರಲ್ಲಿಯೇ ರುಚಿ ಹುಟ್ಟುತ್ತದೆ. ಆದರೆ ನಿಮಗೆ ಇನ್ನಾವುದಾದರೂ ಕೆಲಸಮಾಡಲು ಬರುತ್ತದೆಯೋ ಇಲ್ಲವೋ ?

'ಇಲ್ಲ ನನಗೆ ಇನ್ನಾವ ಕೆಲಸವೂ ಬಾರದು. ಕಲಿಸುವುದೊಂದೇ ಅದನ್ನು ನಾನು ಚೆನ್ನಾಗಿ ಮಾಡಬಲ್ಲೆ ಎಂಬ ಭರವಸೆ ಇದೆ.'

'ಸರಿ, ನೀವು ಚೆನ್ನಾಗಿ ಕಲಿಸುವುದರಲ್ಲೇನು ಸಂದೇಹ ? ಆದರೆ ಚೆನ್ನಾಗಿ ಏನು ಕಲಿಸುತ್ತೀರಿ ? ನೂಲುವುದೇ, ನೇಯುವುದೇ. ಏನು?'

'ಇಲ್ಲ, ಅದಾವುದನ್ನೂ ಕಲಿಸಲು ಬರುವುದಿಲ್ಲ'.

'ಹೊಲಿಗೆ ? ಬಣ್ಣ ಹಾಕುವುದು. ಬಡಗಿ ಕೆಲಸ ?'

'ಇಲ್ಲ. ಇವು ಯಾವುದೂ ಅಲ್ಲ.

'ಅಡಿಗೆ ಮಾಡುವುದು, ಬೀಸುವುದು ಮುಂತಾದ ಮನೆಗೆಲಸ ಕಲಿಸುತ್ತೀರಾ ?

'ಇಲ್ಲ. ಅಂಥ ಕೆಲಸವನ್ನು ನಾನು ಮಾಡಿಲ್ಲ. ಕೇವಲ ಶಿಕ್ಷಣ..."

'ಕೇಳಿದುದಕ್ಕೆಲ್ಲಾ ಇಲ್ಲ. ಇಲ್ಲ ಎನ್ನುತ್ತೀರ, ಕೇವಲ ಶಿಕ್ಷಣದ ಕೆಲಸಮಾಡುತ್ತೇನೆ ಎನ್ನುತ್ತೀರಿ. ಹಾಗೆಂದರೇನು ? ತೋಟಗಾರಿಕೆ ಕಲಿಸುತ್ತೀರಾ ?'

ಆ ಸೇವಾಭಿಲಾಷೆಗೆ ಸ್ವಲ್ಪರೇಗಿತು. 'ಇದೇನು ಹೀಗೆ ಕೇಳುತ್ತೀರಿ? ಮೊದಲೇ ಹೇಳಿದೆನಲ್ಲ, ನನಗೆ ಬೇರೆ ಯಾವ ಕೆಲಸವೂ ಬಾರದು. ನಾನು ಸಾಹಿತ್ಯವನ್ನು ಕಲಿಸುತ್ತೇನೆ.

ಪ್ರಶ್ನೆ ಮಾಡುತ್ತಿದ್ದವರು ವಿನೋದದಿಂದ.' ಈಗ ನಿಮ್ಮ ಮಾತು ಸ್ವಲ್ಪ ತಿಳಿಯಿತು. ರಾಮಚರಿತ ಮಾನಸದಂಥ ಪುಸ್ತಕ ಬರೆಯುವುದನ್ನು ಕಲಿಸುತ್ತೀರಾ ?' ಎಂದ.

ಇನ್ನು ಸೇವಾಭಿಲಾಷಿಗೆ ತಡೆಯಲಾಗಲಿಲ್ಲ. ತಲೆಗೆ ಬಿಸಿಯೇರಿತು. ಅವನ ಬಾಯಿಂದ ಅಡ್ಡ ಮಾತು ಹೊರಡುವುದರಲ್ಲಿತ್ತು. ಅಷ್ಟರಲ್ಲಿಯೆ ಪ್ರಶ್ನೆ ಕೇಳುತ್ತಿದ್ದವನು – 'ಶಾಂತಿ, ಕ್ಷಮೆ, ತಿತಿಕ್ಷೆಗಳನ್ನು ಕಲಿಸುತ್ತೀರಾ? ಎಂದ.

ಇಲ್ಲಿಗೆ ಮಿತಿ ಮೀರಿತು. ಬೆಂಕಿಗೆ ಸೀಮೆಯೆಣ್ಣೆ ಸುರಿದಂತಾಯಿತು. ಇನ್ನೇನು ಬೆಂಕಿ ಧಗಧಗಿಸಬೇಕು. ಅಷ್ಟರಲ್ಲಿ ಪ್ರಶ್ನೆಕಾರ ನೀರುಚೆಲ್ಲಿ ಆರಿಸಿದ. 'ಓಹೋ, ಗೊತ್ತಾಯಿತು. ನೀವು ಓದುಬರಹ ಕಲಿಸಬಲ್ಲಿರಿ. ಬಾಳಿನಲ್ಲಿ ಅದಕ್ಕೂ ಉಪಯೋಗವಿದೆ, ಇಲ್ಲವೇ ಇಲ್ಲ ಎನ್ನುವಂತಿಲ್ಲ. ಹೋಗಲಿ ನೀವು ನೇಯ್ಗೆಯನ್ನು ಕಲಿಯುತ್ತೀರಾ ?'

'ಈಗ ಹೊಸದನ್ನು ಕಲಿಯುವುದಿಲ್ಲ. ಅಲ್ಲದೆ, ನೇಯ್ಗೆ ಕೆಲಸ ನನಗೆ ಕಲಿತರೂ ಬರುವುದಿಲ್ಲ. ಇವೊತ್ತಿನವರೆಗೆ ನನ್ನ ಕೈಗಳಿಗೆ ಅಂಥ ರೂಢಿಯೆ ಆಗಿಲ್ಲ.'

'ಸರಿ ಅದರಿಂದ ಕಲಿಯಲು ನಾಲ್ಕುದಿನ ಹೆಚ್ಚು ಹಿಡಿಯಬಹುದು. ಕಲಿಯಲಿಕ್ಕೆ ಬರುವುದಿಲ್ಲ ಎನ್ನುವಂಥದೇನಿದೆ ?'

'ನನಗೆ ಈ ಕೆಲಸ ಬರುವುದೇ ಇಲ್ಲ. ಒಂದು ವೇಳೆ ಬಹಳ ಕಷ್ಟಪಟ್ಟು ಕಲಿತೆ ಎನ್ನಿ. ಇದು ಬರೀ ಜಂಜಾಟದ್ದು. ನನ್ನಿಂದ ಸಾಧ್ಯವಿಲ್ಲ ಈ ಕೆಲಸ'.

'ಸರಿ ಬರೆಯುವುದನ್ನು ಕಲಿಸುತ್ತೀರಲ್ಲ. ಹಾಗೇ ನೀವೇ ಬರೆಯುವ ಕೆಲಸ ಮಾಡುತ್ತೀರೋ?'

'ಆಗಬಹುದು. ಸುಮ್ಮನೆ ಕೂತು ನನಗೆ ಬೇಸರ ಆದರೆ ಮಾಡಬಹುದು.'

ಇಲ್ಲಿಗೆ ಮಾತು ಮುಗಿಯಿತು. ಮುಂದೇನಾಯಿತೋ ನಮಗೆ ಅಗತ್ಯವಿಲ್ಲ.

ಶಿಕ್ಷಕರ ಮನಸ್ಸನ್ನು ಅರಿಯಲು ಈ ಮಾತು ಸಾಕು.

ಈತ ಆದರ್ಶ ಶಿಕ್ಷಕನಾಗಲಾರ. ಕಾರಣ–

1. ಜೀವನೋಪಯೋಗಿಯಾದ ಯಾವ ಕ್ರಿಯಾಶೀಲತೆಯೂ ಇವನಲ್ಲಿ ಇಲ್ಲ. 2. ಹೊಸ ಕೆಲಸ ಯಾವುದನ್ನು ಕಲಿಯಲೂ ಸ್ವಭಾವತಃ ಅಸಮರ್ಥ. ಕೆಲಸ ಮಾಡುವುದೆಂದರೆ ಬೇಸರಗೊಳ್ಳುತ್ತಾನೆ. 3. ಕೇವಲ ಶಿಕ್ಷಣದ ಗರ್ವ ಉಳ್ಳವನು, 4. ಪುಸ್ತಕಗಳಲ್ಲಿ ಹೂತು ಹೋಗಿದ್ದಾನೆ, 5. ಸೋಮಾರಿಜೀವ.

**ಕೇವಲ ಶಿಕ್ಷಣ** ಎಂದರೆ ಜೀವನದಿಂದ ಬೇರೆಮಾಡಿದ

ಜೀವವಿಲ್ಲದ ಶಿಕ್ಷಣ. ಇಂಥ ಶಿಕ್ಷಕ ಎಂದರೆ 'ಮೃತಜೀವಿ'.

ಮೃತಜೀವಿಯನ್ನೇ ಕೆಲವರು ಬುದ್ಧಿಜೀವಿ ಎನ್ನುವುದುಂಟು. ಇದು ವಾಣಿಯ ವ್ಯಭಿಚಾರ. ಯಾರು ಬುದ್ಧಿಜೀವಿ ? ಗೌತಮಬುದ್ಧ, ತುಕಾರಾಮ, ಶಂಕರಾಚಾರ್ಯ, ಜ್ಞಾನೇಶ್ವರರಂಥವರು ಬುದ್ಧಿ ಜೀವನದ ಜ್ಯೋತಿಯನ್ನು ಬೆಳಗಿಸಿದ್ದಾರೆ. ಬುದ್ಧಿಗ್ರಾಹ್ಯ ಜೀವನವೆಂದರೆ ಅತೀಂದ್ರಿಯ ಜೀವನವೆಂದು ಗೀತೆಯಲ್ಲಿ ಹೇಳಿದೆ.

ದೇಹಾಸಕ್ತಿ ತುಂಬಿ ತುಳುಕುವವನು ಇಂದ್ರಿಯಗಳ ದಾಸನಾದವನು ಬುದ್ಧಿಜೀವಿಯಲ್ಲ. ಬುದ್ಧಿಯ ಪತಿ ಆತ್ಮ. ಅದನ್ನು ಬಿಟ್ಟು ದೇಹದ ಬಾಗಿಲು ಕಾಯುವ ದಾಸ್ಯಬುದ್ಧಿ ವ್ಯಭಿಚಾರಿಣೀ–ಬುದ್ಧಿ. ಇಂಥ ಬುದ್ಧಿಯ ಬಾಳು ಮರಣ ಸದೃಶಿ. ಅದನ್ನು ನಂಬಿ ಬಾಳುವವನು ವಿಶೇಷಾರ್ಥದಲ್ಲಿ ಮೃತಜೀವಿ. ಈ ಕೇವಲ–ಶಿಕ್ಷಣದಿಂದ ಬದುಕುವಂಥವರನ್ನು ಮನು 'ಮೃತಕಾಧ್ಯಾಪಕ' ಅಥವಾ 'ವೇತನಭೋತಿ' (ಸಂಬಳಕಾರ) ಶಿಕ್ಷಕರೆಂದು ಕರೆದು ಇವರನ್ನು ಶ್ರಾದ್ಧಕ್ಕೆ ಕರೆಯಬಾರದೆಂದು ನಿಷೇಧಿಸಿದ್ದಾನೆ. ಇದು ಸರಿ. ಸತ್ತ ಹಿಂದಿನ ಹಿರಿಯರ ನೆನಪನ್ನು ಶ್ರಾದ್ಧದಲ್ಲಿ ಜೀವಂತಗೊಳಿಸಬೇಕು. ಪ್ರತ್ಯಕ್ಷ ಜೀವನವನ್ನೆನ್ನುವ ಜೀವನ ಮಾಡಿಕೊಂಡಿರುವವರಿಂದ ಏನು ಉಪಯೋಗವಾದೀತು ?

ಶಿಕ್ಷಕರನ್ನು ಮೊದಲು 'ಆಚಾರ್ಯ' ಎನ್ನುತ್ತಿದ್ದರು. ಆಚಾರ್ಯ ಎಂದರೆ ಆಚಾರವಂತ. ತಾನು ಆದರ್ಶಜೀವನ ನಡೆಸುತ್ತ ರಾಷ್ಟ್ರ ಅದನ್ನು ಆಚರಿಸುವಂತೆ ಮಾಡುವವನು **ಆಚಾರ್ಯ**. ಅಂಥ ಆಚಾರ್ಯರ ಪುರುಷಾರ್ಥದಿಂದಲೇ ರಾಷ್ಟ್ರ ನಿರ್ಮಾಣವಾಯಿತು. ಈಗ ಹಿಂದುಸ್ತಾನಕ್ಕೆ ಹೊಸ ತಳಹದಿ ಹಾಕಬೇಕು. ರಾಷ್ಟ್ರನಿರ್ಮಾಣದ ಕೆಲಸ ಈಗ ನಮ್ಮ ಇದಿರಿಗಿದೆ. ಆಚಾರವಂತ ಶಿಕ್ಷಕರಿಲ್ಲದೆ ಇದು ಅಸಂಭವ.

ಆದುದರಿಂದಲೇ ರಾಷ್ಟ್ರೀಯ ಶಿಕ್ಷಣದ ಪೆಟ್ಟು ಅಷ್ಟು ಮಹತ್ತದ್ದು ಅದರ ವ್ಯಾಖ್ಯೆಯನ್ನೂ ವ್ಯಾಪ್ತಿಯನ್ನೂ ನಾವು ಚೆನ್ನಾಗಿ ತಿಳಿಯಬೇಕು ರಾಷ್ಟ್ರದ ಸುಶಿಕ್ಷಿತ ವರ್ಗ ನಿಷ್ಪ್ರಭ, ನಿಷ್ಕ್ರಿಯ ಆಗುತ್ತಿದೆ. ರಾಷ್ಟ್ರೀಯ ಶಿಕ್ಷಣದ ಅಗ್ನಿಯನ್ನು ಹೊತ್ತಿಸುವುದೊಂದೇ ಇದಕ್ಕೆ ಪರಿಹಾರ.

ಆದರೆ ಅದು 'ಅಗ್ನಿ'ಯೇ ಆಗಬೇಕು. ಅಗ್ನಿಗೆ ಎರಡು ಶಕ್ತಿ ಉಂಟು ಒಂದು 'ಸ್ವಾಹಾ', ಇನ್ನೊಂದು 'ಸ್ವಧಾ'. ಇವೆರಡೂ ಶಕ್ತಿ ಇದ್ದಲ್ಲಿ ಅಗ್ನಿಯಿದೆ. ಆತ್ಮಾಹುತಿ ಕೊಡುವ, ಆತ್ಮತ್ಯಾಗ ಮಾಡುವ ಶಕ್ತಿ ಸ್ವಾಹಾಶಕ್ತಿ. ಆತ್ಮಧಾರಣೆಯ ಶಕ್ತಿ ಸ್ವಧಾ ಶಕ್ತಿ. ಇವೆರಡೂ ಶಕ್ತಿಗಳು ರಾಷ್ಟ್ರೀಯ ಶಿಕ್ಷಣದಲ್ಲಿ ಜಾಗ್ರತವಾಗಬೇಕು. ಇವೆರಡೂ ಶಕ್ತಿ ಜಾಗ್ರತಗೊಂಡಾಗಲೇ ಅದು ರಾಷ್ಟ್ರೀಯ ಶಿಕ್ಷಣ. ಉಳಿದುದೆಲ್ಲವೂ ಮೃತ–ನಿರ್ಜೀವ ಶಿಕ್ಷಣ.

ಮೇಲೆ ಮೇಲೆ ನೋಡಿದರೆ ನಮ್ಮ ರಾಷ್ಟ್ರೀಯ ಶಿಕ್ಷಕರು ಬಹಳ ಆತ್ಮತ್ಯಾಗ ಮಾಡಿದರೆ ಕಾಣುತ್ತದೆ. ಇದು ಅಷ್ಟು ನಿಜವಲ್ಲ. ಒಮ್ಮೊಮ್ಮೆ ಮಾಡಿದ ಸ್ವಾರ್ಥತ್ಯಾಗ, ಗರ್ಭಿತತ್ಯಾಗ ಆತ್ಮತ್ಯಾಗವಲ್ಲ. ಅದಕ್ಕೆ ಒಂದು ಪರೀಕ್ಷೆಯಿದೆ. ಆತ್ಮತ್ಯಾಗದ ಶಕ್ತಿಯಿದ್ದಲ್ಲಿ ಆತ್ಮಧಾರಣೆಯ ಶಕ್ತಿಯೂ ಇರಲೇಬೇಕು. ಆತ್ಮಧಾರಣೆಯ ಶಕ್ತಿಯೆ ಇಲ್ಲದಿದ್ದರೆ ಯಾರಾದರೂ ಏಕೆ ತ್ಯಾಗ ಮಾಡಬೇಕು ? ನೆಟ್ಟಗೆ ನಿಂತುಕೊಳ್ಳಲಾರದ ಆತ್ಮ ಜಗಿದೀತೆ ? ಆತ್ಮತ್ಯಾಗದ ಶಕ್ತಿಯಲ್ಲಿ ಆತ್ಮಧಾರಣೆಯ ಶಕ್ತಿ ಸೇರಿಕೊಂಡೇ ಇದೆ. ಈ ಆತ್ಮಧಾರಣ ಶಕ್ತಿಯನ್ನು (ಸ್ವಧಾ) ರಾಷ್ಟ್ರೀಯ ಶಿಕ್ಷಕರು ಇದುವರೆಗೂ ಗಳಿಸಿಲ್ಲ. ಅದುದರಿಂದ ಈಗ ನಡೆದಿರುವುದು ಆತ್ಮತ್ಯಾಗದ ಅಭಾಸ. ಮೊದಲು ಸ್ವಧಾ, ಆಮೇಲೆ ಸ್ವಹಾ. ರಾಷ್ಟ್ರೀಯ ಶಿಕ್ಷಣ ಎಂದರೆ ರಾಷ್ಟ್ರೀಯ ಶಿಕ್ಷಕರು ಈಗ ಸ್ವಧಾ ಸಂಪಾದನೆ ಮಾಡಬೇಕು.

**'ಕೇವಲಶಿಕ್ಷಣ'ದ ಭ್ರಾಂತಿಯಳಿದು ಶಿಕ್ಷಕರು ಜೀವನದ ಜವಾಬುದಾರಿ ಹೊರಬೇಕು, ರೈತರು ಹೊರುವಂತೆ. ವಿದ್ಯಾರ್ಥಿಗಳಿಗೂ ಜವಾಬುದಾರಿಯನ್ನು ಕೊಟ್ಟು ಅದರ ಸುತ್ತಲೂ ಶಿಕ್ಷಣವನ್ನು ರಚಿಸಬೇಕು. ಅಥವಾ ಶಿಕ್ಷಣ ತನ್ನಿಂದ ತಾನೇ ಆಗುವಂತೆ ಮಾಡಬೇಕು. 'ಗುರೋಃ ಕರ್ಮಾತಿಶೇಷೇಣ'– ಈ ವಾಕ್ಯಕ್ಕೆ ಗುರುವಿನ ಕೆಲಸ ಮಾಡಿದ ಮೇಲೆ ವೇದಾಭ್ಯಾಸ ಮಾಡು ಎಂದು ಅರ್ಥ ಮಾಡಬೇಕು. ಹಾಗಲ್ಲದ "ಗುರೋಃ ಕರ್ಮ" – ಗುರುವಿನ ವೈಯಕ್ತಿಕ ಸೇವೆ ಎಂದು ಅರ್ಥ ಮಾಡಿದರೆ ಅಂಥ ಸೇವೆ ಎಷ್ಟಿದ್ದೀತು, ಎಷ್ಟು ಜನ ವಿದ್ಯಾರ್ಥಿಗಳಿಂದ ಸೇವೆ ಮಾಡಿಸಿಕೊಳ್ಳಲಾದೀತು ಆದುದರಿಂದ ಗುರು 'ಜೀವನದಲ್ಲಿ ಜವಾಬುದಾರಿಯಿಂದ ಭಾಗವಹಿಸಬೇಕು ಎಂದೇ ಅರ್ಥ. ಹಾಗೆ ಜವಾಬುದಾರಿಯನ್ನು ವಹಿಸಿ, ಅದರಲ್ಲಿ ಹುಟ್ಟಿದ ಸಂದೇಹ ಮುಂತಾದವನ್ನು ಗುರುವಿನಿಂದ ಕೇಳಿ ತಿಳಿದುಕೊಳ್ಳುವುದು ವಿದ್ಯಾರ್ಥಿಯ ಕೆಲಸ. ತನ್ನ ಬಾಳನ್ನು ಜವಾಬುದಾರಿಯಿಂದ ನಿರ್ವಹಿಸುತ್ತ, ಅದರ ಅಂಗವೆಂದು ತಿಳಿದು ಗುರುವೂ ಯಥಾಶಕ್ತಿ ಅವಕ್ಕೆ ಉತ್ತರ ಕೊಡಬೇಕು. ಅದು ಶಿಕ್ಷಣದ ಸ್ವರೂಪ.**

ಇದರಲ್ಲಿಯೇ ಸ್ವಲ್ಪ ಸಮಯವನ್ನು ಪ್ರಾರ್ಥನಾಸ್ವರೂಪವಾಗಿ ವೇದಾಭ್ಯಾಸಕ್ಕೆ ಮೀಸಲಾಗಿಡಬೇಕು. ಪ್ರತಿಯೊಂದು ಕೆಲಸವೂ ಈಶ್ವರೋಪಾಸನೆಯೇ ಆದರೂ, ಹಾಗೆ ಮಾಡಿಯೂ ಸಂಜೆ–ಮುಂಜಾನೆ ಸ್ವಲ್ಪ ವೇಳೆಯನ್ನು ಉಪಾಸನೆಗೆ ಕೊಡಬೇಕು. ವೇದಾಭ್ಯಾಸ ಅಥವಾ ಶಿಕ್ಷಣಕ್ಕೂ ಇದೇ ನ್ಯಾಯ. ಎಂದರೆ, ಜೀವನದ ಜವಾಬುದಾರಿಯ ಕೆಲಸವೇ ದಿನದ ಮುಖ್ಯ ಭಾಗ; ಅದೆಲ್ಲವೂ ಶಿಕ್ಷಣವೇ ಎಂದು ತಿಳಿಯಬೇಕು. ಜೊತೆಗೆ ಶಿಕ್ಷಣಕ್ಕಾಗಿ ಎಂದೇ ಒಂದೆರಡು ಗಂಟೆ ಕೊಡಬೇಕು.

ರಾಷ್ಟ್ರೀಯ ಜೀವನ ಹೇಗಿರಬೇಕೋ ಆ ಆದರ್ಶವನ್ನು ತನ್ನ ಬಾಳಿನಲ್ಲಿ ತರುವುದೇ ರಾಷ್ಟ್ರೀಯ ಶಿಕ್ಷಣದ ಕೆಲಸ. ಈ ಕರ್ತವ್ಯವನ್ನು ಮಾಡುತ್ತಿದ್ದರೆ ಅವನ ಜೀವನದಲ್ಲಿ ತನ್ನಿಂದ ತಾನೇ ಸುತ್ತಲೂ ಶಿಕ್ಷಣದ ಕಿರಣ ಪಸರಿಸುತ್ತವೆ. ಆ ಕಿರಣಗಳ ಪ್ರಕಾಶದಿಂದ ಸುತ್ತಲಿನ ವಾತಾವರಣದ ಕೆಲಸ ತಾನೇ ಆಗುತ್ತದೆ. ಇಂಥ ಶಿಕ್ಷಣ ಸ್ವತಃ–ಸಿದ್ಧ ಶಿಕ್ಷಣ ಕೇಂದ್ರ. ಅವನ ಸಮೀಪದಲ್ಲಿ ಇರುವುದೇ ಒಂದು ಶಿಕ್ಷಣ.

ಮನುಷ್ಯನಿಗೆ ಪವಿತ್ರ ಜೀವನ ನಡೆಸುವ ಗುರಿಯಿರಬೇಕು. ಶಿಕ್ಷಣದ ಮೇಲ್ವಿಚಾರಣೆ ನಡೆಸಲು ಆ ಜೀವನವೇ ಸಮರ್ಥ. ಅದಕ್ಕೆ 'ಕೇವಲ ಶಿಕ್ಷಣ'ದ ಬಯಕೆ ಅಗತ್ಯವಿಲ್ಲ.

ಮೂಲ–ಸಂತ ವಿನೋಬಾರ'ಮಧುಕರ'ದಿಂದ

**– ಸಂಗ್ರಹ : ವಿ.ಪಿ.ಸುಬ್ಬರಾಮು**

ಮಾನವತಾ ಶಿಕ್ಷಣಕೇಂದ್ರ ವಿನೋಬಾನಗರ,ಶಿವಮೊಗ್ಗ

# ಮಾನವೀಯ ಲಕ್ಷಣಗಳು

ಮಾನವೀಯ ಶ್ರೇಷ್ಠತೆಯನ್ನು ಸಾರುವ ಈ ಮೌಲ್ಯಗಳನ್ನು ನಾವೆಲ್ಲರೂ ನಮ್ಮಲ್ಲಿ ಅಳವಡಿಸಿಕೊಂಡು, ಭವಿಷ್ಯದ ಕುಡಿಗಳಲ್ಲಿ ಇವುಗಳನ್ನು ಚಿಗುರಿಸುವ ಮೂಲಕ ಸುಂದರ, ಸುಭದ್ರ, ಸಮಾಜ ನಿರ್ಮಿಸುವ ಪಣ ತೊಡೋಣ.

* ಸಂಪತ್ತಿನಲ್ಲಿ ಉದಾರಿಯಾಗು, ವಿಪತ್ತಿನಲ್ಲಿ ಶರಣಾಗು.

* ನೆರೆಯವನ ವಿಶ್ವಾಸಕ್ಕೆ ಪಾತ್ರನಾಗು, ಮತ್ತು ಎಲ್ಲರನ್ನೂ ಹಸನ್ಮುಖಿಯಾಗಿ ಕಾಣು.

* ಬಡವರಿಗೆ ಭಾಗ್ಯನಿಧಿಯಾಗು, ಸಿರಿವಂತರಿಗೆ ಸದ್ಬೋಧಕನಾಗು.

* ದೀನರ ಕರೆಗೆ ಓಗೊಡು, ಕೊಟ್ಟ ವಚನವನ್ನು ಪಾಲಿಸು.

* ನ್ಯಾಯದಲ್ಲಿ ನಿಷ್ಪಕ್ಷಪಾತಿಯಾಗು, ಯಾರಿಗೂ ಅನ್ಯಾಯವೆಸಗದಿರು.

* ಸರ್ವರಿಗೂ ವಿನೀತನಾಗಿರು, ಕಂಗೆಟ್ಟವರಿಗೆ ದಾರಿದೀಪವಾಗು.

* ದುಃಖಿತರಿಗೆ ಸಂತಸವಾಗು, ನೀರಡಿಸಿದವರಿಗೆ ನದಿಯಾಗು.

* ಸಂತ್ರಸ್ತರಿಗೆ ಶಾಂತಿಧಾಮವಾಗು,
ದಬ್ಬಾಳಿಕೆಗೆ ಬಲಿಯಾದವರ ರಕ್ಷಕನಾಗು.

* ಅತಿಥಿಗಳಿಗೆ ಆಶ್ರಯದಾತನಾಗು,
ನಿರ್ಗತಿಕರಿಗೆ ಶಕ್ತಿ ಸ್ತಂಭವಾಗು.

* ಸತ್ಯ ರೂಪಕ್ಕೆ ಅಲಂಕಾರಪ್ರಾಯನಾಗು,
ವಿಶ್ವಾಸಕ್ಕೆ ಮುಕುಟಪ್ರಾಯನಾಗು,
ತಪ್ಪು ಹೆಜ್ಜೆಯಿಡುವವರಿಗೆ ದಾರಿದೀಪವಾಗು.

* ಧರ್ಮದೇಗುಲಕ್ಕೆ ಆಧಾರಸ್ತಂಭವಾಗು,
ಮಾನವ ಕುಲಕ್ಕೆ ಜೀವದುಸಿರಾಗು.

* ನ್ಯಾಯ ದೇವತೆಯ ಮುದ್ರಿಕೆಯಾಗು,
ವಿನಮ್ರತೆಯ ವೃಕ್ಷದ ಫಲವಾಗು.

* ಸದ್ಗುಣ ದಿಗಂತಕ್ಕೆ ಪ್ರಭೆಯಾಗು,
ಸಂಪತ್ ಸ್ವರ್ಗದಲ್ಲಿ ಸೂರ್ಯನಾಗು.

* ಮಾನವ ಹೃದಯ ಭೂಮಿಗೆ ಇಬ್ಬನಿಯಾಗು.

* ಜ್ಞಾನವಾರಿಧಿಯಲ್ಲಿ ತೇಲುವ ದೋಣಿಯಾಗು.

* ಜ್ಞಾನಮುಕುಟದಲ್ಲಿ ರತ್ನವಾಗು, ಮುಂಬರುವ ಪೀಳಿಗೆಯ ಆಗಸದಲ್ಲಿ ಹೊಳೆಯುವ ಬೆಳಕಿನ ನಕ್ಷತ್ರವಾಗು.

ಈ ಅಮೂಲ್ಯ ಮೌಲ್ಯಗಳನ್ನು ಮಕ್ಕಳ ಮುಗ್ಧಮನದಲ್ಲಿ ಬಿತ್ತುವ ಮೂಲಕ ಇವುಗಳನ್ನು ರಾಷ್ಟ್ರೀಯ ಬದುಕಿನಲ್ಲಿ ಅಳವಡಿಸಿ ಮೂಲಕ "ಮತೀಯತೆ ಅಳಿಯಲಿ, ಮಾನವತೆ ಬೆಳೆಯಲಿ" ಎಂಬ ಭಾರತಾಂಬೆಯ ಸದಿಚ್ಛೆಯನ್ನು ಶಿಕ್ಷಣವಾರ್ತೆಯ ಮೂಲಕ ಬಿತ್ತುವಂತಾಗಲಿ. ಆ ನಿಟ್ಟಿನಲ್ಲಿ ನಾವೆಲ್ಲರೂ ಪ್ರಯತ್ನಿಸೋಣ.

**–ದೀಪಾ, ಶಂ. ಗುರನಗೌಡ್ರು,** ಸ.ಶಿ.

ಪುಟ–4 ರಿಂದ

ನಿರಂತರ ಪ್ರಯತ್ನಗಳಿಂದ...

ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಅಲ್ಲಿಂದ ಟಿ.ಸಿ. ಪಡೆದು ಹಿರಿಯ ಪ್ರಾಥಮಿಕ ಶಾಲೆಗೆ ಪುನಃ ದಾಖಲಾತಿ ಪಡೆಯಬೇಕು. ಅದೇ ರೀತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತೇರ್ಗಡೆಯಾದ ವಿದ್ಯರ್ಥಿಗಳು ಪ್ರೌಢಶಾಲೆಗೆ ಪ್ರತ್ಯೇಕವಾಗಿ ದಾಖಲಾತಿ ಪಡೆಯಬೇಕಾಗಿದೆ. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿಯೂ ಸಹ ಅನಕ್ಷರಸ್ಥ ಪೋಷಕರಿಗೆ ತಮ್ಮ ಮಕ್ಕಳನ್ನು ಒಂದು ಶಾಲೆಯಿಂದ ಟಿ.ಸಿ. ಪಡೆದು ಇನ್ನೊಂದು ಶಾಲೆಗೆ ದಾಖಲು ಮಾಡಲು ಹೆಣಗಾಡುವುದು ಅನವಶ್ಯಕ ಪ್ರಕ್ರಿಯೆಯಾಗಿರುತ್ತೆ. ಪರಿಣಾಮವಾಗಿ ಕೆಲವು ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಅಲ್ಲಿಗೇ ಮೊಟಕುಗೊಳಿಸುವ ಸಾಧ್ಯತೆಗಳೂ ಇವೆ. ಆದ್ದರಿಂದ ಇಂಥ ಪದ್ಧತಿಗೆ ಬದಲು ಮಗು ಒಂದು ಬಾರಿ ಶಾಲೆಗೆ ದಾಖಲಾದರೆ ಮುಂದೆ ಸ್ವಾಭಾವಿಕವಾಗಿ ಹಿರಿಯ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಶಿಕ್ಷಣದವರೆಗೆ ನಿರಂತರವಾಗಿ ಮುಂದುವರೆಯಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಆಯ್ದ ಸ್ಥಳಗಳಲ್ಲಿ ಶಾಲಾ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಉದ್ದೇಶಿಸಲಾಗಿದೆ. ಇಂಥ ವ್ಯವಸ್ಥೆಯನ್ನು ಜಾರಿಗೆ ತರುವುದರಿಂದ ಕಡಿಮೆ ವರ್ಗಗಳನ್ನು (ಖಜಥಿಣಉಂಟೆ) ಹೊಂದಿರುವ ಪ್ರೌಢಶಾಲೆಗಳಲ್ಲಿ ಪದವಿ ಮತ್ತು ಬಿಇಡ್ ವಿದ್ಯಾರ್ಹತೆ ಹೊಂದಿದ ಶಿಕ್ಷಕರ ಸೇವೆಯನ್ನು 6 ಮತ್ತು 7ನೇ ತರಗತಿಗಳ ಪಾಠಬೋಧನೆಗೆ ಬಳಸಿಕೊಳ್ಳಬಹುದಾಗಿ ಇದರಿಂದ ಪ್ರಾಥಮಿಕ ಶಾಲೆಗಳ ಕಲಿಕಾ ಗುಣಮಟ್ಟವನ್ನು ಉತ್ತಮಪಡಿಸಲು ಅನುಕೂಲವಾಗುತ್ತದೆ ಎಂದೂ ಸಹ ಆಯುಕ್ತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಎಂ.ಡಿ.ಪಿ. ತರಬೇತಿ :

ಪ್ರಸ್ತುತ ವ್ಯವಸ್ಥೆಯಲ್ಲಿ ಶಾಲಾ ಶಿಕ್ಷಣದ ಉಸ್ತುವಾರಿ ನೋಡಿಕೊಳ್ಳುವ ಕೆಳಹಂತದ ಸಿ.ಆರ್.ಪಿ., ಬಿ.ಆರ್.ಪಿ., ಇ.ಸಿ. ಮುಂತಾದ ಮೇಲ್ವಿಚಾರಕ ಸಿಬ್ಬಂದಿಗೆ ಆಡಳಿತಾತ್ಮಕ ಪರಿಣತಿಯನ್ನು ಹೆಚ್ಚಿಸಲು ತರಬೇತಿಗಳ ಕೊರತೆ ಇದ್ದ ಕಾರಣ ಸಿ.ಎಲ್. ಹೆಚ್.ಆರ್.ಡಿ., ಸಿ.ಬಿ.ಎಸ್. ಎಂ.ಎಸ್. ಮುಂತಾದ ಸಂಸ್ಥೆಗಳ ಮೂಲಕ ಸಂಪನ್ಮೂಲ ವ್ಯಕ್ತಿಗಳ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.ಈ ತರಬೇತಿಗಳನ್ನು ಪಡೆದ ಸಂಪನ್ಮೂಲ ವ್ಯಕ್ತಿಗಳು ಕ್ಷೇತ್ರ ಮಟ್ಟದಲ್ಲಿ ಡಯಟ್ ಮಾರ್ಗದರ್ಶನದಲ್ಲಿ ಇನ್ನಿತರ ಮೇಲ್ವಿಚಾರಕ ಸಿಬ್ಬಂದಿಗಳಿಗೆ ಸಮರ್ಪಕ ತರಬೇತಿ ನೀಡಲು ಸನ್ನದ್ಧರಾಗಬೇಕೆಂದು ಎಂ.ಡಿ.ಪಿ. ತರಬೇತಿ ಶಿಬಿರಾರ್ಥಿಗಳನ್ನು ಕುರಿತು ಆಯುಕ್ತರು ಹೇಳಿದರು. ಅವರು ಮುಂದುವರೆದು, ನಾವು ಪ್ರಭಾವ ಬೀರುವ ಕ್ಷೇತ್ರಗಳಲ್ಲಿ ಕೈಗೊಳ್ಳುವ ಮಧ್ಯಪ್ರವೇಶ ದೀರ್ಘಕಾಲಿಕ ದೃಷ್ಟಕೋನ ಹೊಂದಿರಬೇಕು Instant powder ಗಳ ರೀತಿ ದಿಡೀರ್ ಕಾರ್ಯಕ್ರಮಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆ ಆಗುವುದಿಲ್ಲ. ಸ್ಥಳೀಯ ನಿರ್ಧಿಷ್ಟ ಸ್ಥಿತಿಗಳನ್ನು ಮತ್ತು ಶಾಲೆಯ ಮಕ್ಕಳ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದು ನಿರಂತರ ಪ್ರಯತ್ನಗಳಿಂದ ಮಾತ್ರ ಸಾಧ್ಯವಾಗುತ್ತದೆ ಎಂಬುದಾಗಿ ಆಯುಕ್ತರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ.ಎಂ.ಐ. ಸವದತ್ತಿ, ನಿವೃತ್ತ ಉಪಕುಲಪತಿಗಳು, ಮಂಗಳೂರು, ವಿ.ವಿ., ಇವರು ವಹಿಸಿದ್ದರು. ಪ್ರೊ.ಸಿ.ಎ. ಥಾಮಸ್, ಪ್ರೊ. ಮೂಲಿಮನಿ, ಪ್ರೊ. ಸಿದ್ಧಪ್ಪ, ಹಾಗೂ ಶ್ರೀ ಕೋದಂಡರಾಮಯ್ಯ ಹಾಗೂ ಸಿ.ಎಲ್.ಹೆಚ್.ಆರ್.ಡಿ. ಮುಖ್ಯಸ್ಥರಾದ ಶ್ರೀ ಸನ್ನಿತಾರಪ್ಪನ್ ಮುಂತಾದವರು ಉಪಸ್ಥಿತರಿದ್ದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ವರ್ಗದ ಸುಮಾರು 80 ತರಬೇತುದಾರರು ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಸುಮಾರು 25 ಫೆಲಿಸಿಟೇಟರ್ಸ್ ಭಾಗವಹಿಸಿದ್ದರು.





## ಸೇವೆಯಿಂದ ನಿವೃತ್ತರಾದರೂ ಶೈಕ್ಷಣಿಕ ಚಟುವಟಿಕೆಗಳಲ್ಲಿರುವ

**ಸಿ. ನಟರಾಜ್**

ಶೈಕ್ಷಣಿಕ ಆಟಿಕೆಗಳು ಪುಟ್ಟ ಮಕ್ಕಳ ಪ್ರಾರಂಭದ ಕಲಿಕೆಯ ಉತ್ತಮ ಸಾಧನಗಳಾಗಿವೆ. ಇವು ಮಕ್ಕಳಲ್ಲಿ ಕುತೂಹಲ ಮೂಡಿಸಿ ಅವರಾಗಿಯೇ ಕಲಿಯುವಂತೆ ಪ್ರೇರೇಪಿಸುತ್ತವೆ. ಸೃಜನ ಶೀಲತೆಯುಳ್ಳ ಶಿಕ್ಷಕರದ ಸಿ. ನಟರಾಜ ಈ ತರಹದ ಆಟಿಕೆಗಳನ್ನು ಬೀದಿಯಲ್ಲಿ ಬಿಸಾಡಿದಂತಹ ರಟ್ಟಿನ ಕೊಳವೆ, ರಟ್ಟಿನ ಪಟ್ಟಿ, ಐಸ್ ಕ್ರೀಂ ಕಡ್ಡಿಗಳು ಮುಂತಾದವುಗಳಿಂದ ಆಕರ್ಷಣೀಯವಾಗಿ ಹಾಗೂ ಸರಳವಾಗಿ ತಯಾರಿಸಿದ್ದಾರೆ.

ಕೇವಲ 14 ಚೂರುಗಳಿಂದ ಕನ್ನಡ ವರ್ಣಮಾಲೆ, ಕನ್ನಡಪದ, ಅಂಕೆ, ಚಿತ್ರಗಳು ಹಾಗೂ ಅಲಂಕಾರ ವಿನ್ಯಾಸಗಳನ್ನು ಒಂದಾದ ಮೇಲೆ ಒಂದರಂತೆ ರೂಪಿಸಿದ್ದಾರೆ. ಇವರು ಇದಕ್ಕೆ "ಆಡಿ ಕಲಿ" ಎಂದು ಹೆಸರಿಸಿದ್ದಾರೆ. ಇವುಗಳ ಜೋಡಣೆಯಿಂದಾದ **ಮಿಕ್ಕಿಯ ಗೊಂಬೆಯು** ಮಕ್ಕಳನ್ನು ಆಕರ್ಷಿಸುವಂತಿದೆ. ಪ್ರಾಯೋಗಿಕ ವಿಧಾನಗಳ ಮೂಲಕ ಮಕ್ಕಳಲ್ಲಿ ಅಕ್ಷರ ಜ್ಞಾನ ಮೂಡಿಸುವ ಹಾಗೂ ಸೃಜನ ಶೀಲತೆಯನ್ನು ವೃದ್ಧಿಸುವ ಈ ಶೋಧ ತುಂಬ ಸರಳ ಸ್ತುತ್ಯರ್ಹವಾಗಿವೆ, ಮನರಂಜನೆಯ ಜೊತೆ ಕಲಿಕೆಯನ್ನು ಬೆರೆಸುವ "ಆಡಿ ಕಲಿ" ವಿಧಾನವು ಮಕ್ಕಳ ಮನೋಧರ್ಮಕ್ಕೆ ತುಂಬಾ ಚೆನ್ನಾಗಿ ಹೊಂದಿಕೊಳ್ಳುತ್ತವೆ.





ಇವರು 7 ಐಸ್‌ಕ್ರೀಂ ಕಡ್ಡಿಗಳು ಹಾಗೂ ರಟ್ಟಿನ ಚೂರುಗಳಿಂದ ಇಂಗ್ಲಿಷ್ ವರ್ಣಮಾಲೆ ಮತ್ತು ಪ್ರತಿ ಅಕ್ಷರಗಳಿಗೂ ಹೊಂದುವಂಥ ಚಿತ್ರಗಳನ್ನು ರೂಪಿಸುವ ನಟರಾಜ್ ಕ್ರಿಯೇಟೀವ್ ಸ್ಟಿಕ್ಸ್ ಎಂಬ ಆಟಿಕೆಗಳನ್ನು ಅಭಿವೃದ್ಧಿಪಡಿಸಿರುತ್ತಾರೆ.

ಇವುಗಳಲ್ಲದೆ ಸಿಲಿಂಡರ್ ಜೋಡಣೆಗಳ ಆನೆ, ಶಂಕುಗಳ ಜೋಡಣೆಯ ಜಿರಾಫೆ ಹಾಗೂ ವಿವಿಧ ಪ್ರಾಣಿ ಪಕ್ಷಿಗಳನ್ನು ಬಣ್ಣದ ಕಾಗದಗಳಿಂದ ಕತ್ತರಿಸಿ ಮಡಿಸಿ ನಿಲ್ಲುವಂತೆ ತಯಾರಿಸಿದ್ದಾರೆ.

ನಿವೃತ್ತ ಚಿತ್ರ ಕಲಾಶಿಕ್ಷಕರಾಗಿರುವ ಇವರು 1985ರಲ್ಲಿ N.C.E.R.T. ಏರ್ಪಡಿಸಿದ್ದ ಶೈಕ್ಷಣಿಕ ಆಟಿಕೆಗಳ ಸ್ಪರ್ಧೆಯಲ್ಲಿ ರಾಜ್ಯಮಟ್ಟದ ಪ್ರಥಮ ಬಹುಮಾನ ಪಡೆದಿರುತ್ತಾರೆ. 1994ರಲ್ಲಿ ಜಿಲ್ಲಾಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುತ್ತಾರೆ.

### ಸೂಚನೆ

ಲೇಖನಗಳನ್ನು, ಸುದ್ದಿಗಳನ್ನು, ಛಾಯಾಚಿತ್ರಗಳನ್ನು ಕಳಿಸುವವರು ತಮ್ಮ ಹೆಸರನ್ನು ತಪ್ಪದೇ ಬರೆಯಲು ಕೋರಿದೆ. ಸಹಿಯ ಜೊತೆಗೆ ಹೆಸರು ಸ್ಪಷ್ಟವಾಗಿರಲಿ ಛಾಯಾಚಿತ್ರಗಳ ಮೇಲೆ ಸಹಿ, ಮೊಹರುಗಳನ್ನು ದಯವಿಟ್ಟು ಹಾಕಬೇಡಿ.

–ಸಂ



ಕಳೆದ ತಿಂಗಳು ಕ್ಯಾಲಿಫೋರ್ನಿಯಾದ ಸ್ಯಾನ್‌ಹೋಸೆಗೆ ತೆರಳಿದ್ದಾಗ ಅಲ್ಲಿಯ ಕನ್ನಡ ಕೂಟದ ಕಾರ್ಯಕ್ರಮದಲ್ಲಿ ವಿಜಯಾ ಜೋಷಿಯವರ ಪರಿಚಯವಾಯಿತು. ಈ ಪರಿಚಯದ ಲಾಭವೇ ಪ್ರಸ್ತುತ ಲೇಖನ ಮಾಲೆ.

ಡಾ. ವಿಜಯಾ ಜೋಷಿ ಸ್ಯಾನ್‌ಹೋಸೆಯಲ್ಲಿ ಮಕ್ಕಳ ಮನಶ್ಶಾಸ್ತ್ರಜ್ಞೆ. ಮುಂದುವರಿದ ದೇಶಗಳಲ್ಲಿ ಕಂಡುಬರುವ ಮಕ್ಕಳ ಕಲಿಕಾ ಸಮಸ್ಯೆಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿರುವ ವಿಜಯಾ ಜೋಷಿಯವರು ಸದಾ ಕಾರ್ಯನಿರತೆ ಅಷ್ಟೇ ಅಲ್ಲ ಉತ್ತರ ಕ್ಯಾಲಿಫೋರ್ನಿಯಾದ ಕನ್ನಡ ಸಂಘದ ಸಕ್ರಿಯ ಕಾರ್ಯಕರ್ತೆ. ಇವರ ಪತಿ ಡಾ|| ರಾಜ್ ಜೋಷಿ ಯು.ಎಸ್.ಎ. ನೇವಿಯಲ್ಲಿ ಔಷಧ ತಜ್ಞರಾಗಿ ಹೆಸರುಮಾಡಿದ್ದಾರೆ. ಪ್ರಸ್ತುತ ದಿನಗಳಲ್ಲಿ ಮಾನಸಿಕ ದ್ವಂದ್ವಗಳಿಂದ ಬಳಲುವ ಮಕ್ಕಳು ಆತ್ಮಹತ್ಯೆಯಂಥ ಕೃತ್ಯಗಳಿಗೂ ಅಪರಾಧ ಪ್ರವೃತ್ತಿಗಳಿಗೂ ಬಲಿಯಾಗುತ್ತಿದ್ದಾರೆ. ಕೌಟುಂಬಿಕ ಹಿನ್ನೆಲೆ, ಶಾಲಾ ವಾತಾವರಣ, ಸಹವಾಸಗಳ ಪರಿಣಾಮ ಮಗುವಿನ ಮೇಲೆ ಹೇಗೆ ಆಗುತ್ತದೆ ಎಂಬುದನ್ನು ವಿಜಯಾ ಜೋಷಿಯವರು ನಮಗಾಗಿ ಪ್ರತಿ ತಿಂಗಳು ನೀಡಲು ಒಪ್ಪಿದ್ದಾರೆ.

(ಅನುವಾದ)

–ಕೆ.ಜಿ.ಕಲಾವತಿ

# ಹೊರಲಾರದ ಹೊರೆ

ಕರೇನ್ ತನ್ನ 10 ವರ್ಷದ ಮಗ ಜಾನ್ ಬಗ್ಗೆ ತುಂಬ ಚಿಂತಿತಳಾಗಿದ್ದಳು. ಜಾನ್ ಹೋಂವರ್ಕ್, ಗಣಿತ ಅರ್ಥಮಾಡಿಕೊಳ್ಳುವುದು ಮತ್ತು ಓದಿನಲ್ಲಿ ಗ್ರಹಿಸುವುದರಲ್ಲಿ ದುರ್ಬಲನಾಗಿದ್ದ. ಉದ್ದ ವಾಕ್ಯಗಳನ್ನು, ದೊಡ್ಡ ಶಬ್ದಗಳನ್ನು ಓದುವಾಗ ಪ್ರತಿಬಾರಿಯೂ ತಡವರಿಸುತ್ತಿದ್ದ. ಕರೇನ್ ಯೋಚಿಸಿದಳು. ಜಾನ್ ಚುರುಕಾಗಿಯೇ ಇದ್ದ. ಚೆನ್ನಾಗಿ ಸಂಭಾಷಿಸುತ್ತಿದ್ದ. ಅನೇಕ ವಿಷಯಗಳನ್ನು ಗ್ರಹಿಸುತ್ತಿದ್ದ, ಕೆಲಸಗಳನ್ನು ಮಾಡಲು ಉತ್ಸಾಹವನ್ನು ತೋರಿಸುತ್ತಿದ್ದ. ಆದಾಗ್ಯೂ ಅವಳಿಗೆ ಅರ್ಥವಾಗಲಾರದ ವಿಷಯವೆಂದರೆ ಜಾನ್ ಗಣಿತ, ಇಂಗ್ಲಿಷ್, ವಿಜ್ಞಾನಗಳ ಹೋಂವರ್ಕ್‌ನಲ್ಲಿ ಮತ್ತು ಬರವಣಿಗೆ ಕೌಶಲದಲ್ಲಿ ಹಿಂದೆ ಬಿದ್ದಿರುವುದು.

ಕರೇನ್ ತನ್ನ ಮಕ್ಕಳನ್ನು ಪಾಲಿಸುವಲ್ಲಿ ತಂದೆತಾಯಿ ಎರಡೂ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿತ್ತು. 10 ವರ್ಷದ ಜಾನ್, 7 ವರ್ಷದ ಜೋಷುವಾ, ಮತ್ತು 3 ವರ್ಷದ ಜೆಸ್ಸಿಕಾ ಅವಳ ಮೂರು ಮಕ್ಕಳು. 7 ವರ್ಷದ ಜೋಷುವಾ ಕೂಡಾ ಕೆಲವು ಬಾರಿ ಓದುವಾಗ ತಡವರಿಸುತ್ತಿದ್ದಳು. ಯಾರಾದರೂ ಓದಲು ಹೇಳಿದರೆ ಸಾಕು, ತಟಸ್ಥನಾಗಿ ಬಿಡುತ್ತಿದ್ದಳು ಅಂತಹ ಸಂದರ್ಭಗಳಲ್ಲಿ ಕರೇನ್ ಗೊಂದಲಕ್ಕೀಡಾಗುತ್ತಿದ್ದಳು, ಭರವಸೆಯನ್ನು ಕಳೆದುಕೊಳ್ಳುತ್ತಿದ್ದಳು. ಪಾಪ, ತನ್ನ ಮಕ್ಕಳೊಂದಿಗೆ ಆಕೆ ಹೆಚ್ಚು ಸಮಯ ಕಳೆಯಬೇಕೆಂದು ಕೊಳ್ಳುತ್ತಿದ್ದಳು. ಆದರೆ ಅವಳ ಕೆಲಸ ಅವಳಿಗೆ ಪದೇಪದೇ ತಡೆಯೊಡ್ಡುತ್ತಿತ್ತು. ಅವಳ ಕೆಲಸದ ಒತ್ತಡದಿಂದಾಗಿ ಮಕ್ಕಳು ಮನೆಗಿಂತ ಹೆಚ್ಚು ಸಮಯವನ್ನು 'ಡೇ ಕೇರ್'ನಲ್ಲಿ ಕಳೆಯುತ್ತಿದ್ದರು. ಹೆಚ್ಚು ಕೆಲಸದ ಶ್ರಮದೊಂದಿಗೆ ಆಕೆ ಕುಟುಂಬ ಜೀವನವನ್ನೂ ತೂಗಿಸಬೇಕಾಗಿತ್ತು.

ಒಂದು ದಿನ ಕರೇನ್‌ಗೆ ಜಾನ್‌ನ ಶಾಲಾ ಶಿಕ್ಷಕಿಯಿಂದ ದೂರವಾಣಿ ಕರೆ ಬಂದಿತು, ಜಾನ್ ಆ ಶಾಲೆಯ ಇನ್ನೊಂದು ಮಗುವಿನೊಂದಿಗೆ ಕುಸ್ತಿಮಾಡಿದನೆಂದು ದೂರು ಮತ್ತು, ಕೆಟ್ಟ ಶಬ್ದಗಳಿಂದ ಆತನನ್ನು ಸಂಬೋಧಿಸಿದ್ದೇ ಅಲ್ಲದೆ, ಶಾಲಾ ಆಡಳಿತವರ್ಗದವರೊಂದಿಗೆ ಅಗೌರವದಿಂದ ನಡೆದುಕೊಂಡಿದ್ದ. ಪ್ರಿನ್ಸಿಪಾಲ್ ಹತ್ತಿರ ಹೋಗುವಂತೆ ಹೇಳಿದಾಗ, ಪ್ರತಿಭಟಿಸಿದ್ದ, ಪರಿಣಾಮವಾಗಿ ಅವನನ್ನು ಮುಂದಿನ 3 ದಿನಗಳವರೆಗೆ ಶಾಲೆಯಿಂದ ಹೊರಗಿಡಲಾಯಿತು. ಕರೇನ್‌ಗೆ ಚಿಂತೆ ಪ್ರಾರಂಭವಾಯಿತು. ಮುಂದಿನ 2 ತಿಂಗಳಲ್ಲಿ ಇಂತಹ ಕರೆಗಳು ಹೆಚ್ಚಾದವು. ಜೋಷುವಾಳ ಶಿಕ್ಷಕಿ ಸಹ ಕರೆಮಾಡಿ, ಜೋಷುವಾ ಅನೇಕ ವರ್ತನೆಯ ಸಮಸ್ಯೆಗಳನ್ನು ಹೊಂದಿದ್ದಾಳೆಂದೂ, ಶಾಲೆಯಲ್ಲಿ ಕಲಿಕೆಯಲ್ಲಿ ಗಮನ ಕಡಿಮೆ ಎಂದೂ ತಿಳಿಸಿದಳು. ಕರೇನ್ ನಿಜವಾಗಿಯೂ ಅಸ್ವಸ್ಥಳಾದಳು, ಉದ್ರೇಕಗೊಂಡಳು, ತನ್ನ ಮೇಲೆಯೇ ಕೋಪಗೊಂಡಳು. ತನ್ನ ಮಕ್ಕಳು ಶಾಲೆಯಲ್ಲಿ ಪ್ರತ್ಯೇಕವಾಗಿ ಹಿಂದೆ ಬಿದ್ದರೂ ಆ ಬಗ್ಗೆ ಏನೂ ಮಾಡಲಾರದ ತನ್ನ ಅಸಹಾಯಕತೆಗೆ ಚಿಂತಿತಳಾದಳು. ಪರಿಸ್ಥಿತಿಯ ಬಗ್ಗೆ ಹತಾಶಳಾದಳು.

ಮರುದಿನವೇ ಕರೇನ್ ಶಾಲೆಯ ಮನಶಾಸ್ತ್ರಜ್ಞರನ್ನು ಸಂಪರ್ಕಿಸಿ ಜಾನ್ ಹಾಗೂ ಜೋಷುವಾಳೊಂದಿಗೆ ಅವರನ್ನು ಭೇಟಿಮಾಡಲು ಸಮಯಪಡೆದಳು. ಮನಶಾಸ್ತ್ರಜ್ಞರು ಅವಳ ಕುಟುಂಬದ ಭೇಟಿಯನಂತರ ಎಲ್ಲರನ್ನೂ ಪ್ರತ್ಯೇಕವಾಗಿ ಭೇಟಿಮಾಡಲಿಚ್ಛಿಸಿದರು.

ಮನಶಾಸ್ತ್ರಜ್ಞರೊಡನೆ ಭೇಟಿಮಾಡಿದ ಒಂದು ಸಂದರ್ಭದಲ್ಲಿ ಜಾನ್ ಆಕೆಗೆ ತಾನು ಮನೆಯಲ್ಲಿ ಒಂಟಿ ಎಂದೂ, ತನ್ನ ಬಹುಪಾಲು ಸಮಯ ತನ್ನ ತಂಗಿ ಮತ್ತು ತಮ್ಮಂದಿರನ್ನು ನೋಡಿಕೊಳ್ಳುವುದೇ ಆಗಿದೆ ಎಂದೂ ತಿಳಿಸಿದ. ಮೂರು ಮಂದಿ ಮಕ್ಕಳಲ್ಲಿ ಅವನೇ ಹಿರಿಯನಾಗಿದ್ದರಿಂದ, ಅವನ ತಾಯಿಗೆ ಅವನು ಮನೆಯಲ್ಲಿ ಹೆಚ್ಚು ಕೆಲಸ ನಿರ್ವಹಿಸುವ ನಿರೀಕ್ಷೆ ಎಂದೂ, ಅವಳ ನಿರೀಕ್ಷೆಯಂತೆ ಬದುಕಲು ಸಾಧ್ಯವಿಲ್ಲವೆಂದೂ ತನ್ನ ತಾಯಿ ನಿರಂತರವಾಗಿ ಒತ್ತಾಯಮಾಡುತ್ತಿದ್ದಾರೆ ತಿಳಿಸಿದ. ತನ್ನ ಒಡಹುಟ್ಟಿದವರ ಹೊಣೆಯನ್ನೂ ಹೊರಬೇಕಾಗಿದ್ದು ತಾನು ಮನುಷ್ಯಸಹಜವಾಗಿ ವರ್ತಿಸುತ್ತಿರುವುದಾಗಿಯೂ ಜಾನ್ ಹೇಳಿದ. ತನ್ನ ತಾಯಿಯ ಕನಸುಗಳಿಗೆ ಸ್ಪಂದಿಸುದಿರುವ ಬಗ್ಗೆ ತಾನು ಭಯದಿಂದಿರುವುದಾಗಿ ತಿಳಿಸಿದ. ತನ್ನ ಸೋಲುಗಳನ್ನು ಹೇಗೆ ಸರಿಪಡಿಸುವುದು ತಿಳಿಯದೆ ಸದಾ ಚಿಂತೆ ಅವನನ್ನು ಕಾಡುತಿತ್ತು. ತರಗತಿಯಲ್ಲಿ ಹಿಂದುಳಿದಿರುವುದನ್ನು ಹಾಗೂ ತನ್ನ ಶ್ರೇಣಿ ಮಟ್ಟಕ್ಕಿಂತ ಕಡಿಮೆ ಶ್ರೇಣಿಪಡೆದಿರುವುದಾಗಿಯೂ ತಿಳಿಸಿದ. ಗಣಿತ, ಇಂಗ್ಲಿಷ್ ಮತ್ತು ವಿಜ್ಞಾನಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಕಷ್ಟಪಡುತ್ತಿರುವುದಾಗಿ ತಿಳಿಸಿದ. ಕೆಲವು ಸಮಯ ಬಹಳ

ನಿರಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ಇಚ್ಛಿಸಿದ್ದಾಗಿಯೂ ತಿಳಿಸಿದ. ಶಾಲೆಯ ಮಕ್ಕಳು ಇವನಿಗೆ ಚೆನ್ನಾಗಿ ಓದಲು, ಬರೆಯಲು ಬಾರದುದಕ್ಕೆ ಹೀಯಾಳಿಸುತ್ತಿದ್ದರು. ಸಹಾಯಕ್ಕಾಗಿ ಇತರರನ್ನು ಯಾಚಿಸಲೂ ಇವನಿಗೆ ಕಷ್ಟವೆನಿಸುತ್ತಿತ್ತು. ನಾಚಿಕೆ ಆಗುತಿತ್ತು ಅವನಿಗೆ ಇತರರು ಅದರಲ್ಲೂ ತನ್ನ ತಾಯಿ, ತಮ್ಮ, ತಂಗಿಯರಿಗೆ ತನ್ನ ದೌರ್ಬಲ್ಯ ತಿಳಿಯುವುದು ಇಷ್ಟವಿರಲಿಲ್ಲ.

ಮರುದಿನ ಮನಶಾಸ್ತ್ರಜ್ಞೆ ಜಾನ್‌ನ ತಾಯಿಯನ್ನು ಸಂಧಿಸಿ ಜಾನ್‌ನ ಶಿಕ್ಷಕಿ ಹಾಗೂ ತಾವು ಸೇರಲಿರುವ ಸಭೆಗೆ ಹಾಜರಾಗುವಂತೆ ತಿಳಿಸಿದರು. ಸಭೆಯಲ್ಲಿ ಮನಶಾಸ್ತ್ರಜ್ಞೆಯು ಕರೆನ್‌ಗೆ ಜಾನ್‌ನ ಆಸಕ್ತಿಯನ್ನು ತಿಳಿಸಿ, ಜಾನ್ ಒಂದು ಮಗುವಿನಂತೆ ಬೆಳೆಯಲು ಬಿಡಬೇಕು ಹಾಗೂ ಇಡೀ ಕುಟುಂಬದ ಹೊರೆಯನ್ನು ಅವನ ಮೇಲೆ ಬಿಡಬಾರದು, ಜಾನ್ ಮೇಲೆ ಒಬ್ಬ ವಯಸನಂತೆ ಜವಾಬ್ದಾರಿ ಹೊರಿಸುವುದಕ್ಕಿಂತ ಆತನ ಅವಶ್ಯಕತೆ ಮತ್ತು ಹಂಬಲಗಳನ್ನು ಅರ್ಥಮಾಡಿಕೊಳ್ಳುವಂತೆ ತಿಳಿಸಿದರು.

ಮನಶಾಸ್ತ್ರಜ್ಞೆಯ ಅಭಿಪ್ರಾಯ ತಿಳಿದಾಗ ಕರೆನ್‌ಗೆ ಆಘಾತವಾಯಿತು. ಅವರೆಲ್ಲರಿಂದಲೂ ಆಕ್ರಮಣ ನಡೆದಂತೆ ಭಾಸವಾಗಿ, ಆಕೆಗೆ ಸಂಪೂರ್ಣ ದಿಗಿಲಾಯಿತು. ಬಹಳ ಕೋಪವೂ ಬಂದಿತು. ಅಸಹಾಯಕಳೂ ಆಗಿದ್ದಳು. ಮಕ್ಕಳ ಏಳ್ಗೆಯಂಥ ಉತ್ತಮ ಕೆಲಸ ಮಾಡುತ್ತಿದ್ದೇನೆ, ತನ್ನ ಜೀವನವನ್ನು ತೂಗಿಸುತ್ತಿದ್ದೇನೆ, ಶ್ರಮಪಡುತ್ತಿದ್ದೇನೆ, ಖರ್ಚುವೆಚ್ಚಗಳನ್ನು ನೋಡುತ್ತಿದ್ದೇನೆ, ಕೈಬುಡಕ್ಕೇ ಆಹಾರ ನೀಡುತ್ತಿದ್ದೇನೆ, ತನ್ನ ಒಂಟಿ ಜೀವನವನ್ನೂ ಸರಿದೂಗಿಸುತ್ತಿದ್ದೇನೆ – ಎಂದೆಲ್ಲ ಯೋಚಿಸಿದ್ದಳು. ತಾನು ನಿಲುಕಲಾರದಷ್ಟು ನಿರೀಕ್ಷೆಯಲ್ಲಿದ್ದುದರಿಂದ ಜಾನ್ ಶಾಲೆಯಲ್ಲಿ ಹಿಂದುಳಿಯಲು ಕಾರಣವಾಯಿತು. ಅಲ್ಲದೇ ಜಾನ್ ಮನೆಯಲ್ಲಿ ಏಕಾಂಗಿತನವನ್ನು ಅನುಭವಿಸುತ್ತಿರುವುದರಿಂದ ಖಿನ್ನನಾಗಿದ್ದಾನೆ. ಅವನ ತಲೆಯ ಮೇಲೆ ಹೊರಲಾರದಷ್ಟು ಜವಾಬ್ದಾರಿಗಳನ್ನು ಹೊರಿಸಿರುವುದರಿಂದ ತರಗತಿಯಲ್ಲಿ ಗಮನ ಕೊಡುತ್ತಿಲ್ಲ ಎಂಬುದಾಗಿ ಇದೀಗ ಶಾಲೆಯ ಶಿಕ್ಷಕಿಯಿಂದ ಕೇಳಿಬರುತ್ತಿದೆ. ಕರೆನ್‌ಗೆ ತಾನು ಎಲ್ಲಿ ತಪ್ಪುತ್ತಿದ್ದೇನೆಂದು ತಿಳಿಯದಾಯಿತು. ನಿರಾಶೆಯಾದರೂ ತೋರ್ಪಡಿಸಿಕೊಳ್ಳದೇ ಕರೇನ್ ಮನಶ್ಶಾಸ್ತ್ರಜ್ಞೆಯನ್ನು ತನಗೆ ಸಹಾಯ ಮಾಡುವಂತೆ, ಜಾನ್ ಕಲಿಯುವುದರಲ್ಲಿ ಗಮನನೀಡಿ, ಚೆನ್ನಾಗಿ ಕಲಿಯಲು ಅಗತ್ಯವಾದ ಬದಲಾವಣೆ ಸೂಚಿಸುವಂತೆ ಕೋರಿದಳು.

ಶಾಲಾ ಮನಶ್ಶಾಸ್ತ್ರಜ್ಞೆ ಕರೇನ್‌ಗೆ ಅರ್ಥವಾಗುವಂತೆ ವಿವರಿಸಿದಳು – ಮಕ್ಕಳನ್ನು ಮಕ್ಕಳಾಗಿ ಬೆಳೆಯಲು ಬಿಡಬೇಕು. ಆಗ ಅವರು ಉತ್ತಮವ್ಯಕ್ತಿಗಳಾಗಿ ಬೆಳೆಯಲು ಸಾಧ್ಯ. ಮನಶ್ಶಾಸ್ತ್ರಜ್ಞೆಯು ಶಿಕ್ಷಕಿ ಮತ್ತು ಕರೇನ್ ಸಹಾಯದಿಂದ ಒಂದು ಯೋಜನೆಯನ್ನೇ ರೂಪಿಸಿದಳು. ಪರಿಣಾಮವಾಗಿ ಜಾನ್ ಶಾಲೆಯಲ್ಲಿ ಕ್ರಿಯಾಶೀಲವಾದ ಮತ್ತು ಮನೆಯಲ್ಲಿ ಜವಾಬ್ದಾರಿಯುತನಾದ. ಮನಶ್ಶಾಸ್ತ್ರಜ್ಞೆಯ ಪ್ರಕಾರ ಶಾಲೆಯಲ್ಲಿ ಅವನನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಿದ್ದೇ ಆದರೆ, ಆತನ ಸುಧಾರಿಸುತ್ತದೆ. ಓದುವ ವಿಧದಲ್ಲಿ ಮತ್ತು ಸೂಕ್ತ ಮಟ್ಟದ ಅಭ್ಯಾಸ ವಿಷಯಗಳಲ್ಲಿ ಆರಿಸಿ ವಿಷಯಗಳನ್ನು ಗ್ರಹಿಸುತ್ತಾನೆ. (ಈ ಮೊದಲು ಜಾನ್ ತಾನು ಕಲಿಯಬೇಕಾದ ಮಟ್ಟಕ್ಕಿಂತ ಕಡಿಮೆ ಇದ್ದ) ಆತನ ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಕಾರಿ. ಅವನಿಗೆ ವಿಶ್ವಾಸ ಮೂಡುತ್ತದೆ, ಪ್ರೋತ್ಸಾಹ ದೊರೆಯುತ್ತದೆ ಅಷ್ಟೇ ಅಲ್ಲ, ಶಾಲೆಯಲ್ಲಿ ಚೆನ್ನಾಗಿ ನಿರ್ವಹಿಸುವ ತನ್ನ ಸಾಮರ್ಥ್ಯವನ್ನು ತೋರಿಸಿಕೊಡುತ್ತಾನೆ.

ಮೂರು ತಿಂಗಳ ಮೌಲ್ಯಮಾಪನದ ಅವಧಿಯಲ್ಲಿ, ಜಾನ್‌ನ ಓದುವ ಮಟ್ಟ ಹೆಚ್ಚಿತ್ತು; ಶಾಲಾನಂತರ ಸಹಾಯ ಪಡೆಯುತ್ತಿದ್ದುದರಿಂದ, ತನ್ನೆಲ್ಲಾ ಕೆಲಸದಲ್ಲಿಯೂ ಬದಲಾವಣೆ ಹೊಂದಿದೆ. ತರಗತಿಯಲ್ಲಿ ಮಾತನಾಡುವಾಗ ಭರವಸೆಪೂರ್ಣನಾಗಿದ್ದ. ಅಗತ್ಯ ಸಹಾಯ ಕೋರುತ್ತಿದ್ದ. ಈಗ ಸಂಕೋಚಪಡುತ್ತಿರಲಿಲ್ಲ. ಶಾಲಾ ಮನಶ್ಶಾಸ್ತ್ರಜ್ಞೆ ಕರೇನ್‌ಳಿಗೂ ಸಹ ಹಲವು ಬಾರಿ ತರಗತಿಗಳನ್ನು ತೆಗೆದುಕೊಂಡು, ಸ್ಥಿರವಾಗಿರುವ ಬಗ್ಗೆ ಹಾಗೂ ದಿನನಿತ್ಯದ ಕಟ್ಟುನಿಟ್ಟಿನ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ನೀಡಿದಳು. ಜಾನ್‌ನೊಂದಿಗೆ ತಾನು ಮನೆಯಲ್ಲಿ ಸಮಯ ಕಳೆಯುತ್ತಿರುವ ಬಗ್ಗೆ ಮತ್ತು ಅವನ ಕೆಲಸಗಳಿಗಾಗಿ ಹೊಗಳಿ, ಪ್ರೋತ್ಸಾಹಿಸುತ್ತಿರುವ ಬಗ್ಗೆ ಕರೇನ್ ತಿಳಿಸಿದಳು. ಅವನ ಶಕ್ತಿಯ ಬಗ್ಗೆ ಗಮನವಿರಿಸುತ್ತಾ, ಅವನ ಉದ್ರೇಕವನ್ನು ಹಾಗೂ ಅನಗತ್ಯ ಚರ್ಚೆಗಳನ್ನು ನಿರ್ಲಕ್ಷಿಸುತ್ತಾ, ಆತನ ಸನ್ನಡತೆಗೆ ಮೆಚ್ಚುಗೆ ಸೂಚಿಸಿ, ದುರ್ನಡತೆಯ ವರ್ತನೆಗಳಿಗೆ ಸೂಕ್ತ ರೀತಿಯಲ್ಲಿ ಶಿಕ್ಷೆ ನೀಡಿದಳು. ಜಾನ್‌ನನ್ನು ಸಮೂಹ ಚಿಕಿತ್ಸೆಗೆ ಒಳಪಡಿಸಲಾಯಿತು. ಗುಂಪ ಸಂಘಟನೆಯಲ್ಲಿ ಸೂಕ್ತ ನಡೆವಳಿಕೆಯ ಅಭ್ಯಾಸ ಹಾಗೂ ಮಕ್ಕಳು ಒಬ್ಬರಿಂದ ಇನ್ನೊಬ್ಬರು ಕಲಿಯಬಹುದು.

ಜಾನ್‌ಗೆ ಸಹ ವಿಶ್ವಾಸ ಮೂಡಿತು ಹಾಗು ಶಾಲೆಯಲ್ಲಿ ಇನ್ನೂ ಹೆಚ್ಚಿನ ಪರಿಣತಿ ಸಾಧಿಸಲು ಉತ್ತೇಜನ ದೊರೆಯಿತು. ತನಗೆ ಬೆಂಬಲ ದೊರೆತಿರುವುದಕ್ಕಾಗಿ, ತನ್ನ ಶಿಕ್ಷಕಿ, ತಾಯಿ ಮತ್ತು ಸ್ನೇಹಿತರು ತನ್ನನ್ನು ವಿಚಾರಿಸುತ್ತಿರುವ ಬಗ್ಗೆ ಅವನಿಗೆ ತೃಪ್ತಿಯಾಗಿತ್ತು.

**ಶಿಕ್ಷಕರು ಮತ್ತು ತಂದೆತಾಯಿಯರಿಗೆ ತಿಳುವಳಿಕೆ ನೀಡಿ, ತೊಡಗಿಸಿಕೊಳ್ಳುವುದು ನಿಮ್ಮ ಮಗುವಿನ ಚಿಕಿತ್ಸೆಯಲ್ಲಿ ಬಹು ಮುಖ್ಯ ಅಂಶ. ತಂದೆ ಅಥವಾ ತಾಯಿ ಶಿಕ್ಷಕರೊಡನೆ ಮಾತನಾಡಿ, ಅವರೊಡನೆ ಬೆರೆತು, ಸಮಸ್ಯೆಯನ್ನು ಅರಿತು, ಒಪ್ಪಿಕೊಂಡು, ಅದನ್ನು ಬಿಡಿಸುವುದನ್ನು ಕಲಿಯುವುದು ಮಗುವಿನ ಯಶಸ್ಸಿನ ದಾರಿ. ಸಮಸ್ಯೆಗಳಲ್ಲಿ ಮಗು ಸಿಲುಕಿಕೊಂಡಾಗ, ಅವರ ವರ್ತನೆ ಶಬ್ದಗಳಿಗಿಂತ ಹೆಚ್ಚು. ಗಟ್ಟಿಯಾಗಿ ಮಾತನಾಡುತ್ತದೆ. ಎಂಬುದು ನಿಸ್ಸಂದೇಹ. ಅವರ ವರ್ತನೆಗಳಿಂದಲೇ ಅನುಸರಿಸಬೇಕಾದ ಮಾರ್ಗವನ್ನು ಪತ್ತೆಹಚ್ಚಿ, ಅಗತ್ಯ ಮಧ್ಯಕ್ರಮಗಳನ್ನು ಒದಗಿಸಬೇಕು.** ಕರೇನ್ ಏನಾದರೂ ಜಾನ್‌ನ ಅಗತ್ಯಗಳನ್ನು ಕಡೆಗಣಿಸಿದ್ದೇ ಆಗಿದ್ದಲ್ಲಿ, ಈ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಹೋರಾಡಿ ಗೆಲ್ಲಲು ಸಮರ್ಥನಾಗುತ್ತಿದ್ದನೋ ಇಲ್ಲವೋ !

– ಡಾ॥ ವಿಜಯಾ ಜೋಷಿ
ಮಕ್ಕಳ ಮನಶ್ಶಾಸ್ತ್ರಜ್ಞೆ
ಸ್ಯಾನ್‌ಹೋಸೆ ಕ್ಯಾಲಿಫೋರ್ನಿಯಾ

ಸಾಂಸ್ಕೃತಿಕ ಕಾರ್ಯಕ್ರಮಗಳು, ಶಿಕ್ಷಕರಿಗೆ ಚರ್ಚಾ ಸ್ಪರ್ಧೆ, ವಿವಿಧ ಇಲಾಖೆಗಳಿಗೆ ಭೇಟಿ ನೀಡುವ ಗುಂಪು ಚಟುವಟಿಕೆ, ತರಗತಿ ಮಿಲನ (7ನೇ ತರಗತಿ ಮಕ್ಕಳಿಗೆ), ಮಳೆ ಕೊಯಿಲು ಮಾದರಿ ಪ್ರದರ್ಶನ, ಶಿಕ್ಷಕರಿಗೆ ರಂಗೋಲಿ ಸ್ಪರ್ಧೆ, ಸಾಮೂಹಿಕ ಯೋಗ – ಧ್ಯಾನ,

ಕಾರ್ಯಕ್ರಮದ ಉದ್ದೇಶಗಳು :–

ಪ್ರಾಯೋಗಿಕ ಗಣಿತ – ಚಟುವಟಿಕೆಗಳ ಮೂಲಕ ಕಲಿಕೆ, ಮಗುವಿನ ವ್ಯಕ್ತಿತ್ವ ವಿಕಾಸ, 20 ಅಂಶಗಳ ಅನುಷ್ಠಾನ, ಜೀವನ ಶಿಕ್ಷಣಕ್ಕೆ ಬುನಾದಿ, ಮಕ್ಕಳಲ್ಲಿ ಕುತೂಹಲ–ಆಸಕ್ತಿ ಕೆರಳಿಸುವಿಕೆ, ಅಭ್ಯಾಸ–ಬಳಕೆ ಚಟುವಟಿಕೆಗಳ ಅಳವಡಿಕೆ, ಸೃಜನಶೀಲ–ಕ್ರಿಯಾಶೀಲ ಪ್ರವೃತ್ತಿಗೆ ಬುನಾದಿ, ನಾಡು–ನುಡಿ–ಸಂಸ್ಕೃತಿ ಬಗ್ಗೆ ಅಭಿಮಾನ, ಪುಸ್ತಕ ಪ್ರೇಮ, ವಾಚನಾಸಕ್ತಿ ವೃದ್ಧಿ, ಉತ್ತಮ ಹವ್ಯಾಸಗಳತ್ತ ತುಡಿತ, ಸಂತೋಷ, ತೃಪ್ತಿ ಹಾಗೂ ಮನೋರಂಜನೆ, ಶಿಕ್ಷಕರಿಗೆ ಪ್ರೇರಣೆ–ನಾಯಕತ್ವ ತರಬೇತಿ, ಶಿಕ್ಷಕರಲ್ಲಿ ಹಿತವಾದ ಮತ್ತು ಪೂರಕವಾದ ಮನೋಭಾವಗಳ ಬಲವರ್ಧನೆ, ಶಿಕ್ಷಕರಲ್ಲಿ ಸಾಂಘಿಕ ಶಕ್ತಿಯ ಅರಿವು ಮೂಡಿಸುವುದು, ಸಾಮಾಜಿಕ ಉಪಯೋಗಿ ಉತ್ಪಾದನಾ ಚಟುವಟಿಕೆಗಳ ನಿಜವಾದ ಅರ್ಥದತ್ತ ಚಿಂತನೆ, ಶಿಕ್ಷಕರಿಗೆ ಕಾರ್ಯಕ್ರಮ ಆಯೋಜಿಸುವಲ್ಲಿ ನೈಪುಣ್ಯತೆಯ ಅರಿವು, ಶಾಲೆ–ಸಮುದಾಯಗಳ ನಡುವೆ ಅರ್ಥಪೂರ್ಣ ಬಾಂಧವ್ಯ ನಿರ್ಮಾಣ, ಜನಪ್ರತಿನಿಧಿಗಳ ಸಹಭಾಗಿತ್ವಕ್ಕೆ ಬುನಾದಿ, ಜೀವನ ಮೌಲ್ಯಗಳ ಪರೋಕ್ಷ ಮುನ್ನೋಟ.....

ವಿಶಿಷ್ಟ ಕಾರ್ಯಕ್ರಮ **'ಮಕ್ಕಳ ಸಂತೆ ಮೇಳ' :**

ಅಧ್ಯಕ್ಷತೆಯನ್ನು ಜಿಲ್ಲಾ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಕೆಂಚಪ್ಪನವರು ವಹಿಸಿದ್ದರು, ಸ್ಥಳೀಯ ಜಿಲ್ಲಾಪಂಚಾಯಿತಿ ಸದಸ್ಯರಾದ ಬಿ.ಕೆ. ರವಿಯವರು ಇದರ ಉದ್ಘಾಟನೆಯನ್ನು ನೆರವೇರಿಸಿದರು. ಸಂತೆಯಲ್ಲಿ ಮಕ್ಕಳು ಮಾತ್ರ ಭಾಗವಹಿಸಿದ್ದು ಖರೀದಿಗೆ ಪೂರ್ವಯೋಜನೆಯಂತೆ ಸುತ್ತಲ ಹತ್ತಾರು ಹಳ್ಳಿಗಳಿಂದ ಜನ ಪೋಷಕರು, ಅಧಿಕಾರಿಗಳು, ಶಿಕ್ಷಕರು ನೆರದಿದ್ದರು.

ಸಂತೆಯಲ್ಲಿ ಕಾಳು ಮೆಣಸು–ಮೆಣಸಿನ ಕಾಯಿಯಿಂದ ಹಿಡಿದು ಎಲ್ಲ ತರದ ದ್ವಿದಳ ಧಾನ್ಯಗಳು, ತೆಂಗಿನಕಾಯಿ, ಟೀ–ಕಾಫೀ–ತಿಂಡಿ, ಕೆಲವು ಶಾಲೆಯವರು ಇದೇ ಉದ್ದೇಶಕ್ಕಾಗಿ ತಯಾರಿಸಿದ್ದ ಚಕ್ಕುಲಿ–ಕೋಡು ಬಳೆ– ರವೆ ಉಂಡೆ– ಹಪ್ಪಳ ನಿಪ್ಪಟ್ಟು.... ಇತ್ಯಾದಿ. ಬೂಟ್ ಪಾಲಿಶ್ ಮಾಡುವ, ಕಡಲೆಕಾಯಿ ಹೊತ್ತು ಮಾರುವ, ಕಲ್ಲಂಗಡಿ ಪಪ್ಪಾಯಿ ನಿಂಬೆ ಸೇಬು ದ್ರಾಕ್ಷಿ ಬೇಲ ದಾಳಿಂಬೆ ಮೊದಲಾದ ಹಣ್ಣುಗಳು, ಎಳನೀರು, ಬಟ್ಟೆ ಅಂಗಡಿ, ದಿನಸಿ ಅಂಗಡಿ...ಹೀಗೆ ಒಂದು ವ್ಯವಸ್ಥಿತ ಹಳ್ಳಿಸಂತೆಯಲ್ಲಿ ಕಾಣಬಹುದಾದ ಎಲ್ಲಾ ಐಟೆಮ್ ಗಳೂ ಇಲ್ಲಿದ್ದವು. ಎಲ್ಲಾ ತಾಜಾ ..ಬನ್ನಿ..ಬನ್ನಿ.. ಎಂದು ಸ್ಪರ್ಧಿಸಿ ಕೂಗುವ ಮಕ್ಕಳು ಯಾವುದೇ ಮಾದಕ ವಸ್ತುಗಳನ್ನು ಮಾರದೆ, ಪ್ಲಾಸ್ಟಿಕ್ ಬಳಸದೇ ಇದ್ದದ್ದು ಒಂದು ವಿಶೇಷವಾದರೆ, ಎಲ್ಲ ವಸ್ತುಗಳನ್ನೂ ವಿವಿಧ ನಿರ್ದಿಷ್ಟ ಮಾಪನಗಳ ಮೂಲಕವೇ ಕೊಡುತ್ತಿದ್ದುದ್ದು ಮತ್ತೊಂದು ವಿಶೇಷ. ಉದಾಹರಣೆಗೆ ಇಲ್ಲಿ ಉಚಿತವಾಗಿ ಕೊಡುವ ನೀರು, ಮಾರುವ ಟೀ–ಕಾಫಿ–ತಂಪು ಪಾನೀಯಗಳನ್ನು ಲೀಟರ್–ಮಿಲಿ ಲೀಟರ್‌ಗಳ ಪ್ರಮಾಣದಲ್ಲಿಯೇ ಕೊಡುತ್ತಿದ್ದರು. ಹೂ ಮಾರುವವರು ಅಂದಾಜಿನ ಮಾಪನಗಳಾದ ಗೇಣು–ಮೊಳ–ಮಾರುಗಳಲ್ಲಿ ಅಳೆಯುತ್ತಿದ್ದರು. ಹೆಣ್ಣು ಮಕ್ಕಳಿಗೆ ಬೇಕಾಗುವ ಟೇಪನ್ನು ಮೀಟರ್ ಮಾಪನದಲ್ಲಿ ಅಳೆಯುತ್ತಿದ್ದರು. ಇಡೀ ಸಂತೆಯ ಗಜಿ–ಬಿಜಿ, ಕೂಗು, ಆಕರ್ಷಣೆಗೆ ಯತ್ನ, ಹಿತವಾದ ಸ್ಪರ್ಧೆ, ಮೈ–ಮರೆತ, ನೈಪುಣ್ಯತೆ, ಐಕ್ಯತೆ, ಸಡಗರ–ಸಂಭ್ರಮ, ವ್ಯವಹಾರಗಳು ಬರೀ ಮಕ್ಕಳಲ್ಲಿ ಮಾತ್ರವಲ್ಲದೇ ಶಿಕ್ಷಕರನ್ನೂ ಕೆಲವು ಸಲ ಕೆಣಕುತಿದ್ದವು. ಆದರೆ ಶಿಕ್ಷಕರಿಗೆ ಅಲ್ಲಿ ಅವಕಾಶವಿಲ್ಲದೇ ಇದ್ದದ್ದು ಮಕ್ಕಳಿಗೆ ಹೆಚ್ಚು ಲಾಭವಾಗುವಂತೆ ಮಾಡಿತು. ಪ್ರತೀ ಶಾಲೆಯೂ ತಮ್ಮದೇ ಆದ ಬ್ಯಾನರ್ ಹೊಂದಿ, ತಮ್ಮದೇ ಬಿಡಾರಗಳನ್ನು ಹೂಡಿದ್ದವು. ಹೊಸದುರ್ಗ ತಾಲ್ಲೂಕಿನ ಮಧ್ಯಾಹ್ನ ಬಿಸಿಯೂಟ ಯೋಜನೆಯ ಸಹಾಯ ನಿರ್ದೇಶಕರೂ ಸಹ ಬೆಂಬಲನೀಡಿ ಶ್ರೀ ಗುರು ಒಪ್ಪತ್ತಿನ ಸ್ವಾಮಿಮಠದೊಂದಿಗೆ ಸಮಾಲೋಚಿಸಿ ಮಧ್ಯಾಹ್ನದ ಊಟವನ್ನು ಅಲ್ಲಿಗೇ ಕಳುಹಿಸಿದ್ದು ಸಾಮೂಹಿಕ ಹೊರೆ ಸಂಚಾರದ ಅನುಭವವನ್ನು ಮೂಡಿಸಿತು. ಈ ಸಂದರ್ಭದಲ್ಲಿ ಅನೇಕ ಸುದ್ದಿ ಮಾಧ್ಯಮದವರು ಬಂದು ಬೆಕ್ಕಸಬೆರಗಾಗಿ ಕಾರ್ಯಕ್ರಮವನ್ನು ತಮ್ಮ ಲೇಖನಿ–ಕಣ್ಣುಗಳಲ್ಲಿ ಸೆರೆಹಿಡಿದುಕೊಂಡರು. ಈ ಟಿ.ವಿ.ಯ ಚಾನೆಲ್ ನವರು ಎಲ್ಲಾ ಭಾಷಾ ಉಪಚಾನೆಲ್‌ಗಳಲ್ಲಿಯೂ ಅದೇ ದಿನ ರಾತ್ರಿ ಮುಖ್ಯಾಂಶಗಳಲ್ಲಿ ಒಂದೂವರೆ ನಿಮಿಷಕ್ಕೆ ಹೆಚ್ಚು ಕಾಲ ಪ್ರಸಾರ ಮಾಡಿ ಇಡಿ ರಾಷ್ಟ್ರದಲ್ಲೇ ಗಮನಸೆಳೆದಿದ್ದಾರೆ. ಉದಯ ಟಿವಿ ಚಾನೆಲ್ ನಲ್ಲಿಯೂ ಸಹ ಮರುದಿನ ಪ್ರಸಾರವಾಗಿದೆ. ಅದಲ್ಲದೆ ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ, ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ ಪತ್ರಿಕೆಗಳೆಲ್ಲವೂ ಸುದ್ದಿ ಮಾಡಿದವು. ಅಷ್ಟೇ ಅಲ್ಲದೆ ವರದಿಗಾರರಾದ ಬೆಲಗೂರು ಶ್ರೀಕಾಂತ, ಬಾಗೂರು ಕೇಶವಮೂರ್ತಿ ಹಾಗೂ ಪ್ರಜಾವಾಣಿಯ ರಂಗನಾಥ್ ಇವರುಗಳು ತಮ್ಮದೇ ಆದ ಧಾಟಿಯಲ್ಲಿ ವಿವರವಾದ ಲೇಖನಗಳನ್ನು ಸಿದ್ದಪಡಿಸಿ ಸಾಪ್ತಾಹಿಕಗಳಲ್ಲಿ ರಾಜ್ಯದೆಲ್ಲೆಡೆಗೂ ವರದಿ ಮಾಡಿದ್ದಾರೆ. ಮಾನ್ಯ ಶಾಸಕರಾದ ಬಿ.ಜಿ. ಗೋವಿಂದಪ್ಪನವರು ಸಮಾರೋಪ ಸಮಾರಂಭಕ್ಕೆ ಆಗಮಿಸಬೇಕಾಗಿತ್ತು. ಆದರೆ ಅವರು ಮೊದಲೇ ಹಾಜರಾಗಿ ಇಲ್ಲಿ ಸಂತೆ ಮಾಡಿರುವುದು, ಸಂತೋಷದಲ್ಲಿ ಮಕ್ಕಳೊಂದಿಗೆ ಬೆರೆತು ನಕ್ಕು–ನಲಿದಿರುವುದು ಮತ್ತೊಂದು ವಿಶೇಷವೆನಿಸಿದೆ. ಈ ಬಗ್ಗೆ ಅವರು ತುಂಬ ಸಂತಸದೊಂದಿಗೆ ಅಭಿನಂದಿಸಿದ್ದಾರೆ. ಎಲ್ಲಾ ಶಿಕ್ಷಕರೂ ಸಹ ತಮ್ಮ–ತಮ್ಮ ಸ್ನೇಹಿತರೊಡನೆ ಖರೀದಿಸಿ ಮಕ್ಕಳಿಗೆ ವ್ಯವಹಾರ ಪ್ರಜ್ಞೆಮೂಡಿಸುವಲ್ಲಿ ಶ್ರಮಿಸಿದ್ದಾರೆ. ಹಾಗಾಗಿ ಕೊಳ್ಳುವವರಿಗೇನು ಇಲ್ಲಿ ಬರವಿರಲಿಲ್ಲ. ಸಂಜೆ 5 ರವರೆಗೂ ನಡೆಯಬೇಕಿದ್ದ ಸಂಜೆ 4ಕ್ಕೇ ಸಾಮಾನುಗಳನ್ನು ಖಾಲಿ ಮಾಡಿಕೊಂಡು ಬಿಕೋ ಎನ್ನುವಂತಾಯಿತು. ಸಂತೆ ಮೇಳದ ಕಾಲಕಾಲಿಕ ವರದಿಯನ್ನು ಗಣಿತ ಕ್ಲಬ್‌ನ ಖಜಾಂಚಿ ಬಿ.ಎನ್. ಸದಾಶಿವಯ್ಯ ಮತ್ತು ಉಪಾಧ್ಯಕ್ಷರಾದ ಆಂಜಿನಪ್ಪ (ಕೈನಡು) ನೆರವೇರಿಸಿದರು.

ಯಾವುದೇ ಲೋಪದೋಷಗಳಿಲ್ಲದಂತೆ, ಒಮ್ಮತವಾಗಿ ವೇದಿಕೆಯನ್ನು ಅಪೇಕ್ಷಿಸದೆ ತೆರೆ ಮರೆಯಲ್ಲಿ ಎಲ್ಲರೂ ದುಡಿದು ನಡೆಸಿರುವ ಶ್ರೀರಾಂಪುರ ಹೋಬಳಿಯ ಶಿಕ್ಷಕರು, ಬ್ರಹ್ಮಗುಪ್ತ ಗಣಿತ ಕ್ಲಬ್, ಸಿ.ಆರ್. ಪಿ.ಗಳಾದ ಮಂಜಪ್ಪ, ಇಂಡಪ್ಪ, ಶಿವಮೂರ್ತಿ, ಮಂಜುನಾಥ್ ಇವರ ಹಾಗೂ ಕಾರ್ಯಕ್ರಮದ ಪರಿಕಲ್ಪನೆ, ವಿನ್ಯಾಸ, ಮಾರ್ಗದರ್ಶನದೊಂದಿಗೆ ಪೂರ್ಣ ಪ್ರಮಾಣದ ನಿರ್ವಹಣೆಯ ಹೊಣೆ ಹೊತ್ತ ಶ್ರೀರಾಂಪುರ ಹೋಬಳಿಯ ಶಿಕ್ಷಣ ಸಂಯೋಜಕರಾದ ಎಸ್.ಪಿ. ಚಂದ್ರಶೇಖರಪ್ಪ ಇವರಿಗೆ ಇಲಾಖೆಯ ಪರವಾಗಿ ಹೊಸದುರ್ಗದ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಟಿ.ಎಸ್. ಆಂಜಿನಪ್ಪ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳಾದ ಯು. ಬಸವರಾಜಪ್ಪ ಇವರುಗಳು ಅಭಿನಂದನೆಗಳನ್ನು ಶಿಕ್ಷಣವಾರ್ತೆಯ ಮೂಲಕ ತಿಳಿಸಿದ್ದಾರೆ.

**– ಟಿ.ಎಸ್. ಆಂಜಿನಪ್ಪ**
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಹೊಸದುರ್ಗ, ಚಿತ್ರದುರ್ಗ ಜಿಲ್ಲೆ



ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರ ಹುಟ್ಟು ಹಬ್ಬದ ಆಚರಣೆ ಪ್ರಯುಕ್ತ ಶಿಕಾರಿಪುರ ತಾಲ್ಲೂಕಿನಾದ್ಯಂತ ಬಿಸಿಯೂಟ ವ್ಯವಸ್ಥೆ ಹೊಂದಿದ ಶಾಲಾ ಒಟ್ಟು 26 ಸಾವಿರ ಶಾಲಾ ಮಕ್ಕಳಿಗೆ ಉಚಿತವಾಗಿ ಸ್ಟೀಲ್ ತಟ್ಟೆ ಮತ್ತು ಲೋಟ ವಿತರಿಸಿರುತ್ತಾರೆ.

ಸ.ಹಿ.ಪ್ರಾ. ಶಾಲೆ ಅರಳೇಹಳ್ಳಿಗೆ ದಿನಾಂಕ 06–03–07 ರಂದು ಮಂಗಳವಾರ ಪಕ್ಷದ ಆಪ್ತ ಕಾರ್ಯಕರ್ತರಿಂದ ಉಚಿತ ತಟ್ಟೆ ಮತ್ತು ಲೋಟಗಳ ವಿತರಣಾ ಸಮಾರಂಭ ಮತ್ತು ಸರ್ವಶಿಕ್ಷಣ ಅಭಿಯಾನ ದಡಿ ನಿರ್ಮಾಣಗೊಂಡಂತಹ ರ್‍ಯಾಂಪ್ಸ್ ಉದ್ಘಾಟನಾ ಸಮಾರಂಭಗಳನ್ನು ಗ್ರಾಮದ ಗಣ್ಯರು ಅದ್ದೂರಿಯಾಗಿ ಹಮ್ಮಿಕೊಂಡಿದ್ದರು. ಕಾರ್ಯಕ್ರಮದಲ್ಲಿ ನಿಂಗಪ್ಪಗೌಡ್ರು, ಈಶ್ವರಪ್ಪಗೌಡ್ರು.ಟಿ.ಎ., ಸಣ್ಣತಿಮ್ಮಪ್ಪ ಕೆ., ಎಂ. ರಾಮಪ್ಪ, ತೀರ್ಥಲಿಂಗಪ್ಪ ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರುಗಳು ಭಾಗವಹಿಸಿದ್ದರು. ಎ.ಹೆಚ್. ನಾಗೇಶ್ ಸ.ಶಿ. ವಂದನಾರ್ಪಣೆ ಮಾಡಿದರು. ಎಸ್. ರವಿಕುಮಾರ್ ನಿರೂಪಣೆ ಮಾಡಿದರು.

**– ಜಿ. ಓಂಕಾರಪ್ಪ ಮು.ಶಿ.**

ಬಾಲ್ಕಿ ತಾಲ್ಲೂಕು ಚಿಂಚೋಳಿ ಸಿ.ಆರ್.ಸಿ. ವ್ಯಾಪ್ತಿಯ ಏಣಕೂರಿನಲ್ಲಿ, ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ 6–14 ವಯೋಮಾನದ ಎಲ್ಲ ಮಕ್ಕಳಿಗೆ ಶಿಕ್ಷಣ ಕಡ್ಡಾಯವಿರುವುದರಿಂದ ಶಾಲೆ ಯಿಂದ ಹೊರಗುಳಿದ ಶಾಲೆಗೆ ಬರಲಾಗದ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಮನೆಗೆ ಹೋಗಿ ಗೃಹಾಧಾರಿತ ಶಿಕ್ಷಣವನ್ನು ನೀಡಿದರು. ಸಂಪನ್ಮೂಲ ವ್ಯಕ್ತಿಗಳಾದ ವೆಂಕಟ ಬಿ. ಮೋತ್ರ ಹಾಗೂ ಚಂದ್ರಶೇಖರ್‌ರವರು ಈ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿ ಕಾರ್ಯಕ್ರಮದ ಪ್ರಗತಿ ಹಾಗೂ ಉಪಯುಕ್ತತೆಯನ್ನು ವೀಕ್ಷಿಸಿದರು .

– ಸಮೂಹ ಸಂಪನ್ಮೂಲ ವ್ಯಕ್ತಿ
ಸಮೂಹ ಸಂಪನ್ಮೂಲ ಕೇಂದ್ರ
ಬಾಲ್ಕಿ ತಾ॥, ಚಿಂಚೊಳಿ



ಬದಾಮಿ ತಾಲ್ಲೂಕಿನ ಸ.ಹಿ. ಪ್ರಾ. ಶಾಲೆ ಚೋಳಚಗಡ್ಡದಲ್ಲಿ ಸರ್ವಶಿಕ್ಷಣ ಅಭಿಯಾನ ವತಿಯಿಂದ ನಿರ್ಮಿತವಾದ ಕಟ್ಟಡವನ್ನು ಸ್ಥಳೀಯ ಶಾಸಕರಾದ ಶ್ರೀ ಎಂ.ಕೆ. ಪಟ್ಟಣಶೆಟ್ಟಿಯವರು ಉದ್ಘಾಟಿಸಿದರು. ಶಾಸಕರು ವಿದ್ಯೆಯ ಮಹತ್ವ, ವಿದ್ಯಾರ್ಥಿಗಳಲ್ಲಿ ಶಿಸ್ತು, ಸಹಕಾರ ಹಾಗೂ ಒಗ್ಗಟ್ಟಿನ ಬಗ್ಗೆ ಹೇಳಿದರು. ಶಾಲೆಗಳಲ್ಲಿ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮವನ್ನು ನಡೆಸುವಂತೆ ತಿಳಿಸಿದರು. ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಎಫ್. ಆರ್. ಪಾಟೀಲರು, ಸಂತೋಷ ಸಿಂಗರಜಪೂತ, ಶ್ರೀ ಅಶೋಕ್ ಶ್ರೀ ಜಿತ್‌ಗಂಗಾಲ, ಶಿಕ್ಷಣ ಸಂಯೋಜಕರಾದ ಪವಾಡ ಜಿ.ಪಿ. ಹಿರೇಮಠ ಭಾಗವಹಿಸಿದ್ದರು. ಶ್ರೀಮತಿ ವಿ. ಕೆ. ಕುಲಕರ್ಣಿ ವಂದಿಸಿದರು.

**–ವಿ.ಕೆ. ಕುಲಕರ್ಣಿ, ಮು.ಶಿ.**





ಶಿವಮೊಗ್ಗ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆ ಮುರದಾಳುವಿನ ಶಾಲೆಯ ವಿದ್ಯಾರ್ಥಿಗಳು ತಯಾರಿಸಿದ ಕಂಪ್ಯೂಟರ್ ಟಿ ಎಲ್ ಎಂ ಬಗ್ಗೆ ವಿದ್ಯಾರ್ಥಿಯು ವಿವರಣೆ ನೀಡಿದರು. ಶಿವಮೊಗ್ಗ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಟಿ.ಎನ್. ಕಮಲಾಕರರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಯ ಸಾಧನೆಯನ್ನು ಮೆಚ್ಚಿದರು ಹಾಗೂ ಎಲ್ಲಾ ವಿದ್ಯಾರ್ಥಿಗಳಲ್ಲಿಯೂ ಇಂತಹ ಸಂಶೋಧನಾತ್ಮಕ ಮನೋಭಾವನೆ ಬೆಳೆಯಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಿಲ್ಲಾಪಂಚಾಯತ್ ಸದಸ್ಯರಾದ ತೇಜಪ್ಪ, ಬಿ.ಆರ್.ಸಿ.ಯ ಮಂಜುನಾಥ್ ಹಾಗೂ ಗಂಗಾಧರಪ್ಪ ಭಾಗವಹಿಸಿದ್ದರು.

**– ಎಂ.ಮೋಹನ್‌ಕುಮಾರ್**

ಕ್ಷೇತ್ರ ಸಂಪನ್ಮೂಲ ವ್ಯಕ್ತಿ

## ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿ ಶುಲ್ಕ

(ಇತ್ತೀಚಿನ ಪರಿಷ್ಕರಣೆಯನ್ನು ಒಳಗೊಂಡಿದೆ)

ಸರ್ಕಾರದ ಆದೇಶ ಸಂಖ್ಯೆ : ಇಡಿ 16 ಎಸ್.ಎಸ್.ಎಲ್.ಬಿ. 99, ಬೆಂಗಳೂರು ದಿನಾಂಕ : 12.05.2002

| ಕ್ರಮಸಂಖ್ಯೆ | ಶುಲ್ಕದ ವಿವರಗಳು | ತರಗತಿಗಳು 1–5 | 6–7 | 8–10 |
|---|---|---|---|---|
| 1. | ದಾಖಲಾತಿ ಶುಲ್ಕ | – | 5–00 | 10.00 |
| 2. | ಕ್ರೀಡಾ ಶುಲ್ಕ | – | 15–00 | 20.00 |
| 3. | ರೀಡಿಂಗ್ ರೂಂ ಶುಲ್ಕ | – | 5–00 | 20.00 |
| 4. | ಲ್ಯಾಬೋರೇಟರಿ ಶುಲ್ಕ | – | – | 20.00 |
| 5. | ಎ.ವಿ.ಇ. ಶುಲ್ಕ | – | – | 10.00 |
| 6. | ಡ್ರಾಯಿಂಗ್ ಶುಲ್ಕ | – | – | 10.00 |
| 7. | ವೈದ್ಯಕೀಯ ಶುಲ್ಕ | – | 3–00 | 5.00 |
| 8. | ವೃತ್ತಿ ಶಿಕ್ಷಣ ಶುಲ್ಕ (ಕ್ರಾಫ್ಟ್ ಶಿಕ್ಷಕರಿದ್ದರೆ ಮಾತ್ರ) | | | 10.00 |
| 9. | ಶಿಕ್ಷಕ ಕಲ್ಯಾಣ ನಿಧಿವಂತಿಗೆ | – | – | 10.00 |
| 10. | ವಿದ್ಯಾರ್ಥಿ ಕ್ಷೇಮನಿಧಿವಂತಿಗೆ | – | – | 10.00 |
| 11. | ವಿದ್ಯಾರ್ಥಿ ಕ್ರೀಡಾ ನಿಧಿ | – | 5–00 | 15.00 |
| 12. | ಸ್ವಚ್ಛತಾ ಶುಲ್ಕ | – | – | 10.00 |
| 13. | ಶಾಲಾಭಿವೃದ್ಧಿ ಶುಲ್ಕ | – | – | 20.00 |
| 14. | ಶಿಕ್ಷಕರ ದಿನಾಚರಣೆ ಬಾವುಟ ಶುಲ್ಕ | | 2.00 | 5.00 |
| | ಒಟ್ಟು | – | **35.00** | **175.00** |

* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ / ಪ್ರವರ್ಗ–1ರ ಎಲ್ಲಾ ಮಕ್ಕಳಿಗೆ ಶುಲ್ಕ ವಿನಾಯ್ತಿ ಇದೆ. (ಸರ್ಕಾರದಿಂದ ಮರುಪಾವತಿ)

* 1 ರಿಂದ 10ರವರೆಗಿನ ಎಲ್ಲಾ ಹೆಣ್ಣು ಮಕ್ಕಳಿಗೆ ಶುಲ್ಕ ವಿನಾಯಿತಿ ಇದೆ. (ಸರ್ಕಾರದಿಂದ ಮರುಪಾವತಿ)

* 9,10,11ನೇ ಕ್ರಮ ಸಂಖ್ಯೆಯ ನಿಧಿಗಳಿಗೆ ವಿನಾಯ್ತಿ ಇಲ್ಲ. ಸಂಬಂಧಪಟ್ಟ ತರಗತಿಗಳ ಎಲ್ಲಾ ಮಕ್ಕಳೂ ಪಾವತಿಸುವುದು ಕಡ್ಡಾಯ.

* ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 5ನೇ ತರಗತಿಯಿಂದ ಪರಿಶಿಷ್ಟ ಜಾತಿ/ವರ್ಗವನ್ನೊಳಗೊಂಡಂತೆ ಎಲ್ಲಾ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ಕ್ರೀಡಾನಿಧಿ ಅನ್ವಯವಾಗುತ್ತದೆ.

ಕಿರಿಯ ಪ್ರಾಥಮಿಕ ಶಾಲೆಗಳ 5ನೇ ತರಗತಿವರೆಗೆ ಕ್ರೀಡಾನಿಧಿ ವಸೂಲಿ ಇಲ್ಲ.

*** ಅನುತ್ತೀರ್ಣ ವಿದ್ಯಾರ್ಥಿಗಳಿಂದ ಶಾಲಾಭಿವೃದ್ಧಿ ಶುಲ್ಕ ವಸೂಲಿ ಮಾಡುವಂತಿಲ್ಲ. ಉಳಿದ ಶುಲ್ಕಗಳನ್ನು ಮೇಲೆ ತಿಳಿಸಿದಂತೆ ವಸೂಲಿ ಮಾಡುವುದು. ಬೋಧನಾ ಶುಲ್ಕ 8ನೇ ತರಗತಿಗೆ ರೂ. 40/– 9ನೇ ತರಗತಿ ರೂ. 45/– ವಸೂಲಿ ಮಾಡುವುದು.**

– ಸಂ

## ಓದಿನ ಮನೆ

ಈ ಸಂಚಿಕೆಯಿಂದ ಓದಿನ ಮನೆ ಅಂಕಣ ಪ್ರಾರಂಭವಾಗಿದೆ. ಶೈಕ್ಷಣಿಕವಾಗಿ ಬೋಧನೆ, ಕಲಿಕೆಗೆ ಉಪಯುಕ್ತವಾಗುವ ಹೊಸ ಪ್ರಕಟಣೆ, ಬೋಧನ ಸಾಮಗ್ರಿಗಳ ಪರಿಚಯಕ್ಕಾಗಿ ಈ ಅಂಕಣವನ್ನು ಮೀಸಲಿರಿಸಿದೆ. ಸೂಕ್ತ ಮಾಹಿತಿಗಳನ್ನು ಸಕಾಲದಲ್ಲಿ ಪ್ರಕಟಣೆಗಾಗಿ ಕಳುಹಿಸಿಕೊಡಲು ಕೋರಿದೆ

– ಸಂ

★ **ಭಾರತೀಯ ವಿದ್ಯಾಭವನ**

ನಂ. 43/1, ರೇಸ್ ಕೋರ್ಸ್ ರಸ್ತೆ ಬೆಂಗಳೂರು–560 001

1) Indian Mathematics and Astronomy - Some Landmarks, ರೂ. 180/–

2) ಗಣಿತ ವಿಜ್ಞಾನ (1st & 2nd P.U.) (Published by Kannada V.V.) each ರೂ. 160/–

3) ಆರ್ಯಭಟ ರೂ. 48/–

4) Einstein : His papers & a letter ರೂ. 50/–

5) ಭಾರತೀಯ ಖಗೋಳಶಾಸ್ತ್ರ–ಒಂದು ಕಿರುಪರಿಚಯ ರೂ. 50/–

6) ಗಣಿತಶಾಸ್ತ್ರದ ಪ್ರವರ್ತಕರು ಮತ್ತು ಸ್ವಾರಸ್ಯಗಳು ರೂ. 60/–

7) ಶ್ರೀನಿವಾಸ ರಾಮಾನುಜನ್ (published by Kannada Pustaka praadikara) ರೂ. 60/–

8) ಸಂಸ್ಕೃತ ವಾಙ್ಮಯ ಸಂಪುಟ (10 ಪುಸ್ತಕಗಳು) ರೂ. 400/–

ವಿದ್ಯಾರ್ಥಿಗಳಿಗೆ ಹಾಗೂ ಗ್ರಂಥಭಂಡಾರಕ್ಕೆ ಪುಸ್ತಕದ ಮುಖ ಬೆಲೆಯ ಮೇಲೆ ಶೇ. 20 ರಿಯಾಯಿತಿ ನೀಡಲಾಗುವುದು. ಖರೀದಿ ಆದೇಶ ಸಲ್ಲಿಸುವಾಗ ಮುಖ ಬೆಲೆಯಲ್ಲಿ ಸದರಿ ರಿಯಾಯಿತಿ ಹಣವನ್ನು ಮುರಿದುಕೊಂಡು, ಬಾಕಿ ಹಣವನ್ನು ಭವನದ ಗಾಂಧೀ ಕೇಂದ್ರದ ಹೆಸರಿನಲ್ಲಿ ಎಂ.ಓ./ಡಿ.ಡಿ. ಮುಖಾಂತರ ಕೇಂದ್ರದ ವಿಳಾಸಕ್ಕೆ ಕಳಿಸಿದರೆ ಪುಸ್ತಕಗಳನ್ನು ಅವರಿಗೆ ಅಂಚೆ ಮೂಲಕ ಕಳಿಸುವ ಏರ್ಪಾಡು ಮಾಡಲಾಗುತ್ತದೆ.

**ಗೌರವ ಉಪನಿರ್ದೇಶಕರು**

ವಿಳಾಸ: ಭಾರತೀಯ ವಿದ್ಯಾಭವನ

43/1, ರೇಸ್‌ಕೋರ್ಸ್‌ರಸ್ತೆ, ಬೆಂಗಳೂರು–560 001

ದೂರವಾಣಿ : 080–22266525, 22280840

★ ನಟರಾಜ ಕ್ರಿಯೇಟಿವ್ ಸ್ಟಿಕ್ಸ್ – ರೂ.35/–

**ವಿಳಾಸ**

ನಂ. 73, 9ನೇ ಕ್ರಾಸ್, 9ನೇ ಮೈನ್, 2ನೇ ಬ್ಲಾಕ್

ಜಯನಗರ, ಬೆಂಗಳೂರು–560 011

ದೂರವಾಣಿ: 26560809.

**ಕಾರ್ಯದರ್ಶಿ / ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ**

ಕೆಂಪೇಗೌಡ ರಸ್ತೆ, ಬೆಂಗಳೂರು–560 002

ಸಂಖ್ಯೆ : ಎಫ್5/ಟಿಬಿಎಫ್/ಶಿಕ್ಷಕರ ದಿನಾಚರಣೆ/06/2007–08 ದಿನಾಂಕ : 25–04–2007

ಸುತ್ತೋಲೆ

**ವಿಷಯ : 2007–08ನೇ ಸಾಲಿನ ಕರ್ನಾಟಕ ರಾಜ್ಯ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಣಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನಗಳ ಶಿಕ್ಷಕರ ದಿನಾಚರಣೆ ಬಾವುಟಗಳ ಮಾರಾಟದ ವಂತಿಗೆ ಸಂಗ್ರಹ ಮತ್ತು ಲೆಕ್ಕ ಹೊಂದಾಣಿಕೆ ಬಗ್ಗೆ.**

ಕರ್ನಾಟಕ ರಾಜ್ಯ ಕಲ್ಯಾಣ ನಿಧಿ, ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ವತಿಯಿಂದ ಕರ್ನಾಟಕ ರಾಜ್ಯದಲ್ಲಿರುವ ಬೋಧಕ ವರ್ಗದವರಿಗೆ ಹಾಗೂ ವಿದ್ಯಾರ್ಥಿ ಸಮುದಾಯಕ್ಕೆ ಕಲ್ಯಾಣ ಕಾರ್ಯಕ್ರಮಗಳನ್ನು ಹಲವಾರು ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. 2007–2008ನೇ ಸಾಲಿಗೆ ಶಿಕ್ಷಕರ ದಿನಾಚರಣೆ ಬಾವುಟಗಳನ್ನು ರಾಜ್ಯದ ಎಲ್ಲಾ ವಿದ್ಯಾಸಂಸ್ಥೆಯ ಮುಖ್ಯಸ್ಥರಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ ಸಕಾಲದಲ್ಲಿ ಇವುಗಳನ್ನು ಮಾರಾಟ ಮಾಡಿ ವಂತಿಗೆ ಸಂಗ್ರಹಿಸಿ ನಿಧಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುವಂತೆ ಕೋರಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ವಿವಿಧ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ನೀಡಿರುವ ಇ.ಎಂ.ಎಸ್. ಡಾಟಾ ಅಂಕಿಅಂಶದ ಪ್ರಕಾರ ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರುಗಳಿಗಾಗಿ ಬಾವುಟಗಳನ್ನು ಸರಬರಾಜು ಮಾಡಲಾಗಿದೆ. ಇವುಗಳನ್ನು ವಿತರಿಸಿ ವಂತಿಗೆ ಸಂಗ್ರಹಿಸಲು ತಿಳಿಸಿದೆ.

**ವಂತಿಗೆ ವಿವರ**

| ವಿದ್ಯಾರ್ಥಿಗಳಿಗೆ | ಶಿಕ್ಷಕರ ದಿನಾಚರಣೆಯ ಬಾವುಟಗಳ ದರ | ಶಿಕ್ಷಕರ ಕಲ್ಯಾಣ ನಿಧಿ ವಂತಿಗೆ | ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ವಂತಿಗೆ |
|---|---|---|---|
| ಪ್ರಾಥಮಿಕ | ರೂ. 2.00 | – | – |
| ಪ್ರೌಢಶಾಲೆ | ರೂ. 5.00 | ರೂ. 10.00 | ರೂ. 10.00 |
| ಪದವಿಪೂರ್ವ ಕಾಲೇಜು ಮತ್ತು ತತ್ಸಮಾನ ಹಾಗೂ ಉನ್ನತ ಶಿಕ್ಷಣದ ಎಲ್ಲಾ ಕಾಲೇಜುಗಳಿಗೆ/ವಿದ್ಯಾಸಂಸ್ಥೆಗಳಿಗೆ | ರೂ. 15.00 | ರೂ. 15.00 | ರೂ. 15.00 |

**ಶಿಕ್ಷಕರಿಗೆ : ಶಿಕ್ಷಕರ ದಿನಾಚರಣೆ ಬಾವುಟಗಳಿಗೆ ವಂತಿಗೆ**

1) ಪ್ರಾಥಮಿಕ ಶಾಲಾ ಶಿಕ್ಷಕರಿಗೆ–ರೂ. 20.00, 2) ಪ್ರೌಢಶಾಲಾ ಶಿಕ್ಷಕರಿಗೆ – ರೂ. 25.00, 3) ಎಲ್ಲಾ ಸ್ನಾತಕೋತ್ತರ, ಡಿಪ್ಲೋಮ ಹಾಗೂ ಮತ್ತಿತರ ಉನ್ನತ ಶಿಕ್ಷಣ ಸಂಸ್ಥೆಗಳು, ಪದವಿ ಹಾಗೂ ಪ.ಪೂ/ತತ್ಸಮಾನ ಕಾಲೇಜು ಶಿಕ್ಷಕರು ಹಾಗೂ ಪ್ರಾಧ್ಯಾಪಕರಿಗೆ – ರೂ. 30.00 4) ಎಲ್ಲಾ ವರ್ಗದ ಶಿಕ್ಷಕರಿಗೆ ಅಜೀವ ಸದಸ್ಯತ್ವ ಶುಲ್ಕ – ರೂ. 500.00, ಎಸ್.ಡಬ್ಯೂಎಫ್ – ರೂ. 500.00, ಟಿಬಿಎಫ್

**ಒಟ್ಟು –ರೂ. 1000–00**

ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ವಂತಿಗೆಯಲ್ಲಿ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರು ಶೇಕಡಾ 50 ಭಾಗವನ್ನು ಕಿರಿಯ ಕಾಲೇಜು ಹಾಗೂ ಪದವಿ ಕಾಲೇಜುಗಳ, ಎಲ್ಲಾ ಸ್ನಾತಕೋತ್ತರ, ಡಿಪ್ಲೋಮ ಹಾಗೂ ಇನ್ನಿತರ ಉನ್ನತ ವ್ಯಾಸಂಗ ಶಿಕ್ಷಣ ಸಂಸ್ಥೆಗಳ, ಪ್ರಾಚಾರ್ಯರು ಶೇಕಡಾ 60 ಭಾಗವನ್ನು ತಮ್ಮ ಸಂಸ್ಥೆಯಲ್ಲಿ ಉಳಿಸಿಕೊಂಡು ವಿದ್ಯಾರ್ಥಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಿಕೊಂಡು ಉಳಿಕೆ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗಳಲ್ಲಿರುವ ನಿಧಿಗಳ ಖಾತೆಗೆ ತಪ್ಪದೆ ಸಕಾಲದಲ್ಲಿ ಜಮಾ ಮಾಡಲು ತಿಳಿಸಿದೆ. ಈ ಹಣದ ಸದ್ಬಳಕೆ ಬಗ್ಗೆ ಲೆಕ್ಕಪತ್ರಗಳನ್ನು ಅವರ ವ್ಯಾಪ್ತಿಯ ಹಿರಿಯ ಅಧಿಕಾರಿಗಳು ತಪಾಸಣಾ ಕಾಲದಲ್ಲಿ ಪರಿಶೀಲನೆ ಮಾಡುವರು. ಪ್ರೌಢಶಾಲೆ ಮತ್ತು ಇವುಗಳಿಗಿಂತ ಮೇಲ್ಪಟ್ಟ ಕೆಲವು ವಿದ್ಯಾಸಂಸ್ಥೆಗಳ ಮುಖ್ಯಸ್ಥರು ಬಾವುಟದ ವಂತಿಕೆಯ ಹಣವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಶಾಖೆಗೆ ಜಮಾ ಮಾಡಿರುವುದು ತಪಾಸಣಾ ಶಿಬಿರಗಳ ಪರಿಶೀಲನೆಯಲ್ಲಿ ಕಂಡುಬಂದಿದೆ. ಈ ಹಣವನ್ನು ತಕ್ಷಣ ನಿಧಿಗಳಿಗೆ ಜಮಾ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮ ಕೈಗೊಳ್ಳುವುದು. ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಈ ಕಛೇರಿಯಿಂದ ವಿತರಿಸಲಾಗುವ ಡಾ॥ ರಾಧಾಕೃಷ್ಣನ್‌ರವರ ಭಾವಚಿತ್ರವುಳ್ಳ ಬಾವುಟಗಳು ತಲುಪಲಿಲ್ಲವೆಂದು ಅನೇಕ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು ತಿಳಿಸಿ ಅದರ ಬಾಬ್ತು ಹಣವನ್ನು ಪಾವತಿ ಮಾಡದಿರುವುದು ಕಂಡುಬಂದಿದೆ. ಆದ್ದರಿಂದ ಸಂಬಂಧಿಸಿದ ಎಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಕಾಲದಲ್ಲಿ ಎಲ್ಲಾ ಶಾಲಾ ಕಾಲೇಜುಗಳಿಗೆ ತಪ್ಪದೆ ಬಾವುಟಗಳು ಸರಬರಾಜು ಆದ ಬಗ್ಗೆ ಖಚಿತಪಡಿಸಿಕೊಂಡು ಈ ಕಛೇರಿಗೆ ವರದಿ ಮಾಡಲು ತಿಳಿಸಿದೆ.

ಶಿಕ್ಷಕರ ದಿನಾಚರಣೆಯ ಬಾವುಟಗಳು ಜೂನ್ 15ನೇ ದಿನಾಂಕದೊಳಗೆ ತಲುಪದೇ ಇದ್ದಲ್ಲಿ ಪ್ರಥಮ ದರ್ಜೆ ಹಾಗೂ ಇನ್ನಿತರ ಕಾಲೇಜುಗಳ ಪ್ರಾಚಾರ್ಯರು ಹಾಗೂ ಇನ್ನಿತರ ವಿದ್ಯಾಸಂಸ್ಥೆಗಳವರು ತಕ್ಷಣ ನಿಧಿಗಳ ಕಛೇರಿಗೆ ಪತ್ರ ಬರೆಸಿ ಅಥವಾ ದೂರವಾಣಿ ಮೂಲಕ ಸಂಪರ್ಕಿಸಿ ಬಾವುಟಗಳನ್ನು ಪಡೆದು ವಿದ್ಯಾರ್ಥಿಗಳಿಗೆ ಹಾಗೂ ಬೋಧಕ ವರ್ಗದವರಿಗೆ ಮಾರಾಟ ಮಾಡಿ ವಂತಿಗೆಯನ್ನು

ಪಾವತಿಸುವುದು.

ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಬಾಲಕಿಯರ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಂತಿಗೆಯನ್ನು ಸರ್ಕಾರದಿಂದ ಮರುಪಾವತಿಯಾದ ತಕ್ಷಣ ಸಂಬಂಧಿಸಿದ ಅಧಿಕಾರಿಗಳು ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯ ಮೊತ್ತವನ್ನು ಕಛೇರಿಗೆ ಬ್ಯಾಂಕ್ ಹುಂಡಿ/ ಚಲನ್ ಮೂಲಕ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. ಬ್ಯಾಂಕ್ ಹುಂಡಿಗಳನ್ನು ಕಳುಹಿಸುವಾಗ, ಅವುಗಳ ಹಿಂಭಾಗದಲ್ಲಿ ತಪ್ಪದೆ ಟಿ.ಬಿ.ಎಫ್. ಕಛೇರಿಯಿಂದ ನೀಡಿರುವ ಸಂಸ್ಥೆಯ ಕೋಡ್ ನಂಬರ್ ಅನ್ನು ನಮೂದಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕಾರ್ಯದರ್ಶಿ ಖಜಾಂಚಿಗಳು

## ಕರ್ನಾಟಕ ಸರ್ಕಾರ

ಸಂಖ್ಯೆ : ಇಡಿ 06 ಎಸ್ಇಪಿ 2007

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 06–03–2007

ಇವರಿಂದ :
ಸರ್ಕಾರದ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು–560 001

ಇವರಿಗೆ :
1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ

ಮಾನ್ಯರೆ,

**ವಿಷಯ : ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಅನುದಾನಿತ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಸ್ಪಷ್ಟೀಕರಣ.**

ಉಲ್ಲೇಖ : ಸರ್ಕಾರದ ಆದೇಶ ದಿನಾಂಕ : 12–04–2006ರ ಸಂಖ್ಯೆ : ಇಡಿ 46 ಎಸ್ಇಪಿ 06.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಆದೇಶ ದಿನಾಂಕ : 12–04–2006ರಲ್ಲಿ ರಾಜ್ಯದಲ್ಲಿನ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ 2106 ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ 282 ಬೋಧಕ ವರ್ಗದ ಹುದ್ದೆಗಳನ್ನು ಭರ್ತಿ ಮಾಡಲು ಕೆಲವು ಷರತ್ತುಗಳನ್ನು ವಿಧಿಸಿ ಅನುಮತಿ ನೀಡಲಾಗಿದೆ. ಸದರಿ ಆದೇಶದಲ್ಲಿ ದಿನಾಂಕ 12–04–2006ರ ಮೊದಲು ನಿವೃತ್ತಿ, ರಾಜೀನಾಮೆ, ಬಡ್ತಿ ಮರಣ ಹಾಗೂ ವರ್ಗಾವಣೆಗಳಿಂದ ಖಾಲಿಯಾಗುವ ಹುದ್ದೆಗಳನ್ನು ಮಾತ್ರ ಭರ್ತಿಮಾಡಲು ಮಿತವ್ಯಯ ಆದೇಶ ಸಡಿಲಿಸಿ ಅನುಮತಿ ನೀಡಲಾಗಿದೆ. ಸರ್ಕಾರ ಅದನ್ನು ಮರುಪರಿಶೀಲಿಸಿ, ಸದರಿ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ದಿನಾಂಕವನ್ನು 12–04–2006ರ ಬದಲಿಗೆ 31–12–2006ರವರೆಗೆ ಖಾಲಿಯಾಗಿರುವ/ಖಾಲಿಯಾಗುವ ಹುದ್ದೆಗಳನ್ನೂ ಸಹ ನೇಮಕಾತಿ ಅನುಮೋದನೆ ಮಾಡಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

**ಸಹಿ/–**
(ಸಿದ್ದಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ರಾಜ್ಯದಲ್ಲಿನ ಒಂದೇ ಗ್ರಾಮದಲ್ಲಿ/ಒಂದೇ ಅಕ್ಕಪಕ್ಕದ ಸಮೀಪದ ಆವರಣದಲ್ಲಿ ಅಥವಾ ಆಸುಪಾಸಿನಲ್ಲಿ ಇರುವ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳನ್ನು ವಿಲೀನಗೊಳಿಸಿ, ಸಂಯುಕ್ತ ಪ್ರೌಢ ಶಾಲೆಗಳನ್ನಾಗಿ ಮಾರ್ಪಡಿಸಿ ಪ್ರಾರಂಭಿಸುವ ಬಗ್ಗೆ.**

ಓದಲಾಗಿದೆ: ಆಯುಕ್ತರು, ಸಾ.ಶಿ.ಇ. ಬೆಂಗಳೂರು ಇವರ ಪತ್ರ ಸಂಖ್ಯೆ ಸಿಪಿಐ.ಅ. ಶಾಖೆ, ಸಂಯುಕ್ತ ಸಾ.ಜ. 2–2–2007 ದಿನಾಂಕ 23–2–2007.

ಪ್ರಸ್ತಾವನೆ :

1) ಮೇಲೆ ಓದಲಾದ (1) ರಲ್ಲಿನ ಪತ್ರ ದಿನಾಂಕ 23–02–2007ರಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ರಾಜ್ಯದಲ್ಲಿನ ಒಂದೇ ಗ್ರಾಮ/ಒಂದೇ ಆವರಣ ಅಥವಾ ಒಂದೇ ಗ್ರಾಮದ ಆಸುಪಾಸಿನಲ್ಲಿ ಇರುವ ಸರ್ಕಾರಿ ಕಿರಿಯ ಪ್ರಾಥಮಿಕ

ಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಮೂರು ವಿಭಾಗಗಳಿರುವ ಪ್ರೌಢಶಾಲೆಗಳನ್ನು ಸೇರಿಸಿ ಒಟ್ಟು 904 ಸಂಯುಕ್ತ ಪ್ರೌಢ ಶಾಲೆಗಳನ್ನಾಗಿ ಮಾರ್ಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2) ಒಂದೇ ಗ್ರಾಮದಲ್ಲಿ / ಒಂದೇ/ ಅಕ್ಕಪಕ್ಕದ/ ಸಮೀಪದ ಆವರಣದಲ್ಲಿ ಅಥವಾ ಒಂದೇ ಗ್ರಾಮದ ಆಸುಪಾಸಿನಲ್ಲಿ ಇರುವ ಕಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಹಾಗೂ ಮೂರು ವಿಭಾಗಗಳಲ್ಲಿನ (09 ಪಟ್ಟಣ ಪ್ರದೇಶ ಹೊರತುಪಡಿಸಿ) ಪ್ರೌಢ **ಶಾಲೆಗಳಲ್ಲಿನ ಮಕ್ಕಳು ಮತ್ತು ಶಿಕ್ಷಕರ ವಿವರಗಳು ಕೆಳಕಂಡಂತಿರುತ್ತವೆ.**

1. ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ 652
   - ಅ) ಮಕ್ಕಳು – 59,586
   - ಆ) ಶಿಕ್ಷಕರು – 4,502
2. ಪ್ರೌಢ ಶಾಲೆಗಳ ಸಂಖ್ಯೆ : 521
   - ಅ) ಮಕ್ಕಳು – 71,181
   - ಆ) ಶಿಕ್ಷಕರು – 3486

3) ಇಂದು ರಾಜ್ಯದಲ್ಲಿ 25,276 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 20,474 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 3574 ಸರ್ಕಾರಿ ಪ್ರೌಢ ಶಾಲೆಗಳು ಇದ್ದು, ಇವುಗಳಲ್ಲಿ ಹಲವು ಶಾಲೆಗಳು ಒಂದೇ ಗ್ರಾಮ/ಒಂದೇ ಆವರಣದಲ್ಲಿ ಅಥವಾ ಆಸುಪಾಸಿನಲ್ಲಿ ಸ್ಥಾಪಿತಗೊಂಡಿರುತ್ತವೆ. ಸದರಿ ಶಾಲೆಗಳಲ್ಲಿ ಮಕ್ಕಳು ಮತ್ತು ಶಿಕ್ಷಕರ ಅನುಪಾತ ಹಾಗೂ ಶಾಲಾ ಸೌಲಭ್ಯಗಳಲ್ಲಿ ಏಕರೂಪತೆ ಇರುವುದಿಲ್ಲ. ವಿದ್ಯಾರ್ಥಿಗಳಲ್ಲಿ ಮಕ್ಕಳು ಮತ್ತು ಶಿಕ್ಷಕರ ಅನುಪಾತ ಹಾಗೂ ಶಾಲಾ ಸೌಲಭ್ಯಗಳಲ್ಲಿ ಏಕರೂಪತೆ ಇರುವುದಿಲ್ಲ. ವಿದ್ಯಾರ್ಥಿಗಳು ಒಂದೇ ತರಗತಿಯಲ್ಲಿ ಪ್ರದೇಶ ಪಡೆದರೆ ಮತತು 7ನೇ ತರಗತಿಯಲ್ಲಿ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ.) ಪಡೆದು ಪ್ರೌಢಶಾಲೆಯಲ್ಲಿ ಪ್ರವೇಶಾತಿಗೆ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ಪೂರೈಸಲು ಸಾಧ್ಯವಾಗದೇ ಹಲವು ವಿದ್ಯಾರ್ಥಿಗಳು 5ನೇ ತರಗತಿ / 7ನೇ ತರಗತಿಯ ಅಂತ್ಯದಲ್ಲಿ ಶಾಲೆ ಬಿಡುತ್ತಾರೆ. ಇದನ್ನು ತಪ್ಪಿಸಬೇಕಾಗಿದೆ. ಮೇಲಾಗಿ 3 ವಿಭಾಗಗಳಿರುವ ಪ್ರೌಢಶಾಲೆಗಳಲ್ಲಿನ ಪ್ರೌಢಶಾಲಾ ಶಿಕ್ಷಕರು 6 ಮತ್ತು 7ನೇ ತರಗತಿಗಳಿಗೂ ತಮ್ಮ ಕಾರ್ಯಭಾರದೊಂದಿಗೆ ಕಲಿಸಲು ಸಾಧ್ಯವಾಗುವುದು. ಇದರಿಂದ 6 ಮತ್ತು 7ನೇ ತರಗತಿಗಳಲ್ಲಿನ ಕಲಿಕಾ ಮಟ್ಟ ಹೆಚ್ಚಿಸಬಹುದಾಗಿದೆ. ಅದಕ್ಕಾಗಿ ಈ ಸಂಯುಕ್ತ ಶಾಲಾ ಪದ್ಧತಿಯು ಒಂದು ಮಾರ್ಗೋಪಾಯವೆಂದು ಭಾವಿಸಲಾಗಿದೆ.

4) ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಒಟ್ಟು 652 ಶಾಲೆಗಳು ಹಾಗೂ 521 ಸಂಯುಕ್ತ ಪ್ರೌಢಶಾಲೆಗಳ ಸಂಪೂರ್ಣ ವಿವರಗಳಿರುವ ಜಿಲ್ಲಾವಾರು ಪಟ್ಟಿಯನ್ನು ಅನುಬಂಧ–111ರಲ್ಲಿ ಅಡಕವಾಗಿರುತ್ತದೆ.

5) ಈ ಮೇಲ್ಕಂಡ ವಿವರಣೆಯ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಶ್ರೇಯೋಭಿವೃದ್ಧಿಯನ್ನು ಲಭ್ಯವಿರುವ ಸಂಪನ್ಮೂಲಗಳನ್ನು ಪೂರ್ಣವಾಗಿ ಸದ್‌ವಿನಿಯೋಗವಾಗಬೇಕೆಂಬ ಉದ್ದೇಶದಿಂದ ಎರಡು ಹಂತಗಳಲ್ಲಿ ಸಂಯುಕ್ತ ಶಾಲಾ ಪದ್ಧತಿಯನ್ನು ಪ್ರಾರಂಭಿಸುವುದಕ್ಕಾಗಿ ಸರ್ಕಾರ ನಿರ್ಣಯಿಸಿ, ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಇಡಿ 32 ಎಸ್‌ಎಲ್‌ಬಿ 2007, ಬೆಂಗಳೂರು ದಿನಾಂಕ 04–05–2007**

6) ಸಂಯುಕ್ತ ಶಾಲಾ ಪದ್ಧತಿಯ ಗುರಿ :– ಶಿಕ್ಷಣ ಸೌಲಭ್ಯ ಮತ್ತು ಮಾನವ ಸಂಪನ್ಮೂಲದ ಬಳಕೆಯ ಮೂಲಕ ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಸಾಧಿಸುವುದಾಗಿದೆ.

7) ಸಂಯುಕ್ತ ಶಾಲಾ ಪದ್ಧತಿಯ ಉದ್ದೇಶಗಳು :

- ಅ) ಸೌಕರ್ಯ – ಸೌಲಭ್ಯ ಹಾಗೂ ಮಾನವ ಸಂಪನ್ಮೂಲಗಳ ಪೂರ್ಣ ಸದ್ಭಳಕೆ.
- ಆ) ಪರಿಣಾಮಕಾರಿ ಮೇಲ್ವಿಚಾರಣೆ
- ಇ) ಅಧಿಕಾರ ವಿಕೇಂದ್ರೀಕರಣ
- ಈ)ಶಿಕ್ಷಣದ ಗುಣಮಟ್ಟ ಹೆಚ್ಚಿಸುವುದು.

8) ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ ಮೊದಲ ಹಂತವಾಗಿ ರಾಜ್ಯದಲ್ಲಿನ 652 ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ವಿಲೀನಗೊಳಿಸಿ 521 ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಗಳನ್ನು (9 ಪಟ್ಟಣ ಪ್ರದೇಶ ಹೊರತುಪಡಿಸಿ) ಸ್ಥಾಪಿಸಲು ಆದೇಶಿಸಿದೆ. ಸದರಿ ಸಂಯುಕ್ತ ಪ್ರೌಢ ಶಾಲೆಗಳನ್ನು ಸ್ಥಾಪಿಸಲು ಅನುಸರಿಸಬೇಕಾದ ವಿಧಿ ವಿಧಾನ ಮಾರ್ಗಸೂಚಿ ಈ ಆದೇಶದೊಡನೆ ಅಡಕವಾಗಿರುವ ಅನುಬಂಧ 1 ರಿಂದ ಖಖಖ ರಂತೆ ಅನುಷ್ಠಾನಗೊಳಿಸಲು ತಿಳಿಸಿದೆ.

9) ಈ ಆದೇಶವನ್ನು ಅನುಷ್ಠಾನಗೊಳಿಸಲು ಹಾಗೂ ಅನುಷ್ಠಾನದಲ್ಲಿ ಬರುವ ಸನ್ನಿವೇಶಗಳನ್ನು ಬಗೆಹರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರವನ್ನು ನೀಡಲಾಗಿದೆ. ಈ ಯೋಜನೆಯ ಎರಡು ಹಂತಗಳು ಕಳಗಿನಂತಿವೆ.

1) ಮೊದಲನೇ ಹಂತದಲ್ಲಿ 3 ವಿಭಾಗಗಳಿರುವ 521 ಸರ್ಕಾರಿ ಪ್ರೌಢಶಾಲೆಗಳನ್ನು 652 ಪ್ರಾಥಮಿಕ ಶಾಲೆಗಳನ್ನೊಳಗೊಂಡು

521 ಸಂಯುಕ್ತ ಶಾಲಾ ಪದ್ಧತಿಯನ್ನು 2007–08 ಸಾಲಿನಿಂದ ಜಾರಿಗೊಳಿಸಲು ಆದೇಶಿಸಿದೆ.

2) ಎರಡನೇ ಹಂತ 2008–09ರ ಸಾಲಿನಲ್ಲಿ ಇನ್ನುಳಿದ ಬಾಕಿ ಎಲ್ಲಾ ಗ್ರಾಮೀಣ ಹಾಗೂ ನಗರ ಪ್ರದೇಶದ ಪ್ರೌಢಶಾಲೆಗಳನ್ನು ಸಂಯುಕ್ತ ಶಾಲೆಗಳನ್ನಾಗಿ ಪರಿವರ್ತಿಸಿ ಅನುಷ್ಠಾನಗೊಳಿಸಲು ಆದೇಶಿಸಿದೆ. ಈ ಎರಡನೇ ಹಂತದಲ್ಲಿ ಪಟ್ಟಣ ಪ್ರದೇಶದಲ್ಲಿ ಪ್ರೌಢಶಾಲೆಗೆ ಹೊಂದಿಕೊಂಡ ಅಕ್ಕಪಕ್ಕದ ಹಿರಿಯ ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳನ್ನು ವಿಲೀನಗೊಳಿಸುವುದು.

3) ಈ ವಿಲೀನದ ನಂತರವೂ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಮಂಜೂರಾದ ಬಡ್ತಿ/ ಪದವೀಧರ/ಪದವೀಧರೇತರ ಮುಖ್ಯ ಶಿಕ್ಷಕರ ಹುದ್ದೆಯ ಯಥಾವತ್ತಾಗಿ ಮುಂದುವರೆಯುತ್ತದೆ. ಸದರಿ ಹುದ್ದೆಯ ಅಧಿಕಾರ ಹಾಗೂ ಕಾರ್ಯಭಾರವು ಸದರಿ ಆದೇಶದಂತೆ ಪರಿಷ್ಕರಣೆಯಾಗುತ್ತದೆ.

10) ಸಂಯುಕ್ತ ಪ್ರೌಢಶಾಲಾ ಪದ್ಧತಿಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದಕ್ಕಾಗಿ ಅನುಸರಿಸಬೇಕಾದ ವಿಧಿ, ವಿಧಾನಗಳ ಹಾಗೂ ಮಾರ್ಗಸೂಚಿ ಕೆಳಗೆ ನೀಡಲಾಗಿದೆ. ಸಂಯುಕ್ತ ಪ್ರೌಢ ಶಾಲೆಯ ಮುಖ್ಯಸ್ಥರ ಅಧಿಕಾರ ವ್ಯಾಪ್ತಿ ಹಾಗೂ ಇತರೆ ಕಾರ್ಯಭಾರದ ವಿವರಗಳನ್ನು ಅನುಬಂಧ– 1 ಹಾಗೂ 11 ರಲ್ಲಿ ಅಡಕವಾಗಿರುತ್ತದೆ.

11) ವಿಧಿ ವಿಧಾನ ; ಮಾರ್ಗಸೂಚಿ ಹಾಗೂ ಅಪವಾದಗಳು :–

ಅ) ವಿಧಿ ವಿಧಾನ :–

ಈ ಆದೇಶ ಹೊರಡಿಸಿರುವ ನಂತರ, ಆಯುಕ್ತರು ಸಾ.ಶಿ.ಇ. ಬೆಂಗಳೂರು ಇವರು ರಾಜ್ಯದ 3 ವಿಭಾಗಗಳಿರುವ 521 (09 ಪಟ್ಟಣ ಪ್ರದೇಶ ಹೊರತು ಪಡಿಸಿ) ಸರ್ಕಾರಿ ಪ್ರೌಢ ಶಾಲೆಗಳನ್ನು ಸಂಯುಕ್ತ ಪ್ರೌಢಶಾಲೆಗಳನ್ನಾಗಿ ಪರಿವರ್ತಿಸಿ ಅವರಿಗೆ ಪ್ರದೇಶವಾದ ಅಧಿಕಾರವನ್ನು ಚಲಾಯಿಸಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರಿಗೆ ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಸ್ಥಾಪಿಸಲು ನಿರ್ದೇಶನ ನೀಡುವುದು.

ಆ) ಮಾರ್ಗಸೂಚಿ :–

ಅ) ಒಂದೇ ಗ್ರಾಮದಲ್ಲಿ ಒಂದಕ್ಕಿಂತಲೂ ಹೆಚ್ಚು ಪ್ರೌಢಶಾಲೆಗಳಿದ್ದಲ್ಲಿ, ಅವುಗಳಿಗೆ ಹೊಂದಿಕೊಂಡ ಮತ್ತು ಫೀಡರ್ ಶಾಲೆಗಳಾಗಿರುವ ಪ್ರಾಥಮಿಕ ಶಾಲೆಗಳನ್ನು ಪ್ರತಿಯೊಂದಕ್ಕೆ ವಿಲೀನಗೊಳಿಸಿ ಪ್ರತಿ ಪ್ರೌಢಶಾಲೆಯನ್ನು "ಸರ್ಕಾರಿ ಸಂಯುಕ್ತ ಪ್ರೌಢಶಾಲೆ" ಎಂದು ಪದನಾಮೀಕರಿಸುವುದು.

ಆ) ಸಂಯುಕ್ತ ಪದವಿ ಪೂರ್ವ ಕಾಲೇಜುಗಳು ಈ ಆದೇಶದ ವ್ಯಾಪ್ತಿಗೆ ಬರುವುದಿಲ್ಲ.

ಇ) ಇಂತಹ ಒಂದು ಗ್ರಾಮದಲ್ಲಿ ಬರುವ ಎಲ್ಲಾ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಈ ಸಂಯುಕ್ತ ಸರ್ಕಾರಿ ಶಾಲಾ ವ್ಯಾಪ್ತಿಗೆ ಸೇರಲು ಮತ್ತು ಸಂಯುಕ್ತ ಪ್ರೌಢಶಾಲೆ ಎಂದು ಪದನಾಮೀಕರಿಸಲು ಜಿಲ್ಲಾ ಉಪ ನಿರ್ದೇಶಕರು (ಆಡಳಿತ ಬಿ.ಇ.ಓ. ಅವರಿಂದ ಎಲ್ಲಾ ವಿವರ ಪಡೆದು ಅಧಿಕೃತ ಜ್ಞಾಪನವೆಂದು ದಿನಾಂಕ : 25–05–2007ರೊಳಗೆ ಹೊರಡಿಸುವುದು.

ಈ) ಇದರಂತೆ, ಪಟ್ಟಣ ಪ್ರದೇಶದ ಪ್ರೌಢ ಶಾಲೆಯ ಅತೀ ಸಮೀಪದ ಅಕ್ಕ–ಪಕ್ಕದ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಗುರುತಿಸಿ ಇಂತಹ ಶಾಲೆಗಳನ್ನು ಸಹ ವಿಲೀನಗೊಳಿಸಿ ಸರ್ಕಾರಿ ಸಂಯುಕ್ತ ಪ್ರೌಢಶಾಲೆ ಎಂದು ಪದನಾಮೀಕರಿಸುವುದು.

ಉ) ವಿಲೀನಗೊಳಿಸಿದ ವಿವಿಧ ಶಾಲೆಯಲ್ಲಿ ಕಾರ್ಯ ನಿರತರಾದ ಮುಖ್ಯ ಗುರುಗಳ, ಬಡ್ತಿ ಮುಖ್ಯ ಗುರುಗಳ, ಪದವೀಧರ ಮುಖ್ಯ ಗುರುಗಳ ಹುದ್ದೆಗಳು ಹಾಗೂ ಸಿಬ್ಬಂದಿಗಳೂ ಅದೇ ಶಾಲೆಯಲ್ಲಿ ಮುಂದುವರೆಯುತ್ತಾರೆ. ಆದರೆ ಇನ್ನು ಮುಂದೆ ಅವರು ಅನುಬಂಧ–1 ರಲ್ಲಿ ಸೂಚಿಸಿದಂತೆ ಅಧಿಕಾರ ಹಾಗೂ ಕರ್ತವ್ಯಗಳನ್ನು ಹೊಂದಿರುತ್ತಾರೆ.

ಊ) ಇಂತಹ ಶಾಲೆಗಳ ಸಮಗ್ರ ಸೌಲಭ್ಯ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ ಹಾಗೂ ಶಿಕ್ಷಕರು ಸಂಯುಕ್ತ ಪ್ರೌಢಶಾಲೆಯ ಅಂಗವಾಗಿದ್ದು 1 ರಿಂದ 10ನೇ ತರಗತಿವರೆಗಿನ ಎಲ್ಲಾ ಮಕ್ಕಳ ಕಲಿಕೆಗಾಗಿ ಬಳಕೆಯಾಗುವುದು.

ಋ) ಸಂಯುಕ್ತ ಪ್ರೌಢಶಾಲೆಯ ಎಲ್ಲಾ ಪದವೀಧರ ಶಿಕ್ಷಕರು 5–7ನೇ ತರಗತಿಗಳಿಗೆ ಕಾರ್ಯಭಾರಕ್ಕೆ ಅನುಗುಣವಾಗಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಹಾಗೂ ಇಂಗ್ಲಿಷ್ ಒಂದು ಅಂಗ ಸಂಸ್ಥೆಯ ಶಿಕ್ಷಕರೆಂದು ಭಾವಿಸಿ ಈ ವಿಷಯಗಳನ್ನು ಭೋಧಿಸುವುದು.

ಎ) ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರೆಂದು ಭಾವಿಸದೆ, ಶಿಕ್ಷಕರ ವೃತ್ತಿಯೆಂದು ಅಭಿಮಾನದಿಂದ ಸಮಗ್ರ ಮಕ್ಕಳ ಕಲಿಕೆಯತ್ತ ಗಮನ ಹರಿಸಬೇಕು.

ಏ) ಸಂಯುಕ್ತ ಶಾಲೆಗಳಲ್ಲಿ ವಿಲೀನಗೊಳ್ಳುವ ವಿವಿಧ ಶಾಲೆಗಳಿಗಾಗಿ ರಚಿತಗೊಂಡ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಅವರು ಆಯ್ಕೆಗೊಂಡ ಅವಧಿಯವರೆಗೆ ಮುಂದುವರೆಯುತ್ತದೆ. ಅಂತಹ ಎಲ್ಲಾ ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿಗಳಿಗೆ ಸಂಯುಕ್ತ ಪ್ರೌಢಶಾಲೆಯ ಮುಖ್ಯಸ್ಥರೇ ಕಾರ್ಯದರ್ಶಿಗಳಾಗಿರುತ್ತಾರೆ.

ಐ) ಪದನಾಮೀಕರಿಸಿದ ಸಂಯುಕ್ತ ಪ್ರೌಢಶಾಲೆಯ ಮುಖ್ಯಸ್ಥರೇ ವಿವಿಧ ಯೋಜನೆಗಳಾದ ಸರ್ವ ಶಿಕ್ಷಣ ಅಭಿಯಾನ, ಅಕ್ಷರ ದಾಸೋಹ, ಶಾಲಾನುದಾನ ಕಟ್ಟಡದ ಅನುದಾನ ಹಾಗೂ ಉಳಿದ ಅನುದಾನ ಬಳಸಿ ಅಕ್ಕೆ ಹೊಣೆಗಾರರಾಗುತ್ತಾರೆ. ಈ ಹೊಣೆಗಾರಿಕೆಯಿಂದ ಕಿರಿಯ/ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರುಗಳು ಮುಕ್ತರಾಗುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಸಹಿ/–**

(ಎಂ. ಪ್ರಭುಸ್ವಾಮಿ)

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ) ಶಿಕ್ಷಣ ಇಲಾಖೆ

# ಅನುಬಂಧ – 1

ಪ್ರಾಥಮಿಕ ಶಾಲಾ ವಿಭಾಗದ ಮುಖ್ಯ ಶಿಕ್ಷಕರು :–

1 ರಿಂದ 5ನೇ/1ರಿಂದ 7ನೇ ತರಗತಿಗಳಿಗೆ ಸಂಬಂಧಿಸಿದಂತೆ, ವಿಲೀನಕ್ಕೆ ಪೂರ್ವದಲ್ಲಿನ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ ಬಡ್ತಿ/ ಪದವೀದರ /ಪದವೀಧರೇತರ ಮುಖ್ಯ ಶಿಕ್ಷಕರು ಸಂಯುಕ್ತ ಪ್ರೌಢಶಾಲೆಯಲ್ಲಿ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುವರು.

1. ಕರ್ತವ್ಯಗಳು :–

1 ರಿಂದ 5ನೇ/1ರಿಂದ 7ನೇ ತರಗತಿಯವರೆಗೆ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಮೇಲ್ವಿಚಾರಣೆ ಮಾರ್ಗದರ್ಶನ ನೀಡುವುದು.

1) 1 ರಿಂದ 5ನೇ ತರಗತಿಯ ವಯೋಮಾನದ ಎಲ್ಲಾ ಮಕ್ಕಳನ್ನು ದಾಖಲಿಸುವುದು.
2) ದಾಖಲಾದ ಎಲ್ಲಾ ಮಕ್ಕಳು ಸತತವಾಗಿ ಶಾಲೆಯಲ್ಲಿರುವಂತ ಕ್ರಮ ವಹಿಸುವುದು.
3) ಶಾಲೆಯಲ್ಲಿ ಕಲಿಕಾ ವಾತಾವರಣ ನಿರ್ಮಿಸುವುದು.
4) ವಿಶೇಷ ನ್ಯೂನತೆಗಳುಳ್ಳ ಮಕ್ಕಳಿಗೆ ಅವರ ಅಗತ್ಯಗಳಿಗೆ ತಕ್ಕಂತೆ ಸೌಲಭ್ಯಗಳು ಒದಗಿಸುವುದು.
5) ಶಿಕ್ಷಕರು, ಪಾಲಕರು ಹಾಗೂ ಸಮುದಾಯದೊಂದಿಗೆ ಸಮನ್ವಯತೆ ಸಾಧಿಸುವುದು.
6) ಮುಖ್ಯ ಶಿಕ್ಷಕರು ಸಹ ಕಡ್ಡಾಯವಾಗಿ ನಿಗದಿತ ಬೋಧನಾ ಅವಧಿಗಳನ್ನು ಬೋಧಿಸುವುದು.
7) ಶಾಲಾ ಪ್ರಾರಂಭೋತ್ಸವನ್ನು ಆಚರಿಸುವುದರ ಮೂಲಕ, ಎಲ್ಲಾ ಮಕ್ಕಳಿಗೆ ಸರ್ಕಾರವೂ ನೀಡುವ ಸೌಲಭ್ಯಗಳು ಸಕಾಲಕ್ಕೆ ವಿತರಿಸುವುದು.
8) 1ರಿಂದ 5ನೇ ತರಗತಿಯ ಶಿಕ್ಷಕರ ಹಾಗೂ ತರಗತಿವಾರು ವೇಳಾಪಟ್ಟಿ ತಯಾರಿಸುವುದು.
9) ಸೇತು ಬಂಧ ಚಿಣ್ಣರ ಅಂಗಳ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರೊಗೊಳಿಸುವುದು.
10) ಶಿಕ್ಷಕರ ಬೋಧನಾ ಟಿಪ್ಪಣಿ ಪರಿಶೀಲಿಸುವುದು.
11) ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆ ಹಾಗೂ ಪ್ರಗತಿ ಪತ್ರವನ್ನು ಪೋಷಕರ ಗಮನಕ್ಕೆ ತರುವುದು.
12) ಶಿಕ್ಷಕರೊಂದಿಗೆ ಚರ್ಚಿಸಿ, ಸೇತುಬಂಧ ಹಾಗೂ ತ್ರೈಮಾಸಿಕ ಪರೀಕ್ಷಾ ಫಲಿತಾಮಶವನ್ನು ವಿಶ್ಲೇಷಿಸಿ, ಮುಂದಿನ ಕ್ರಮದ ಬಗ್ಗೆ ತೀರ್ಮಾನಿಸುವುದು.
13) ಪ್ರತಿಯೊಂದು ಮಗು ನಿಗಧಿತ ಕಲಿಕಾ ಮಟ್ಟವನ್ನು ಗಳಿಸುವಲ್ಲಿ ಪ್ರತಿಯೊಬ್ಬ ಶಾಲಾ ಶಿಕ್ಷಕರು ಹೊಣೆಗಾರರೆಂದು ಗಮನಿಸುವುದು. ಶಾಲೆಯ ಎಲ್ಲಾ ಶಿಕ್ಷಕರು ಗುಣಮಟ್ಟದ ಕಲಿಕೆಗೆ ದಾಯಿತ್ವ ಹೊಂದಿರುತ್ತಾರೆ.
14) ಸಂಯುಕ್ತ ಸಾಲೆಯ ಮುಖ್ಯಸ್ಥರಿಗೆ ಎಲ್ಲಾ ರೀತಿಯ ಸಹಕಾರ ನೀಡಿ ಸಮನ್ವಯ ಸಾಧಿಸುವುದು.
15) ಸಂಯುಕ್ತ ಪ್ರೌಢಶಾಲೆಯ ಮುಖ್ಯಸ್ಥರು ನೀಡುವ ಇತರೆ ಯಾವುದೇ ಕರ್ತವ್ಯ ನಿರ್ವಹಿಸುವುದು.
16) ಇತರೆ ಯಾವುದೇ ಕೆಲಸ ಇಲಾಖೆ ವಹಿಸಿಕೊಟ್ಟಲ್ಲಿ, ಅದನ್ನು ಅನುಷ್ಠಾನಗೊಳಿಸುವುದು.

# ಅನುಬಂಧ – 2

1.ಕರ್ತವ್ಯಗಳು :–

1) 1 ರಿಂದ 10 ನೆಯ ತರಗತಿಯ ದಾಖಲಾತಿಯನ್ನು ನಿಯಂತ್ರಿಸುವುದು.
2) 1 ರಿಂದ 5/1 ರಿಂದ 7 ದಾಖಲಾತಿ ಪ್ರಕ್ರಿಯೆ ಆ ವಿಭಾಗದ ಮುಖ್ಯ ಗುರುಗಳ ಮುಖಾಂತರ ಆದರೆ ಒಟ್ಟಾರೆ ದಾಖಲಾತಿ ವಹಿ/ಗ್ರಾಮಗಳನ್ನು ನಮ್ಮ ನೇತೃತ್ವದಲ್ಲಿ ನಿರ್ವಹಿಸುವುದು.
3) ಸಂಯುಕ್ತ ಪ್ರೌಢಶಾಲೆಗೆ ಒಂದೇ ದಾಖಲಾತಿ ವಹಿ 1 ರಿಂದ 10ನೇ ತರಗತಿವರೆಗೆ ಇಡುವುದು. 1 ರಿಂದ 10ನೇ ತರಗತಿವರೆಗೂ ತರಗತಿಯಿಂದ ತರಗತಿಗೆ ವರ್ಗಾವಣೆ ಪತ್ರ (ಟಿ.ಸಿ.) ಕೊಡಬೇಕಾಗಿಲ್ಲ. ಕೇವಲ ಒಂದು ದಾಖಲಾತಿ ವಹಿ ಮೂಲಕ ಮುಂದಿನ ತರಗತಿಗೆ ದಾಖಲಿಸಿಕೊಳ್ಳಬಹುದು.
   ಉದಾ: 5 ರಿಂದ 6 ಅಥವಾ 7 ರಿಂದ 8ಕ್ಕೆ
4) ದಾಖಲಾದ ಎಲ್ಲಾ ಮಕ್ಕಳು(1–10) ಸತತವಾಗಿ ಹಾಜರಿರುವಂತೆ ನೋಡಿಕೊಳ್ಳುವುದು.
5) ಶಾಲೆಯಲ್ಲಿ ಶೈಕ್ಷಣಿಕ ಪರಿಸರವನ್ನು ನಿರ್ಮಿಸುವುದು.
6) ಶಾಲೆಯಿಂದ ಬಿಡುಗಡೆ ಹೊಂದುವ ಮಗುವಿಗೆ ವರ್ಗಾವಣೆ ಪತ್ರ (ಟಿ.ಸಿ.) ಕೊಡಬೇಕಾದಲ್ಲಿ ಆಯಾ ತರಗತಿಯ ದಾಖಲಾತಿ ರಿಜಿಸ್ಟರ್‌ನ್ನು ಪರಿಶೀಲಿಸಿ ಸಂಯುಕ್ತ ಪ್ರೌಢಶಾಲೆಯ ಮುಖ್ಯಸ್ಥರೇ ವರ್ಗಾವಣೆ ಪತ್ರ (ಟಿ.ಸಿ.) ನೀಡುವುದು.

7) 1 ರಿಂದ 10ನೇ ತರಗತಿವರೆಗೆ ಶಾಲಾ ವೇಳೆ / ಶಾಲಾ / ಶಿಕ್ಷಕರ ವೇಳಾ ಪಟ್ಟಿಯನ್ನು ನಿಗಧಿಪಡಿಸುವುದು.
8) 1 ರಿಂದ 10ನೇ ತರಗತಿವರೆಗೆ ಶಾಲೆಯ ವಾರ್ಷಿಕ ಯೋಜನೆಯನ್ನು ಸಮಗ್ರವಾಗಿ ಯೋಜಿಸುವುದು.
9) ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯ ವಾರ್ಷಿಕ ಯೋಜನೆಯನ್ನು ಶಾಲೆಯ ಎಲ್ಲಾ ಶಿಕ್ಷಕರ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸುವುದು.
10) ಎಲ್ಲಾ ಶಿಕ್ಷಕರು, ಪೋಷಕರು ಹಾಗೂ ಸಮುದಾಯದೊಂದಿಗೆ ಸಮನ್ವಯತೆಯನ್ನು ಸಾಧಿಸುವುದು.
11) ಪ್ರೌಢಶಾಲಾ ಶಿಕ್ಷಕರು ಕಾರ್ಯಭಾರಕ್ಕೆ 5–7ನೇ ತರಗತಿವರೆಗೆ ಬೋಧನೆ ಮಾಡಲು ವೇಳಾಪಟ್ಟಿ ನಿಗದಿಪಡಿಸುವುದು.
12) ಪ್ರೌಢಶಾಲಾ ವೃತ್ತಿ, ಸಂಗೀತ, ಚಿತ್ರಕಲೆ ಇತ್ಯಾದಿ ವಿಶೇಷ ಶಿಕ್ಷಕರು 1ರಿಂದ 10ನೇ ತರಗತಿವರೆಗೆ ಎಲ್ಲಾ ತರಗತಿಗಳಿಗೂ ಬೋಧನೆ ಮಾಡಲು ವೇಳಾಪಟ್ಟಿ/ಕೆಲಸ ಹಂಚಿಕೆ ಮಾಡುವುದು.
13) ಎಲ್ಲಾ ಶಿಕ್ಷಕರೊಂದಿಗೆ ಸಮಾಲೋಚಿಸಿ ಶಾಲೆ ಪ್ರಾರಂಭಗೊಂಡ ಒಂದೆರಡು ದಿನಗಳಲ್ಲಿ ಸೇತು ಬಂಧ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
14) ಸೇತು ಬಂಧ ಕಾರ್ಯಕ್ರಮದ ಹಾಗೂ ತ್ರೈಮಾಸಿಕ ಪರೀಕ್ಷೆಯ ಫಲಿತಾಂಶವನ್ನು ವಿಶ್ಲೇಷಿಸುವುದು. ಹಾಗೂ ಅದರ ಹಿನ್ನೆಲೆಯಲ್ಲಿ ವಿಷಯವಾರು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.
15) ಶಾಲೆಯ ಮುಖ್ಯಸ್ಥರು ತಮಗೆ ನಿಗಧಿಯಾದ ಅವಧಿಯಲ್ಲಿ ಕಡ್ಡಾಯವಾಗಿ ಬೋಧನಾ ವಿಷಯ ತೆಗೆದುಕೊಂಡು ಬೋಧಿಸುವುದು.
16) ಪ್ರತಿಯೊಂದು ತರಗತಿಯ ಮಕ್ಕಳ ಶೇಕಡ 2 ಗೃಹ ಪಾಠವನ್ನು ಮುಖ್ಯ ಗುರುಗಳು ಪುನಃ ಪರಿಶೀಲಿಸುವುದು.
17) ಶಿಕ್ಷಕರ ದೈನಂದಿನ ಬೋಧನಾ ಟಿಪ್ಪಣಿಯನ್ನು ಪರಿಶೀಲಿಸುವುದು.
18) ಕಿರಿಯ ಪ್ರಾಥಮಿಕ ತರಗತಿಗಳಲ್ಲಿನ ಮಕ್ಕಳ ಕಲಿಕೆಗೆ ವಿಶೇಷ ಗಮನ ಹರಿಸುವುದು.
19) ದಿನಕ್ಕೆ ಕನಿಷ್ಠ ಇಬ್ಬರು ಶಿಕ್ಷಕರ ಬೋಧನೆಯನ್ನು ಅವಲೋಕನೆ ಹಾಗೂ ಮಾರ್ಗದರ್ಶನ.
20) ಸಮುದಾಯದತ್ತ ಶಾಲೆ ಕಾರ್ಯಕ್ರಮ ಏರ್ಪಡಿಸಿ ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆ ಹಾಗೂ ಪ್ರಗತಿ ಪತ್ರವನ್ನು ಪೋಷಕರ ಗಮನಕ್ಕೆ ತರುವುದು / ವಿತರಿಸುವುದು.
21) ವಿಶೇಷ ನ್ಯೂನತೆಗಳುಳ್ಳ ಮಕ್ಕಳ ಕಡೆ ವಿಶೇಷ ಗಮನ ನೀಡುವುದು.
22) ಪ್ರತಿ ದಿನ, ಪ್ರತಿ ತರಗತಿಯ ಹಾಜರು ಪುಸ್ತಕವನ್ನು ಪರಿಶೀಲಿಸಿ, ಗೈರು ಹಾಜರಾದ ಮಕ್ಕಳನ್ನೂ ಸಹ ಶಾಲೆಗೆ ಬರುವಂತೆ ಮಾಡುವುದು.
23) ಸಂಯುಕ್ತ ಪ್ರೌಢಶಾಲೆಯ ವಾಚನಾಲಯದಲ್ಲಿನ ಪುಸ್ತಕಗಳನ್ನು 1 ರಿಂದ 10ನೇ ತರಗತಿವರೆಗಿನ ಮಕ್ಕಳಿಗೂ ಲಭ್ಯವಾಗುವಂತೆ ವ್ಯವಸ್ಥೆ ಮಾಡುವುದು.
24) ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಿ, ದೈಹಿಕ ಶಿಕ್ಷಕರ ಸೇವೆಯನ್ನು 1 ರಿಂದ 10ನೇ ತರಗತಿವರೆಗಿನ ಎಲ್ಲಾ ಮಕ್ಕಳ ಆರೋಗ್ಯಕ್ಕಾಗಿ ಬಳಸುವುದು.
25) ಗುಣಮಟ್ಟದ ಶಿಕ್ಷಣಕ್ಕೆ ಶಾಲೆಯ ಪ್ರತಿಯೊಬ್ಬ ಶಿಕ್ಷಕರು ಹಾಗೂ ಶಾಲೆಯ ಮುಖ್ಯಸ್ಥರು ಸರಿಸಮಾನರಾಗಿ ಹೊಣೆಗಾರರು.
26) ಶಾಲೆಯ ಗುಣಮಟ್ಟದ ದಾಯಿತ್ವ ಸರ್ವ ಶಿಕ್ಷಕರದಾಗಿರುತ್ತದೆ. ಮುಖ್ಯಸ್ಥರು ಅದರ ಯಜಮಾನ.
27) ಶಾಲಾ ಆರೋಗ್ಯ ಸಪಾಸಣಾ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
28) ಕಾಲಕಾಲಕ್ಕೆ ಇಲಾಖೆ ನೀಡಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.
29) ಸರ್ವ ಶಿಕ್ಷಣ ಅಭಿಯಾನ ಯೋಜನೆ, ಅಕ್ಷರ ದಾಸೋಹ ಯೋಜನೆ, ಕಟ್ಟಡ ನಿರ್ಮಾಣ, ವಿವಿಧ ಅನುದಾನಗಳ ಯೋಜನೆಗಳ ನಿರ್ವಹಣೆ, ಮೇಲ್ವಿಚಾರಣೆ, ಸದ್ಬಳಕೆಗೆ ಕ್ರಮ ವಹಿಸುವುದು.

**11 ಆಡಳಿತಾತ್ಮಕ ಅಧಿಕಾರ :–**

1) 1 ರಿಂದ 10ನೇ ತರಗತಿವರೆಗಿನ ಸಂಯುಕ್ತ ಶಾಲೆಯ ಎಲ್ಲಾ ಶಿಕ್ಷಕರ ಹಾಗೂ ಬೋಧಕೇತರ ಸಿಬ್ಬಂದಿಗಳ ಸೇವಾ ವಹಿಗಳನ್ನು ನಿರ್ವಹಿಸುವುದು.
2) ಒಂದೇ ಆವರಣದಲ್ಲಿ ಶಾಲೆಯಿದ್ದಲ್ಲಿ ಶಿಕ್ಷಕರ ಹಾಜರಾತಿ ವಹಿಯ ನಿರ್ವಹಣೆ ಹಾಗೂ ಬೇರೆ ಬೇರೆ ಕಡೆ ಶಾಲೆಗಳಿದ್ದಲ್ಲಿ ಆ ಶಾಲೆಗಳ ಶಿಕ್ಷಕರ ಹಾಜರಾತಿ ಮೇಲ್ವಿಚಾರಣೆ.
3) 1 ರಿಂದ 10ನೇ ತರಗತಿವರೆಗಿನ ಶಾಲೆಯ ಎಲ್ಲಾ ಶಿಕ್ಷಕರಿಗೆ ಸಾಂಧರ್ಬಿಕ ರಜೆ ಹಾಗೂ ಇತರೆ ರಜೆ ಮಂಜೂರು ಮಾಡುವುದು.

4) ಕಾಲಬದ್ಧ ವೇತನ ಬಡ್ತಿ, ವಿಶೇಷ ವೇತನ ಬಡ್ತಿ ಹಾಗೂ ಇತರ ಸೌಕರ್ಯಗಳ ಸಲುವಾಗಿ ಪ್ರಸ್ತಾವನೆಯನ್ನು ಸಂಬಂಧಿಸಿದವರಿಗೆ ಸಲ್ಲಿಸುವುದು.

5) ರಹಸ್ಯ ವರದಿ ಹಾಗೂ ಆಸ್ತಿ ಹಾಗೂ ಋಣದ ವಿವರ ಪಡೆದು ಸಂಬಂಧಿಸಿದವರಿಗೆ ಕಳುಹಿಸುವುದು.

6) ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ ನೀಡುವುದು. (1–10ನೇ ತರಗತಿಗಳು)

7) ಮೇಲಾಧಿಕಾರಿಗಳಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿ ವರದಿಗಳನ್ನು ಸಲ್ಲಿಸುವುದು.

8) ಎಸ್.ಡಿ.ಎಂ.ಸಿ.ಯ ನಿಯಮದಂತೆ ಸಭೆ ಕರೆದು ನಿರ್ಣಯಗಳ ದಾಖಲೀಕರಣ ಹಾಗೂ ಅನುಷ್ಠಾನ.

9) ಮಾಹಿತಿ ಸಿಂಧು ಹಾಗೂ ಇತರೆ ಯೋಜನೆಗಳ ಅನುಷ್ಠಾನ.

10) ಶಿಕ್ಷಕರಿಗೆ ತರಬೇತಿ ವ್ಯವಸ್ಥೆ ಮಾಡುವುದು. (ಆವಶ್ಯಕತೆಯ ಆಧಾರದ ಮೇಲೆ).

111. **ಹಣಕಾಸಿನ ಅಧಿಕಾರ :–**

1) 1 ರಿಂದ 10ನೇ ತರಗತಿವರೆಗೆ ಸಂಯುಕ್ತ ಪ್ರೌಢಶಾಲೆಗೆ ಎಲ್ಲಾ ಯೋಜನೆಗಳಿಗೆ ಸಮಗ್ರವಾದ ಏಕೈಕ ಸರ್ಕಾರಿ ಹಾಗೂ ಸರ್ಕಾರೇತರ ನಗದು ಪುಸ್ತಕ ಹಾಗೂ ಪೂರಕ ವಹಿಗಳ ನಿರ್ವಹಣೆ.

2) ಎಸ್.ಡಿ.ಎಂ.ಸಿ. ಗೆ ಜಮೆ ಆದ ಹಣ ಹಾಗೂ ಇತರೆ ಹಣಗಳ ಸಕಾಲಿಕ ಸದ್ಬಳಕೆ ಹಾಗೂ ನಿರ್ವಹಣೆ.

3) ವಿದ್ಯಾರ್ಥಿ ವೇತನಗಳ ಆಕರಣೆ ಹಾಗೂ ವಿತರಣೆ.

4) 1 ರಿಂದ 7ನೇ ತರಗತಿವರೆಗಿನ ಎಲ್ಲಾ ಸಿಬ್ಬಂದಿಗಳ ವೇತನ ಡ್ರಾ ಮಾಡುವುದು. ಜಮಾ ,ಮಾಡುವುದು ಹಾಗೂ ಇತರೆ ಸೌಕರ್ಯಗಳ ವಿಲೇವಾರಿ.

5) ಪರೀಕ್ಷಾ ಸಂಬಂಧಿ ಇರಬಹುದಾದ ಯಾವುದೇ ಹಣಕಾಸಿನ ನಿರ್ವಹಣೆ ಹಾಗೂ ಅನುಷ್ಠಾನ.

6) ಟಿ.ಬಿ.ಎಫ್. ಹಾಗೂ ವಿದ್ಯಾರ್ಥಿ ಕಲ್ಯಾಣ ನಿಧಿಗಾಗಿ ನಿಗಧಿತ ಹಣದ ಸಂಗ್ರಹ ಹಾಗೂ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ನೀಡಬೇಕಾದ ಸೌಲಭ್ಯಗಳ ನಿರ್ವಹಣೆ.

**ಸಹಿ/–**

(ಎಂ. ಪ್ರಭುಸ್ವಾಮಿ)

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ) ಶಿಕ್ಷಣ ಇಲಾಖೆ

## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ,
## ಆಯುಕ್ತರ ಕಛೇರಿ, ನೃಪತುಂಗ ರಸ್ತೆಗೆ, ಬೆಂಗಳೂರು–1

ಸಂಖ್ಯೆ : ಸಿ1(3) ಆ.ಋ.ಪ.–10/99–2000 ದಿನಾಂಕ : 10–05–2007

**ಸುತ್ತೋಲೆ**

**ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್–ಎ ಮತ್ತು ಬಿ ಶ್ರೇಣಿಯ ಅಧಿಕಾರಿಗಳ ಆಸ್ತಿ ಮತ್ತು ಹೊಣೆಗಾರಿಕೆ ತಃಖ್ತೆಯನ್ನು ಪ್ರತಿ ವರ್ಷ ಏಪ್ರಿಲ್ 30ರೊಳಗೆ ಸಲ್ಲಿಸುವ ಬಗ್ಗೆ.**

ಉಲ್ಲೇಖ: 1. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ/ಸೇನಿಸಿ–92 ದಿನಾಂಕ 26–04–94

2. ಸರ್ಕಾರದ ಸುತ್ತೋಲೆ ಸಂಖ್ಯೆ : ಇಡಿ 62 ಎಇಎಆರ್ 2002 ದಿ: 22–7–2002.

3. ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ 21–11–2002. 30–10–2003 ಹಾಗೂ 30–03–2004

ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ 1966ರ ಉಪ ನಿಯಮ 22ರ ಪ್ರಕಾರ ಎಲ್ಲಾ ಸರ್ಕಾರಿ ನೌಕರರು ಮೊದಲು ಸೇವೆಗೆ ಸೇರಿದಾಗ ಮತ್ತು ಪ್ರತಿ ವರ್ಷ ಮಾರ್ಚ್ 31ರಲ್ಲಿದ್ದಂತೆ ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಆಸ್ತಿ ಮತ್ತು ಋಣ ಪಟ್ಟಿಯನ್ನು ಅಗತ್ಯವಾಗಿ ಸಲ್ಲಿಸುವುದು ಕಡ್ಡಾಯವಾಗಿದೆ. ಈ ನಿಯಮದ ಉಪ ನಿಯಮ 23ರ ಪ್ರಕಾರ ಯಾವುದೇ ಸರ್ಕಾರಿ ನೌಕರರು (ಗ್ರೂಪ್–ಎ ಅಧಿಕಾರಿಗಳಾಗಿದ್ದಲ್ಲಿ ರೂ. 2000–00, ಗ್ರೂಪ್–ಬಿ ಅಧಿಕಾರಿಗಳಾಗಿದ್ದಲ್ಲಿ ರೂ. 1000–00ಕ್ಕೆ ಮೇಲ್ಪಟ್ಟು) (ಬಟ್ಟೆ, ಪುಸ್ತಕ, ಆಹಾರ ಸಾಮಗ್ರಿ ಹೊರತುಪಡಿಸಿ) ಉಳಿದ ಯಾವುದೇ ಚರ/ಸ್ಥಿರ ಆಸ್ತಿ ಗಳಿಸುವ / ಖರೀದಿಸುವ ಅಥವಾ ಮಾರಾಟ ಮಾಡುವ/ಸಾಲ ಪಡೆಯುವ ಮೊದಲು ಕೆಳಕಾಣಿಸಿರುವ ಪ್ರಾಧಿಕಾರದ ಪೂರ್ವಾನುಮತಿ ಪಡೆಯತಕ್ಕದ್ದು.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ "ಎ" ಮತ್ತು "ಬಿ" ಶ್ರೇಣಿಯ ಅಧಿಕಾರಿಗಳು ಪ್ರತಿ ವರ್ಷ ಏಪ್ರಿಲ್ 30ರೊಳಗಾಗಿ ನಿಗದಿತ ನಮೂನೆಯಲ್ಲಿ ಪೂರ್ಣವಾದ ಮಾಹಿತಿಗಳನ್ನು ಭರ್ತಿ ಮಾಡಿ ಪೂರಕ ದಾಖಲೆಗಳ ಪ್ರತಿಗಳೊಂದಿಗೆ

ಆಸ್ತಿ–ಋಣ ಪಟ್ಟಿಯನ್ನು ಸಲ್ಲಿಸುವ ಬಗ್ಗೆ ಮಾರ್ಗಸೂಚಿಯನ್ನು ಈ ಕಛೇರಿಯ ಉಲ್ಲೇಖಿತ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಲಾಗಿದೆ. ಆದರೂ ಸಹ, ಕೆಲವು ಅಧಿಕಾರಿಗಳು ನಿಗದಿತ ದಿನಾಂದೊಳಗಾಗಿ ತಮ್ಮ ಆಸ್ತಿ ಋಣಪಟ್ಟಿಯನ್ನು ಸಲ್ಲಿಸದೇ ಇರುವುದು ಮತ್ತು ಅಪೂರ್ಣವಾದ ಮಾಹಿತಿಗಳನ್ನು ಒದಗಿಸುವುದನ್ನು ತೀವ್ರವಾಗಿ ಗಮನಿಸಲಾಗಿದೆ. ಈ ಬಗ್ಗೆ ಅನೇಕ ಬಾರಿ ಸುತ್ತೋಲೆಗಳನ್ನು ಹೊರಡಿಸಿ ಆಸ್ತಿ – ಋಣ ಪಟ್ಟಿ ದಾಖಲೆಗಳನ್ನು ಸಲ್ಲಿಸುವ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದರೂ ಸಹ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವುದು, ಮುಕ್ತಾಯಗೊಂಡ ಸಾಲಿನ ಅಂತಹ ತಃಖ್ತೆಯನ್ನು ಮರು ವರ್ಷದ ಉದ್ದಕ್ಕೂ ಸಲ್ಲಿಸುವುದನ್ನು ಹಾಗೂ ಒಟ್ಟಿಗೆ 5–6 ವರ್ಷಗಳ ತಃಖ್ತೆಗಳನ್ನು ಸಲ್ಲಿಸುವುದನ್ನು ಸಹ ತೀವ್ರವಾಗಿ ಗಮನಿಸಲಾಗಿದೆ.

ಈಗಾಗಲೇ ಉಲ್ಲೇಖಿತ ಈ ಕಛೇರಿಯ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಈ ಇಲಾಖೆ "ಎ" ಮತ್ತು "ಬಿ" ಶ್ರೇಣಿಯ ಅಧಿಕಾರಿಗಳು ಅವರ ವೃಂದದ ಮುಂದೆ ಸೂಚಿಸಿರುವ ಸಕ್ಷಮ ಪ್ರಾಧಿಕಾರಕ್ಕೆ ದಿನಾಂಕ : 31–03–2007ಕ್ಕೆ ಇದ್ದಂತೆ ಆಸ್ತಿ –ಋಣ ಪಟ್ಟಿಯನ್ನು ದಿನಾಂಕ: 30–04–2007ರೊಳಗೆ ಪೂರಕ ದಾಖಲೆಗಳೊಂದಿಗೆ ಮತ್ತು ಈ ಸಾಲಿನಲ್ಲಿ ಪಡೆಯಲಾದ ವೇತನ ವಿವರಗಳು, ಕಡಿತ, ವರಮಾನ ತೆರಿಗೆ, ಇತ್ಯಾದಿ ವಿವರಗಳನ್ನು ತೋರಿಸುವ ತಃಖ್ತೆಯೊಂದಿಗೆ ನೇರವಾಗಿ ಸಲ್ಲಿಸುವಂತೆ ಮತ್ತು ಈ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸುಚಿಸಿದೆ.

| | ಅಧಿಕಾರಿಗಳ ವೃಂದ | ಸಲ್ಲಿಸಬೇಕಾದ ಪ್ರಾಧಿಕಾರ |
|---|---|---|
| **ಅ)** | **ಗ್ರೂಪ್ –ಎ ವೃಂದದ ಅಧಿಕಾರಿಗಳು (ಹಿರಿಯ ಶ್ರೇಣಿ)** | |
| 1. | ನಿರ್ದೇಶಕರು | ಸರ್ಕಾರದ ಕಾರ್ಯದರ್ಶಿಗಳು<br>ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,<br>ವಿಧಾನಸೌಧ, ಬೆಂಗಳೂರು |
| 2. | ಸಹನಿರ್ದೇಶಕರು ಮತ್ತು ಉಪ ನಿರ್ದೇಶಕರು ಹಾಗೂ ತತ್ಸಮಾನ | ಸರ್ಕಾರದ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು |
| **ಆ.** | **ಗ್ರೂಪ್ ಎ ಕಿರಿಯ ಶ್ರೇಣಿ ಅಧಿಕಾರಿಗಳು (ಶಿಕ್ಷಣಾಧಿಕಾರಿಗಳು ಮತ್ತು ತತ್ಸಮಾನ ಹುದ್ದೆ)** | |
| 1. | ಬೆಂಗಳೂರು ಮತ್ತು ಮೈಸೂರು ವಿಭಾಗದ ಅಧಿಕಾರಿಗಳು | ಆಯುಕ್ತರು<br>ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ,<br>ಬೆಂಗಳೂರು |
| 2. | ಬೆಳಗಾಂ ಕಂದಾಯ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು | ಅಪರ ಆಯುಕ್ತರು<br>ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ<br>ಧಾರವಾಡ |
| 3. | ಗುಲ್ಬರ್ಗ ಕಂದಾಯ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು | ಅಪರ ಆಯುಕ್ತರು<br>ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ<br>ಗುಲ್ಬರ್ಗ |
| ಇ. | ಗ್ರೂಪ್–ಬಿ ಶ್ರೇಣಿಯ ಅಧಿಕಾರಿಗಳು ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು. | ಸಂಬಂಧಪಟ್ಟ ವಿಭಾಗೀಯ ಸಹ ನಿರ್ದೇಶಕರುಗಳಿಗೆ |

ಮೇಲೆ ತಿಳಿಸಿರುವಂತೆ ಆಸ್ತಿ ಮತ್ತು ಋಣಪಟ್ಟಿಗಳನ್ನು ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸೂಕ್ತ ರೀತಿಯಲ್ಲಿ ಭರ್ತಿ ಮಾಡಿ, ಪ್ರತಿ ವರ್ಷ ಏಪ್ರಿಲ್ 30ರೊಳಗೆ ತಪ್ಪದೇ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ. ಒಂದು ವೇಳೆ ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದಲ್ಲಿ ಅಥವಾ ಪೂರ್ಣವಾದ ಮಾಹಿತಿಗಳನ್ನು ಒದಗಿಸದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕ.ನಾ.ಸೇ. ನಿಯಮ (ನಡತೆ) 1966ರ ನಿಯಮ ಉಲ್ಲಂಘಿಸಿರುವರೆಂದು ಭಾವಿಸಿ ನಿಯಮಾನುಸಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮತ್ತೊಮ್ಮೆ ಸ್ಪಷ್ಟವಾಗಿ ತಿಳಿಸಿದೆ.

**ಸಹಿ/–**
(ಬಿ. ನಂಜುಂಡೇಶ್ವರ)
ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಪರವಾಗಿ

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ,
# ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ : ಸಂಗೀತ ಶಿಕ್ಷಣ 1, ಸಂ. ಶಿ. ಉ. 7:2007-08 ದಿನಾಂಕ : 05-05-2007

ಸುತ್ತೋಲೆ

**ವಿಷಯ : ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸಂಗೀತ ಶಿಕ್ಷಣ ಉತ್ತಮಪಡಿಸುವ ಬಗ್ಗೆ.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸಂಗೀತ ಶಿಕ್ಷಣವು ಮಕ್ಕಳ ಮಾನಸಿಕ ಹಾಗೂ ನೈತಿಕ ಸ್ಥಿತಿಗತಿಗಳನ್ನು ಮೇಲ್ದರ್ಜೆಗೇರಿಸಲು ಪೂರಕವಾಗಿದೆ. ಅಲ್ಲದೆ ಸಾಮಾನ್ಯ ಶಿಕ್ಷಣಕ್ಕೆ ಸಂಗೀತ ಶಿಕ್ಷಣವನ್ನು ಅತ್ಯಂತ ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ಅಲ್ಲದೆ ದೇಶದ ಸಂಸ್ಕೃತಿ ಮತ್ತು ಪರಂಪರೆ ಉಳಿಸಿ ಬೆಳೆಸುವಲ್ಲಿ ಸಂಗೀತ ಶಿಕ್ಷಣ ಮಹತ್ತರ ಪಾತ್ರ ಹೊಂದಿದೆ. ಈ ಎಲ್ಲಾ ದೃಷ್ಟಿಯಿಂದ ಸಂಗೀತ ಶಿಕ್ಷಣವು ವ್ಯವಸ್ಥಿತವಾಗಿ ನಡೆಯುವುದು ಅಗತ್ಯವಾಗಿದೆ. ಆದುದರಿಂದ ಕೆಳಗಿನ ಮಾರ್ಗಸೂಚಿಗಳನ್ನು ಹೊರಡಿಸಿ ತಪ್ಪದೆ ಪಾಲಿಸಲು ಸೂಚಿಸಿದೆ.

1. ಸಂಗೀತ ಶಿಕ್ಷಕರು ಪೂರ್ವ ತಯಾರಿ ನಡೆಸಿಕೊಂಡು ತರಗತಿ ಪ್ರವೇಶಿಸಬೇಕು.
2. ಪಾಠ ಟಿಪ್ಪಣಿ, ಪಾಠ ಯೋಜನೆ ಹಾಗೂ ಪಾಠ ಹಂಚಿಕೆ ತಪ್ಪದೆ ವ್ಯವಸ್ಥಿತವಾಗಿ ತಯಾರು ಮಾಡಿಕೊಂಡು ಆ ಪ್ರಕಾರವೇ ಬೋಧಿಸಬೇಕು. ಅಂಧ ಶಿಕ್ಷಕರು ಸಹ ಸಹಾಯಕರಿಂದ ಮೇಲಿನ ದಾಖಲೆಗಳನ್ನು ತಯಾರಿಸಿಕೊಳ್ಳಬೇಕು. ತರಗತಿ ಕೊಠಡಿಯೊಳಗೆ ಮಕ್ಕಳ ಮುಂದೆ ಅಸಹಾಯಕ ಅಂಧರಾಗಲೇ ಕೂಡದು.
3. ದಾಖಲೆಯು ನಿಗದಿ ಪಡಿಸಿರುವ ಪಠ್ಯ ವಸ್ತು (ಖಥಿಟಟಚಿಭಣ) ತಪ್ಪದೆ ಪಾಲಿಸಬೇಕು. ಪಠ್ಯ ವಸ್ತುವಿನಲ್ಲಿನ ಪಾಠಗಳು ಮತ್ತು ಸೂಚನೆಗಳನ್ನು ತಪ್ಪದೇ ಅನುಸರಿಸಬೇಕು.
4. ಸಂಗೀತ ಶಿಕ್ಷಕರಿಗೆ 1 ತರಗತಿ / ವಿಭಾಗ ವಾರದಲ್ಲಿ ಕನಿಷ್ಠ 2 ಅವಧಿ ನೀಡಬೇಕು. ಲಭ್ಯತೆ ನೋಡಿಕೊಂಡು ಹೆಚ್ಚು ನೀಡಬಹುದು.
5. ಶಾಲಾ ಮುಖ್ಯಸ್ಥರು ನಿಯಮಿತವಾಗಿ ಇತರ ಶಿಕ್ಷಕರುಗಳಂತೆ ಸಂಗೀತ ಶಿಕ್ಷಕರ ದಾಖಲೆಗಳು ಮತ್ತು ತರಗತಿ ತಪಾಸಣೆ ನಿಯಮಿತವಾಗಿ ಪರಿಶೀಲಿಸಬೇಕು.
6. ಬಿಇಡಿ/ಡಿಇಡಿ ತರಬೇತಿ ಶಿಕ್ಷಕರು ಶಾಲೆಯಲ್ಲಿ ಬೋಧನ ಅಭ್ಯಾಸದಲ್ಲಿ ತೊಡಗಿಸಿದಾಗ ಸಂಗೀತ ಶಿಕ್ಷಕರ ಎಲ್ಲಾ ಅವಧಿಗಳನ್ನು ತರಬೇತಿ ಶಿಕ್ಷಕರಿಗೆ ನೀಡದೆ ಕನಿಷ್ಠ 1 ಅವಧಿಯಾದರೂ (ವಾರದಲ್ಲಿ) ಸಂಗೀತ ಶಿಕ್ಷಕರಿಗೆ ಸಿಗುವಂತೆ ವ್ಯವಸ್ಥೆ ಮಾಡುವುದು.
7. ಇಲಾಖೆಯ ಜೆಡಿಪಿಐ, ಡಿಡಿಪಿಐ ಹಾಗೂ ಬಿಇಓ, ಕಛೇರಿಯ ಎಲ್ಲಾ ತಪಾಸಣಾ ಅಧಿಕಾರಿಗಳು ಪಾಠ ಪರಿಶೀಲನೆ ಸಾಧ್ಯವಿಲ್ಲದಿದ್ದರೂ ದಾಖಲಾತಿಗಳನ್ನು ಪರಿಶೀಲಿಸಿ ಕಟ್ಟುನಿಟ್ಟಿನ ಸೂಚನೆ ನೀಡುವುದು.
8. ಇತರ ವಿಷಯಗಳ ಬೋಧನೆಗೆ ತೊಂದರೆಯಾಗದಂತೆ ಸಂಗೀತ ಬೋಧನೆ ಮಾಡಲು ಸಾಧ್ಯವಾದರೆ 1 ಕೊಠಡಿಯನ್ನು ಒದಗಿಸುವುದು.

**ವಿಶೇಷ ಸೂಚನೆ :**

ಸಂಗೀತ ಶಿಕ್ಷಣಕ್ಕೆ ಸರ್ಕಾರವು ಸಾಕಷ್ಟು ಒತ್ತು ನೀಡುತ್ತಿದ್ದು ಮಕ್ಕಳಿಗೆ ಸಂಗೀತ ಶಿಕ್ಷಣವನ್ನು ಸರ್ಕಾರದ ಉದ್ದೇಶದಂತೆ ನಿರೀಕ್ಷಿತ ಮಟ್ಟದಲ್ಲಿ ತಲುಪುವುದು ಅಗತ್ಯವಾಗಿದೆ. ಆದ ಕಾರಣ ಮೇಲಿನ ಎಲ್ಲಾ ಅಂಶಗಳು ಪಾಲನೆಯಾಗುವಂತೆ ಕ್ರಮ ಕೈಗೊಳ್ಳುವುದು. ಯಾವುದೇ ಶಿಕ್ಷಕ ಉದಾಸೀನ ಅಥವಾ ಕರ್ತವ್ಯಲೋಪ ಎಸಗಿದರೆ ತಕ್ಷಣವೇ ಈ ಕಛೇರಿಗೆ ಸ್ಪಷ್ಟ ಅಭಿಪ್ರಾಯದೊಡನೆ ವರದಿ ಮಾಡುವುದು. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರು, ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.

**ಸಹಿ/-**
(ಚಿದ್ರೆ ಶಂಕರಯ್ಯಸ್ವಾಮಿ)
ನಿರ್ದೇಶಕರು ಪ್ರೌಢಶಿಕ್ಷಣ

# ಶಿಕ್ಷಣವಾರ್ತೆ ಉಚಿತ ......

**2007 ಮತ್ತು 08 ನೇ ಸಾಲಿನ ಶಿಕ್ಷಣವಾರ್ತೆಗಾಗಿ ಯಾವುದೇ ಸೇವಾ ಶುಲ್ಕ ಇರುವುದಿಲ್ಲ. ಆದಾಗ್ಯೂ ಯಾರಾದರೂಸೇವಾಶುಲ್ಕ ರೂ.15 ವಸೂಲಿ ಮಾಡುತ್ತಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತಿನಕ್ರಮ ಕೈಗೊಳ್ಳಲಾಗುವುದು**

**-ಸಂಪಾದಕರು**